# <u>ಕರ್ನಾಟಕ ವಿಧಾನ ಪರಿಷತ್ತು</u>

| | | | |
|---|---|---|---|
| 01. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 405 |
| 02. | ಮಾನ್ಯ ವಿಧಾನ ಪರಿಷತ್ತು ಸದಸ್ಯರ ಹೆಸರು | : | ಡಾ: ವೈ.ಎ.ನಾರಾಯಣಸ್ವಾಮಿ<br>(ಶಿಕ್ಷಕರ ಕ್ಷೇತ್ರ) |
| 03. | ಉತ್ತರಿಸುವ ದಿನಾಂಕ | : | 07-12-2023 |
| 04. | ಉತ್ತರಿಸುವ ಸಚಿವರು. | : | ಗೃಹ ಸಚಿವರು. |

<table>
<tr><th>ಕ್ರ.<br>ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಕಳೆದ 3 ವರ್ಷಗಳಿಂದ ಕೋಲಾರ ಜಿಲ್ಲೆಯಲ್ಲಿ ನಡೆದಿರುವ ಕೊಲೆಗಳ ಸಂಖ್ಯೆಯೆಷ್ಟು; ಘಟನೆವಾರು ವಿವರಗಳನ್ನು ನೀಡುವುದು;</td><td rowspan="2">ಕಳೆದ 3 ವರ್ಷಗಳಿಂದ ಕೋಲಾರ ಜಿಲ್ಲೆಯಲ್ಲಿ ನಡೆದಿರುವ ಕೊಲೆಗಳ ಸಂಖ್ಯೆ ಹಾಗೂ ಕೊಲೆಗಳು ನಡೆದಿರುವುದಕ್ಕೆ ಕಾರಣಗಳ ವಿವರಗಳು ಘಟನೆವಾರು ಮತ್ತು ವರ್ಷವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.<br><br>ಕಳೆದ 3 ವರ್ಷಗಳಲ್ಲಿ ದಾಖಲಾದ ಪ್ರಕರಣಗಳಲ್ಲಿ ಕಾನೂನು ರೀತ್ಯಾ ಕ್ರಮ ಕೈಗೊಂಡು, ಈ ಕೆಳಕಂಡಂತೆ ಪ್ರಕರಣಗಳನ್ನು ಪತ್ತೆ ಹಚ್ಚಿ, ಆರೋಪಿಗಳನ್ನು ದಸ್ತಗಿರಿ ಮಾಡಲಾಗಿರುತ್ತದೆ.
<table>
<tr><th>ವರ್ಷ</th><th>ಪತ್ತೆ ಹಚ್ಚಲಾದ ಪ್ರಕರಣಗಳು</th><th>ದಸ್ತಗಿರಿ ಮಾಡಲಾದ ಆರೋಪಿಗಳ ಸಂಖ್ಯೆ</th></tr>
<tr><td>2020</td><td>28</td><td>55</td></tr>
<tr><td>2021</td><td>27</td><td>80</td></tr>
<tr><td>2022</td><td>27</td><td>74</td></tr>
<tr><td>2023 (ನವಂಬರ್ 25 ರವರೆಗೆ)</td><td>34</td><td>70</td></tr>
</table></td></tr>
<tr><td>ಆ</td><td>ಈ ಕೊಲೆಗಳು ನಡೆದಿರುವುದಕ್ಕೆ ಕಾರಣಗಳೇನು; ಹಾಗೂ ಇದುವರೆಗೂ ಈ ಪ್ರಕರಣಗಳ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು;</td></tr>
<tr><td>ಇ</td><td>ಕೋಲಾರ ಜಿಲ್ಲೆಯಲ್ಲಿ 18 ವರ್ಷಕ್ಕಿಂತ ಕಡಿಮೆಯಿರುವ ವ್ಯಕ್ತಿಗಳು ಇಂತಹ ಅಪರಾಧಗಳಲ್ಲಿ ಭಾಗಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದಕ್ಕೆ ಕಾರಣ ಏನು;</td><td>ಹೌದು,<br>2023ನೇ ಸಾಲಿನಲ್ಲಿ ಕೋಲಾರ ನಗರ ಪೊಲೀಸ್ ಠಾಣೆಯಲ್ಲಿ ಮೊ.ಸಂ. 211/2023ರಲ್ಲಿ ಒಂದು ಪ್ರಕರಣ ದಾಖಲಾಗಿದ್ದು, ಸದರಿ ಪ್ರಕರಣದಲ್ಲಿ 04 ಜನರು 18 ವರ್ಷಕ್ಕಿಂತ ಕಡಿಮೆಯುಳ್ಳ ಆರೋಪಿಗಳು ಇರುತ್ತಾರೆ. ಕ್ಷುಲ್ಲಕ ಕಾರಣಕ್ಕಾಗಿ ಅಪರಾಧವೆಸಗಿದ್ದು, ಪ್ರಸ್ತುತ ಆರೋಪಿಗಳು ಹಾಲಿ ನ್ಯಾಯಾಂಗ ಬಂಧನದಲ್ಲಿರುತ್ತಾರೆ.</td></tr>
</table>

| | | |
|---|---|---|
| ಈ | ಇಂತಹ ಅಪರಾಧಗಳು ನಡೆಯದಿರಲು ಸರ್ಕಾರ ಕೈಗೊಂಡ ಕ್ರಮವೇನು? | ಇಂತಹ ಪ್ರಕರಣಗಳನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳ ವಿವರಗಳನ್ನು ಈ ಕೆಳಕಂಡಂತಿರುತ್ತವೆ.<br>➢ ಜಿಲ್ಲೆಯಲ್ಲಿ ಕೊಲೆ, ಕೊಲೆಗೆ ಪ್ರಯತ್ನ, ದರೋಡೆ, ಸುಲಿಗೆ, ರಾಜಕೀಯ ಗಲಭೆ ಇತ್ಯಾಧಿ ಪ್ರಕರಣಗಳಲ್ಲಿ ಭಾಗಿಯಾಗಿರುವ ಎಲ್ಲಾ ಆರೋಪಿಗಳ ವಿರುದ್ಧ ರೌಡಿ ಹಾಳೆಯನ್ನು ತೆರೆದು ನಿಗಾವಣೆ ವಹಿಸಲಾಗುತ್ತಿದೆ.<br>➢ ಜಿಲ್ಲೆಯಲ್ಲಿ ನಿರ್ವಹಿಸುತ್ತಿರುವ ರೌಡಿಗಳ ಪೇರೆಡ್ ನಡೆಸಿ ರೌಡಿ ಚಟುವಟಿಕೆಗಳಲ್ಲಿ ಭಾಗಿಯಾಗದಂತೆ ಸೂಕ್ತ ಎಚ್ಚರಿಕೆಗಳನ್ನು ನೀಡಲಾಗಿದೆ.<br>➢ ರೌಡಿ ಆಸಾಮಿಗಳ ವಿರುದ್ಧ ಭದ್ರತಾ ಕಾಯಿದೆ ಅಡಿಯಲ್ಲಿ ಪ್ರಕರಣಗಳನ್ನು ದಾಖಲಿಸಿ ಮುಚ್ಚಳಿಕೆ ಪಡೆದು ರೌಡಿ ಚಟುವಟಿಕೆಗಳಲ್ಲಿ ಭಾಗಿಯಾಗದಂತೆ ಕ್ರಮಕೈಗೊಂಡಿರುತ್ತದೆ.<br>➢ ಜಿಲ್ಲೆಯಲ್ಲಿ ಸಂಘಟಿತ ಅಪರಾಧಗಳ ಮಾಹಿತಿಗಳನ್ನು ಸಂಗ್ರಹಿಸಿ ದಾಳಿಗಳನ್ನು ನಡೆಸಿ ಪ್ರಕರಣಗಳನ್ನು ದಾಖಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗಿರುತ್ತದೆ.<br>➢ ಪೊಲೀಸ್ ಪ್ರಧಾನ ಕಛೇರಿಯ ಸ್ಥಾಯಿ ಆದೇಶ ಸಂ. 1032 ರಂತೆ ಜಿಲ್ಲೆಯ ಎಲ್ಲಾ ಗ್ರಾಮ/ಮೊಹಲ್ಲಾಗಳಿಗೆ ಪೊಲೀಸ್ ಸಿಬ್ಬಂದಿಗಳನ್ನು ನೇಮಕ ಮಾಡಿದ್ದು, ಸದರಿ ಸಿಬ್ಬಂದಿರವರು ನೇಮಿಸಿ ಗ್ರಾಮ/ ಮೊಹಲ್ಲಾಗಳಿಗೆ ಭೇಟಿ ನೀಡಿ ಸಾರ್ವಜನಿಕರೊಂದಿಗೆ ಚರ್ಚಿಸಿ ಅವರ ಸಮಸ್ಯೆಗಳಿಗೆ ಸ್ಪಂದಿಸ ಲಾಗುತ್ತಿರುತ್ತದೆ.<br>➢ ಗಸ್ತಿಗೆ ನೇಮಿಸಿದ ಸಿಬ್ಬಂದಿಗಳು ಗಸ್ತಿನ ವ್ಯಾಪ್ತಿಯಲ್ಲಿ ನಡೆಯುವ ಅಕ್ರಮ ಚಟುವಟಿಕೆಗಳ ಮಾಹಿತಿಗಳನ್ನು ಸಂಗ್ರಹಿಸಿ ಅಧಿಕಾರಿಗಳಿಂದ ದಾಳಿ ನಡೆಸಿ ಸೂಕ್ತ ಕ್ರಮ ಕೈಗೊಳ್ಳಲಾಗಿರುತ್ತದೆ.<br>➢ ಪ್ರತಿ ನಿತ್ಯ ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಬೆಳಗ್ಗೆ ಮತ್ತು ಸಂಜೆಯ ಸಮಯದಲ್ಲಿ ವಿಶೇಷ ಗಸ್ತು ನಿರ್ವಹಿಸಿ ಅಪರಾಧ ಚಟುವಟಿಕೆಗಳನ್ನು ನಿಯಂತ್ರಿಸಲಾಗುತ್ತಿದೆ.<br>➢ ಪೊಲೀಸ್ ಅಧಿಕಾರಿಗಳನ್ನು ಪ್ರತಿ ನಿತ್ಯ ಜಿಲ್ಲಾ ಮಟ್ಟದಲ್ಲಿ ಮತ್ತು ಠಾಣಾ ಮಟ್ಟದಲ್ಲಿ ಗಸ್ತಿಗೆ ನೇಮಕ ಮಾಡಿ ಅಪರಾಧ ಚಟುವಟಿಕೆಗಳು |

| | | |
|---|---|---|
| | | ವರದಿಯಾಗದಂತೆ ಕ್ರಮಕೈಗೊಳ್ಳಲಾಗುತ್ತಿದೆ.<br>➢ ಶಾಲಾ-ಕಾಲೇಜುಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳಿಗೆ ಕಾನೂನು ಅರಿವು ಕಾರ್ಯಕ್ರಮಗಳು ಮತ್ತು ಮಾದಕ ದ್ರವ್ಯಗಳ ಸೇವನೆಯ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.<br>➢ ಜಿಲ್ಲೆಯ ಗಡಿ ಭಾಗಗಳಲ್ಲಿ ಚಕ್ ಪೋಸ್ಟ್‌ಗಳನ್ನು ನಿರ್ಮಿಸಿ ಹೊರ ರಾಜ್ಯಗಳಿಂದ ಬರುವ ವಾಹನ ಗಳನ್ನು ತಪಾಸಣೆ ಮಾಡಿ ಜಿಲ್ಲೆಯಲ್ಲಿ ಅಪರಾಧಗಳು ನಡೆಯದಂತೆ ಕ್ರಮ ಕೈಗೊಂಡಿರುತ್ತದೆ. |

**HD/31/PCQ/2023**

(ಡಾ:ಜಿ.ಪರಮೇಶ್ವರ)
**ಗೃಹ ಸಚಿವರು**

## ಅನುಬಂಧ

ಕೋಲಾರ ಜಿಲ್ಲೆಯಲ್ಲಿ 2020, 2021, 2022 ಮತ್ತು 2023 (ನವಂಬರ್ 25 ರವರೆಗೆ) ನಡೆದಿರುವ ಕೊಲೆಗಳಿಗೆ ಸಂಬಂಧಿಸಿದ ಠಾಣಾವಾರು, ಘಟನೆಯವಾರು ಮತ ಕೊಲೆಗೆ ಕಾರಣಗಳ ಮಾಹಿತಿ ಈ ಕೆಳಕಂಡಂತಿದೆ.

## 2020

| ಕ್ರ.ಸಂ. | ಪೊಲೀಸ್ ಠಾಣೆ ಹೆಸರು | ಮೊಸಂ ಮತ್ತು ಕಲಂ | ಘಟನೆಯ ವಿವರ | ಕೊಲೆಗೆ ಕಾರಣ |
|---|---|---|---|---|
| 1 | ಮುಳಬಾಗಿಲು ನಗರ ಪೊಲೀಸ್ ಠಾಣೆ | 67/2020 ಕಲಂ 302 ಐ.ಪಿ.ಸಿ | ಪಿರ್ಯಾದಿ ಅಕ್ಕನ ಮಗನಾದ ನಾಗರಾಜನನ್ನು ಸಾಕಿಕೊಂಡಿದ್ದು, ನಾಗರಾಜನಿಂದ ಅಪ್ಪಿ ರವರು ಹಣ ಪಡೆದುಕೊಂಡಿದ್ದು ಈ ವಿಚಾರವಲ್ಲಿ ಅವರಿಬ್ಬರು ಜಗಳ ಮಾಡಿಕೊಂಡಿದ್ದು, ದಿ.15-06-2020 ರಂದು ರಾತ್ರಿ 10-00 ಗಂಟೆಯಲ್ಲಿ ನಾಗರಾಜ ಊಟ ಮಾಡುತ್ತಿದ್ದಾಗ ಆತನ ಪೋನ್‌ಗೆ ಯಾರೋ ಕರೆ ಮಾಡಿ ಬರುವಂತೆ ತಿಳಿಸಿದ್ದು, ಊಟ ಬಿಟ್ಟು ಎದ್ದು ಹೋಗಿದ್ದು ನಂತರ 10-20 ಗಂಟೆಯಲ್ಲಿ ಸುಬ್ರಮಣಿ ಮನೆಗೆ ಬಂದು ನಾಗರಾಜ ಗೋಪಾಲಸ್ವಾಮಿ ದೇವಸ್ಥಾನಕ್ಕೆ ಹೋಗುವ ರಸ್ತೆಯಲ್ಲಿ ರಕ್ತದ ಮಡುವಿನಲ್ಲಿ ಬಿದ್ದಿರುವುದಾಗಿ ತಿಳಿಸಿದ್ದು, ಕೂಡಲೇ ಪಿರ್ಯಾದಿ ಹೋಗಿ ನೋಡಲಾಗಿ ನಾಗರಾಜ ರಸ್ತೆಯಲ್ಲಿ ರಕ್ತಸ್ರಾವವಾಗಿ ಸ್ಥಳದಲ್ಲಿಯೇ ಮೃತಪಟ್ಟಿದ್ದು ದ್ವೇಷದ ಹಿನ್ನಲೆಯಲ್ಲಿ ಅಪ್ಪಿ ಇತರರೊಂದಿಗೆ ಸೇರಿ ಕೊಲೆ ಮಾಡಿರುವುದಾಗಿ ದೂರು. | ಹಣದ ವಿಚಾರಕ್ಕಾಗಿ |
| 2 | ಮುಳಬಾಗಲು ನಗರ ಠಾಣೆ | ಮೊ.ಸಂ.67/2020 ಕಲಂ 302 ಐಪಿಸಿ | ದಿನಾಂಕ :15-6-2020 ರಂದು ರಾತ್ರಿಸುಮಾರು 10-00 ಗಂಟೆ ಸಮಯದಲ್ಲಿ ಆರೋಪಿಯು ಹಿಂದಿನ ದ್ವೇಷದಿಂದ ನಾಗರಾಜರವರನ್ನು ಪಳ್ಳಿಗರಪಾಳ್ಯದಲ್ಲಿಅವರ ಮನೆಯಲ್ಲಿ ಹೋಗಿ ಕಬ್ಬಿಣದ ಗಡಾರಿಯಿಂದ ಆತನ ತಲೆಗೆ ಹೊಡೆದು ಗಾಯ ಪಡಿಸಿ ಕೊಲೆ ಮಾಡಿರುತ್ತಾನೆ. | ಅಕ್ರಮ ಸಂಬಂದ ಹಿನ್ನಲೆ |
| 3 | ನಂಗಲಿ ಪೊಲೀಸ್ ಠಾಣೆ | ಮೊ.ಸಂ.61/2020 ಕಲಂ 302-201 ಐಪಿಸಿ | ದಿನಾಂಕ;ಯಾರೋ ದುರಾತ್ಮರು ಒಬ್ಬ ಸುಮಾರು 28 ರಿಂದ 30 ವರ್ಷದ ಅಪರಿಚಿತ ಮಹಿಳೆಯನ್ನು ಕೊಲೆ ಮಾಡಿ ನಂಗಲಿ ಠಾಣೆ ಸರಹದ್ದು ಅಂಬ್ಲಿಕಲ್ ಕ್ರಾಸ್ ಬಳಿ ಇರು ವ ಮೋರಿಯ ಒಳಗೆ ಹಾಕಿ ಗಿಡಗಳಿಂದ ಮೋರಿ ಮುಚ್ಚಿ ಸಾಕ್ಷ್ಯ ಮರೆ ಮಾಚಿ ಹೋಗಿರುತ್ತಾರೆ. | ತಿಳಿದಿಲ್ಲ |
| 4 | ನಂಗಲಿ ಠಾಣೆ | ಮೊ.ಸಂ.84/2020 ಕಲಂ 302-34 ಐಪಿಸಿ | ಮುಳಬಾಗಲು ತಾಲ್ಲೂಕು ಚಿಕ್ಕಗೊಲ್ಲಪಳ್ಳಿ ವಾಸಿಯಾದ ವೆಂಕಟಲಕ್ಷ್ಮಮ್ಮ ರವರನ್ನು ಆಕೆಯ ಗಂಡ ರೆಡ್ಡಪ್ಪ , ಮಾವ ಸೀನಪ್ಪ, ಅತ್ತೆ, ಮತ್ತು ನಾದಿನಿ ಚಿನ್ನಮ್ಮಯ್ಯ ರವರು ಸೇರಿ ದಿನಾಂಕ:28-8-2020 ರಂದು ಮದ್ಯಾಹ್ನ ಕತ್ತು ಹಿಸುಕಿ ಸಾಯಿಸಿ ಕೊಲೆ ಮಾಡಿರುವುದಾಗಿ ಕ್ರಮ ಜರುಗಿಸಲು ಕೋರಿ ನೀಡಿರುವ ದೂರು. | ಅಕ್ರಮ ಸಂಬಂದ |
| 5 | ಮುಳಬಾಗಲು ಗ್ರಾಮಾಂತರ ಠಾಣೆ | ಮೊ.ಸಂ.129/2020 ಕಲಂ 302-34 ಐಪಿಸಿ | ದಿನಾಂಕ:15-10-2020 ರಂದು ರಾತ್ರಿ ಸುಮಾರು 7-00 ರಿಂದ 8-30 ಗಂಟೆ ಮದ್ಯೆ ಇಬ್ಬರು ಆರೋಪಿಗಳು ಮುಳಬಾಗಲು ತಾಲ್ಲುಕು ಕದರೀಪುರ ಬಳಿ ಇರುವ ಪಾಲಕುಂಟೆ ಕೆರೆ ಬಳಿ ಪಿರ್ಯಾದಿ ಚಂದ್ರ ರವರು ನಿರ್ಮಿಸಿರುವ ಕುರಿ ದೊಡ್ಡಿ ಒಳಗೆ ಹೋಗಿ ಕುರಿಗಳು ಕಳ್ಳತನ ಮಾಡಲು ಕುರಿಗಳಿಗೆ ಕಾಲು ಕಟ್ಟಿ ನಂತರ ಅಲ್ಲಿ ಇದ್ದ ಕುರಿಗಳ ಮಾಲೀ ದೊಡ್ಡ ಮುನಿಸಾಮಿ ರವರು ಬಂದಿದ್ದನ್ನು ಕಂಡು ಅವರನ್ನು ಅವರ ಕುತ್ತಿಗೆಗೆ ಬಿಳಿ ಬಟ್ಟೆಯಿಂದ ಬಿಗಿದು ಕೊಲೆ ಮಾಡಿ ಅವರು ಬಂದಿದ್ದ ಆಟೋ ನಂ. ಕೆ.ಎ.02.ಜಿ.276 ವಾಹನವನ್ನು ಅಲ್ಲಿಯೇ ಬಿಟ್ಟು ಪರಾರಿಯಾಗಿರುತ್ತಾರೆಂದು ದೂರು | ಕುರಿಕಳುವುಗಾಗಿ |
| 6 | ಶ್ರೀನಿವಾಸಪುರ ಪೊಲೀಸ್ ಠಾಣೆ | 66/2020 ಕಲಂ 302 ಐ.ಪಿ.ಸಿ | ಆರೋಪಿಯಾದ ರತ್ನಮ್ಮ ರವರು ಸುಮಾರು 8 ವರ್ಷಗಳಿಂದ ಮಾನಸಿಕವಾಗಿ ಅಸ್ವಸ್ಥಗೊಂಡಿದ್ದು ತನ್ನ ಮಕ್ಕಳಾದ ಹೇಮತ್ ಮತ್ತು ಯಶ್ವಂತ್ ರವರನ್ನು ಕೃಷಿ ಹೊಂಡಾದಲ್ಲಿ ಹಾಕಿ ಕೊಲೆಮಾಡಿರುವುದಾಗಿ ದೂರು. | ಮಾನಸಿಕ ಅಸ್ವಸ್ಥತೆ. |
| 7 | ಶ್ರೀನಿವಾಸಪುರ ಪೊಲೀಸ್ ಠಾಣೆ | 106/2020 ಕಲಂ 143 ,147,148,149,323,32 4,504,506,302 ಐ.ಪಿ.ಸಿ | ರಾಜಕೀಯ ಹಳೇ ದ್ವೇಷದಿಂದ ಆರೋಪಿಗಳು ಕೊಲೆಮಾಡಿರುವ ಬಗ್ಗೆ ದೂರು | ರಾಜಕೀಯ |

| | | | | |
|---|---|---|---|---|
| 8 | ಶ್ರೀನಿವಾಸಪುರ ಪೊಲೀಸ್ ಠಾಣೆ | 117/2020 ಕಲಂ 302 ಐ.ಪಿ.ಸಿ | ಆಕ್ರಮಿಸಿಕೊಂಡಿರುವ ಜಾಗದ ವಿಚಾರದಲ್ಲಿ ಗಲಾಟೆ ಮಾಡಿಕೊಂಡು ಆರೋಪಿಯಾದ ಸಂತೋಷ್ ಕಮಲಮ್ಮನಿಗೆ ಮಚ್ಚಿನಿಂದ ಹೊಡೆದು ಕೊಲೆಮಾಡಿರುವುದಾಗಿ ದೂರು. | ಜಾಗದ ವಿಚಾರದಲ್ಲಿ ಗಲಾಟೆ. |
| 9 | ಶ್ರೀನಿವಾಸಪುರ ಪೊಲೀಸ್ ಠಾಣೆ | 209/2020 ಕಲಂ 324.323.307.302.149.143.504.34 ಐ.ಪಿ.ಸಿ | ಆರೋಪಿಗಳು ಮನೆಯ ಪಕ್ಕದಲ್ಲಿ ಬಚ್ಚಲು ನೀರು ಬಿಡುವ ವಿಚಾರದಲ್ಲಿ ಗಲಾಟೆ ಮಾಡಿ ಮುನಿವೆಂಕಟಮ್ಮ ರವರನ್ನು ದೊಣ್ಣೆಯಿಂದ ಹೊಡೆದು ಸಾಯಿಸಿರುವುದಾಗಿ ದೂರು. | ಮನೆಪಕ್ಕದಲ್ಲಿ ಜಾಗದ ಗಲಾಟೆ |
| 10 | ಶ್ರೀನಿವಾಸಪುರ ಪೊಲೀಸ್ ಠಾಣೆ | 227/2020 ಕಲಂ 302.504 ಐ.ಪಿ.ಸಿ | ಆರೋಪಿಯಾದ ನಾರಮ್ಮ ರವರು ಮನೆಯ ಪಕ್ಕದಲ್ಲಿ ಹಳೇದ್ವೇಶದಿಂದ ಗಲಾಟೆ ಮಾಡಿಕೊಂಡು ಶ್ರೀನಿವಾಸ್ ರವರನ್ನು ಕೋಲಿನಿಂದ ಹೊಡೆದು ಸಾಯಿಸಿರುವುದಾಗಿ ದೂರು. | ಹಳೇದ್ವೇಶದಿಂದ |
| 11 | ರಾಯಲ್ಪಾಡು ಪೊಲೀಸ್ ಠಾಣೆ | ಮೊಸಂ 46/2020 ಕಲಂ 302 ಐಪಿಸಿ | ಮೃತನು ಆರೋಪಿಯ ಮಗನಾಗಿದ್ದು ಹಣಕಾಸಿನ ಹಾಗು ಸಾಂಸಾರಿಕ ವಿಚಾರದಲ್ಲಿ ಆಗಾಗ ಗಲಾಟೆಗಳಾಗುತ್ತಿದ್ದು ಆರೋಪಿಯವು ತನ್ನ ಮಗನು ಮಲಗಿದ್ದಾಗ ದೊಡ್ಡ ಸುತ್ತುಗೆಯಿಂದ ಹೋಡೆದು ಸಾಯಿಸಿರುತ್ತಾನೆ | ಸಾಂಸಾರಿಕ ವಿಚಾರ |
| 12 | ಗಲ್‌ಪೇಟೆ ಠಾಣೆ | 05/2020 ಕಲಂ U/s: 143. 147. 148. 323. 324. 302. 327. 114. 504.506.149 IPC 1860 & SC AND THE ST PREVEN TION OF ATTRO CITIES) ACT, 1989 U/s: 3 (2) (5) | ದಿನಾಂಕ: 08-02-2020 ರಂದು ಪಿರ್ಯಾದಿದಾರರಾದ ಗಜೇಂದ್ರ ರವರ ಅಣ್ಣ ಪರಶುರಾಮ್ ಮತ್ತು ಆತನ ತಂಡದವರು ಗದ್ದೆಕಣ್ಣೂರು ಜಾತ್ರೆ ಸಮಯದಲ್ಲಿ ಸರಿಯಾಗಿ ಟಮಟೆ ಬಾರಿಸಿಲ್ಲವೆಂದು ಜಗಳ ತೆಗೆದು ಆರೋಪಿಗಳಾದ ಚಿರಂಜೀವಿ @ ಚಿರು ಮತ್ತು ಇತರೆಯವರು ಪರಶುರಾಮ್‌ರವರ ಮೇಲೆ ಗಲಾಟೆ ಮಾಡಿದ್ದು, ದಿನಾಂಕ:10.02.2020 ರಂದು ಕೋಲಾರ ಬೇತಮಂಗಲ ಜಿಗ್ ಜಾಗ್ ಬಳಿ ಪರಶುರಾಮ್ ರವರು ಬಸ್ಸಿಗಾಗಿ ಕಾಯುತ್ತಿದ್ದಾಗ ಮೇಲ್ಕಂಡವರು ಪರಶುರಾಮ್‌ರವರನ್ನು ಸಾಯಿಸುವ ಉದ್ದೇಶದಿಂದ ಚಾಕುವಿನಿಂದ. ದೊಣ್ಣೆಗಳಿಂದ ಹಲ್ಲೆ ಮಾಡಿ ಕೊಲೆ ಮಾಡಿರುವ ಬಗ್ಗೆ. | ಟಮಟೆ ಬಾರಿಸಿಲ್ಲವೆಂದು ವಿಚಾರದಲ್ಲಿ |
| 13 | ಕೋಲಾರ (ಗ್ರಾ) ಠಾಣೆ | 20/2020. ಕಲಂ-302 ಐಪಿಸಿ | ದಿನಾಂಕ:19.01.2020 ರಂದು ಪಿರ್ಯಾದಿಯವರ ಮಗಳನ್ನು ಅವರ ಗಂಡನಾದ ವೀರಭದ್ರ ರವರು ಪತ್ನಿಯ ನಡತೆಯ ಬಗ್ಗೆ ಅನುಮಾನ ಬಂದು ಕಬ್ಬಿಣದ ಪೈಪಿನಿಂದ ಹೊಡೆದು ಸಾಯಿಸಿರುವುದಾಗಿ ಕಾನೂನು ಕ್ರಮಕ್ಕಾಗಿ ದೂರು. | ಕುಟುಂಬ ಕಲಹ |
| 14 | ಕೋಲಾರ (ಗ್ರಾ) ಠಾಣೆ | 81/2020. ಕಲಂ-302. 201 ಐಪಿಸಿ | ದಿನಾಂಕ:18.02.2020 ರಂದು ಪಿರ್ಯಾದಿಯವರು ಮನೆಯಲಿ ಇಲ್ಲದ ಸಮಯ ನೋಡಿಕೊಂಡು ಯಾವುದೋ ದುರುದ್ದೇಶದಿಂದ ಪಿರ್ಯಾದಿಯ 1.5 ತಿಂಗಳ ಹೆಣ್ಣು ಮಗುವನ್ನು ಮನೆಯ ಬಳಿ ಇರುವ ನೀರಿನ ಸಂಪಿನಲ್ಲಿ ಯಾರಿಗೂ ತಿಳಿಯದ ರೀತಿಯಲ್ಲಿ ಹಾಕಿ ಸಾಯಿಸಿದ್ದು ಕಾನೂನು ಕ್ರಮಕ್ಕಾಗಿ ದೂರು. | ಕುಟುಂಬ ಕಲಹ |
| 15 | ಕೋಲಾರ (ಗ್ರಾ) ಠಾಣೆ | 85/2020. ಕಲಂ-302 ಐಪಿಸಿ | ದಿನಾಂಕ:18.02.2020 ರಂದು ಪಿರ್ಯಾದಿ ಸ್ನೇಹಿತ ಅತಾವುಲ್ಲಾ ಮತ್ತು ಈಕೇಸಿನ ಆರೋಪಿ ಸಲ್ಮಾನ್ ರವರು ಕೆರೆಯಲ್ಲಿ ಜಿಲ್ಲಿ ತಾಂಡಾ ಆಟವಾಡುತ್ತಿದ್ದಾಗ ವಿನಾಕಾರಣ ಜಗಳ ಆಗಿದ್ದು ಆರೋಪಿಯು ಕೇಬಲ್ ವೈರ್ ಮತ್ತು ಬೀರ್ ಬಾಟಲಿನಿಂದ ಹೊಡೆದು ರಕ್ತಗಾಯ ಪಡಿಸಿದ್ದು ಚಿಕಿತ್ಸೆ ಫಲಕಾರಿಯಾಗದೆ ಅತಾವುಲ್ಲಾ ರವರು ಮೃತಪಟ್ಟಿದ್ದು ಕಾನೂನು ಕ್ರಮಕ್ಕಾ ದೂರು | ಇತರೆ |
| 16 | ಕೋಲಾರ (ಗ್ರಾ) ಠಾಣೆ | 90/2020. ಕಲಂ-302. 201 ಐ.ಪಿ.ಸಿ | ದಿನಾಂಕ:20.02.2020 ರಂದು ರಾತ್ರಿ ಪಿರ್ಯಾದಿಯವರ ಗಂಡ ಮೃತ ಪೆದ್ದನ್ನ ರವರನ್ನು ಜಮೀನು ಗಲಾಟೆಯಿಂದ ಸಾಯಿಸುವ ಉದ್ದೇಶದಿಂದ ಈ ಕೇಸಿನ ಹಂದಿಗಳ ಬೇಟೆಯ ನೆಪದಲ್ಲಿ ಪೆದ್ದನ್ನ ರವರನ್ನು ಕರೆದುಕೊಂಡು ಹೋಗಿ ಕರೆಂಟ್ ವೈರ್‌ಗೆ ಸಿಲುಕುವಂತೆ ಮಾಡಿ ಸಾಯಿಸಿ ನಂತರ ಸಾಕ್ಷೀ ಸಿಗದಂತೆ ಬೇರೆಕಡೆ ಎತ್ತಿಕೊಂಡು ಹೋಗಿ ಬಿಸಾಡಿದ್ದು ಕಾನೂನು ಕ್ರಮಕ್ಕಾಗಿ ದೂರು. | ಹಂದಿಗಳ ಬೇಟೆಯ ನೆಪದಲ್ಲಿ ಕರೆಂಟ್ ವೈರ್‌ಗೆ ಸಿಲುಕಿಸಿ ಸಾಯಿಸಿರುವ ಬಗ್ಗೆ |

| | | | | |
|---|---|---|---|---|
| 17 | ಕೋಲಾರ (ಗ್ರಾ) ಠಾಣೆ | 106/2020, ಕಲಂ-120 (ಬಿ), 302, 201 ರ/ಜೊ 34 ಐಪಿಸಿ | ದಿನಾಂಕ:03.03.2020 ರಂದು ಪಿರ್ಯಾದಿಯವರ ತಮ್ಮನಾದ ರಮೇಶ್ ರವರನ್ನು ಈ ಕೇಸಿನ ಆರೋಪಿಗಳು ಕರೆದುಕೊಂಡು ಹೋಗಿ ಯಾವುದೋ ಉದ್ದೇಶದಿಂದ ಕರೆಂಟ್ ಶಾಕ್ ಕೊಟ್ಟು ಸಾಯಿಸಿ ನಂತರ ಸಾಕ್ಷಿ ಮೊರೆ ಮಾಡುವ ಉದ್ದೇಶದಿಂದ ಮೃತದೇಹವನ್ನು ಗ್ರಾಮದ ಬಳಿ ಮಾವಿನ ತೋಪಿನಲಿ ಬಿಸಾಕಿ ಹೋಗಿರುವುದಾಗಿ ದೂರು. | ಕರೆಂಟ್ ವೈರ್‌ಗೆ ಸಿಲುಕಿಸಿ ಸಾಯಿಸಿರುವ ಬಗ್ಗೆ |
| 18 | ಕೋಲಾರ (ಗ್ರಾ) ಠಾಣೆ | 313/2020, ಕಲಂ-302 ಐಪಿಸಿ | ದಿನಾಂಕ:13.09.2020 ರಂದು ಪಿರ್ಯಾದಿಯವರಿಗೆ ಬಂದ ಖಚಿತ ಮಾಹಿತಿ ಮೇರೆಗೆ ಎಸ್. ಅಗ್ರಹಾರ ಗ್ರಾಮಕ್ಕೆ ಹೋಗಿ ವಿಚಾರಿಸಲಾಗಿ ಗ್ರಾಮದ ಕೆರೆಯಲ್ಲಿ ಶ್ರೀಮತಿ ಅಮರಾವತಿ ರವರು ಮಾನಸಿಕ ಅಸ್ವಸ್ಥಳಾಗಿದ್ದು ತನ್ನ 3 ವರ್ಷದ ಭರತ್‌ಕುಮಾರ್ ರವರನ್ನು ಸೊಂಟಕ್ಕೆ ಕಟ್ಟಿಕೊಂಡು ಕೆರೆಗೆ ಹಾರಿ ಮಗನನ್ನು ಸಾಯಿಸಿ ತಾನು ಆತ್ಮಹತ್ಯ ಮಾಡಿಕೊಂಡಿರುವವಾಗಿ ದೂರು. | ಆರೋಪಿಯು ಮಾನಸಿಕ ಅಸ್ವಸ್ಥಳಾಗಿದ್ದು ತನ್ನ 3 ವರ್ಷದ ಭರತ್‌ಕುಮಾರ್ ರವರನ್ನು ಸೊಂಟಕ್ಕೆ ಕಟ್ಟಿಕೊಂಡು ಕೆರೆಗೆ ಹಾರಿ ಮಗನನ್ನು ಸಾಯಿಸಿ |
| 19 | ಕೋಲಾರ (ಗ್ರಾ) ಠಾಣೆ | 411/2020, ಕಲಂ-363, 302 ರ/ಜೊ 34 IPC | ದಿನಾಂಕ:02.12.2020 ರಂದು ಪಿರ್ಯಾದಿ ಮಗನಾದ ಭರತ್ ಕುಮಾರ್ ರವರು ಆರೋಪಿ ಕಡೆಯವರ ಪೈಕಿ ಭವಾನಿ ಎಂಬ ಹುಡುಗಿಯನ್ನು ಪ್ರೀತಿಸುತ್ತಿರುವ ವಿಚಾರವಾಗಿ ಆರೋಪಿಗಳು ಮೃತ ಭರತ್‌ರವರನ್ನು ಅಂತರಗಂಗ ಬೆಟ್ಟಕ್ಕೆ ಅಪಹರಣ ಮಾಡಿಕೊಂಡು ಹೋಗಿ ಸಾಯಿಸಿರುವುದಾಗಿ ದೂರು. | ಪೈಕಿ ಭವಾನಿ ಎಂಬ ಹುಡುಗಿಯನ್ನು ಪ್ರೀತಿಸುತ್ತಿರುವ ವಿಚಾರವಾಗಿ |
| 20 | ವೇಮಗಲ್ | 31/2020, ಕಲಂ 307,323, 324, 341, 504, 506, 302 ರೆ/ವಿ 34 ಐಪಿಸಿ | ದಿನಾಂಕ:18/02/2020 ರಂದು ಸಂಜೆ 05-00 ಗಂಟೆಯಲ್ಲಿ ಸುನೀಲ್ ರವರೊಂದಿಗೆ ಚನ್ನಪ್ಪ ,ಆಂಜಿನಪ್ಪ ರವರೊಂದಿಗೆ ಮಾತನಾಡುತ್ತಿದ್ದಾಗ ಈ ಕೇಸಿನ ಆರೋಪಿಗಳು ಚನ್ನಪ್ಪ ರವರನ್ನು ಅಡ್ಡಗಟ್ಟಿ ಅವಾಚ್ಯ ಶಬ್ದಗಳಿಂದ ನಿಂದಿಸಿ ಮಾರಣಾಂತಿಕ ಹಲ್ಲೆ ಮಾಡಿ ಕೊಲೆ ಮಾಡಿರುವ ಬಗ್ಗೆ ದೂರು | ಕ್ಷುಲ್ಲಕ ಕಾರಣ |
| 21 | ವೇಮಗಲ್ | 100/2020ಕಲಂ 143,147,148,302, 323,324,504,506,ರೆ/ವಿ 149ಐ.ಪಿ.ಸಿ ದಿನಾಂಕ: 16/05/2020 | ಕೋಲಾರ ತಾಲ್ಲುಕು ಹೋಳೇರಹಳ್ಳಿ ಗ್ರಾಮದ ಸರ್ವೆ ನಂ 119 ರ ಜಮೀನಿನ ವಿಚಾರದಲ್ಲಿ ದಿನಾಂಕ:15/05/2023 ಸಂಜೆ 05-00 ಗಂಟೆಯ ಸಮಯದಲ್ಲಿ ಪಿರ್ಯಾಧಿ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ ಈ ಕೇಸಿನ ಆರೋಪಿಗಳು ಅಕ್ರಮ ಗುಂಪು ಕಟ್ಟಿಕೊಂಡು ಕೈಗಳಲ್ಲಿ ದೊಣ್ಣೆಗಳು ಹಿಡಿದುಕೊಂಡು ಬಂದು ಹಲ್ಲೆ ಮಾಡಿ ಪ್ರಾಣ ಬೆದರಿಕೆ ಹಾಕಿ ಕೊಲೆ ಮಾಡಿರುವ ಬಗ್ಗೆ ದೂರು | ಜಮೀನಿನ ವಿಚಾರಕ್ಕೆ |
| 22 | ವೇಮಗಲ್ | 124/2020, ಕಲಂ 302 ಐಪಿಸಿ | ದಿನಾಂಕ:08/06/2020 ರಂದು ಪಿರ್ಯಾದಿ ಯ ತಂದೆ ಮುನಿಯಪ್ಪ ರವರು ದೇವಸ್ಥಾನ ಬಳಿ ಮಲಗಿದ್ದಾಗ ಈ ಕೇಸಿನ ಆರೋಪಿ ಕ್ಷುಲಕ್ಕ ಕಾರಣಕ್ಕೆ ಮುನಿಯಪ್ಪ ರವರ ಮೇಲೆ ಜಗಳ ಮಾಡಿಕೊಂಡು ತಲೆಗೆ ಹೊಡೆದು ಕೊಲೆ ಮಾಡಿರುವುದಾಗಿ ದೂರು | ಹಳೇ ದ್ವೇಷ |
| 2[illegible] | ವೇಮಗಲ್ | 165/2020, ಕಲಂ 143,147,148,323,324 | ಈ ಕೇಸಿನ ಪಿರ್ಯಾಧಿದಾರರಿಗೆ ಹಾಗೂ ಆರೋಪಿತರಿಗೆ ಮನೆಯ ಬಳಿ ಜಾಗದ ವಿಚಾರದಲ್ಲಿ ತಕರಾರುಗಳಿದ್ದು ಈ ವಿಚಾರವಾಗಿ ದಿನಾಂಕ:04/08/2020 ರಂದು 17-30 ಗಂಟೆಯಲ್ಲಿ ಮೃತ ಮುನಿರಾಜು ರವರ ಮೇಲೆ ಕಲ್ಲಿನ | ಜಮೀನಿನ ವಿಚಾರಕ್ಕೆ |

| | | | | |
|---|---|---|---|---|
| | | .307.302.504.506.ರ /ವಿ 149 ಐ.ಪಿ.ಸಿ | ರಾಡುಗಳು ಹಾಗೂ ದೊಣ್ಣೆ ಹೊಡೆದು ಚಾಕುವಿನಿಂದ ತಿವಿದು ಮಾರಣಾಂತಿಕ ಹಲ್ಲೆ ಮಾಡಿ ಕೊಲೆ ಮಾಡಿರುವ ಬಗ್ಗೆ ದೂರು | |
| 24 | ಮಾಲೂರು | ಮೊ.ಸಂ 85/2020 ಕಲಂ 302 ಐಪಿಸಿ | ದಿನಾಂಕ 17/04/2020 ರಂದು ಗೌರಮ್ಮರವರಿಗೂ ಮತ್ತು ಮೃತ ರಾಮಸ್ವಾಮಿರೆಡ್ಡಿರವರಿಗೆ ಸಂಸಾರದ ವಿಚಾರದಲ್ಲಿ ಗಲಾಟೆ ಮಾಡಿಕೊಳ್ಳುತ್ತಿದ್ದು ಗೌರಮ್ಮರವರು ದೊಣ್ಣೆ ಮತ್ತು ಮಚ್ಚುನಿಂದ ರಾಮಸ್ವಾಮಿ ರೆಡ್ಡಿರವರಿಗೆ ಹೊಡೆದು ಕೊಲೆ ಮಾಡಿರುವುದಾಗಿ ದೂರು | ಸಂಸಾರದ ವಿಚಾರದಲ್ಲಿ ಗಲಾಟೆ |
| 25 | ಮಾಲೂರು | ಮೊ.ಸಂ 106/2020 ಕಲಂ 302 ಐಪಿಸಿ | ದಿ:20-05-2020 ರಮದು ಪಿರ್ಯಾದಿ ಚಪಾತಿ ಮಾಡುವುದಾಗಿ ಗಂಡನಾದ ಮಹಬೂಬ್ ಪಾಷಾ ಹೇಳಿದ್ದು ಮಾಡುತ್ತಿದ್ದಾಗ ಗಲಾಟೆ ಮಾಡುತ್ತಿದ್ದಾಗ ಅಕ್ಕ ಪಕ್ಕದ ಮನೆಯವರು ಜಗಳವನ್ನು ಬಿಡಿಸಿದ್ದು ನಂತರ ಪಿರ್ಯಾದಿ ಮಗನಾದ ಯಾರಬ್ ಪಾಷಾ ಜಗಳವನ್ನು ಬಿಡಿಸಿದದು ಅಲ್ಲಿಯೇ ಇದ್ದ ದೊಣ್ಣೆಯಿಂದ ತನ್ನ ತಂದೆಯ ತಲೆಗೆ ಹೊಡೆದು ಗಾಯಪಡಿಸಿದ್ದು ಆಸ್ಪತ್ರೆಗೆ ಕರೆದುಕೊಮಡು ಹೋಗಿದ್ದು ವೈದ್ಯರು ಮೃತಪಟ್ಟಿರುವುದಾಗಿ ದೂರು. | ಸಂಸಾರದ ವಿಚಾರದಲ್ಲಿ |
| 26 | ಮಾಲೂರು | ಮೊ.ಸಂ-117/2020. ಕಲಂ-302. 201 ಐ.ಪಿ.ಸಿ | ದೊಡ್ಡಮುನಿಸ್ವಾಮಿ ರವರ ಮಗನಾದ ಸುನೀಲ್ ಎಂಬುವರು ಜಯಮಂಗಲ ಗ್ರಾಮದ ಪುಷ್ಪ ರವರನ್ನು ಪ್ರೀತಿಸಿ ಮದುವೆಯಾಗಿ. ಅಲಂಬಾಡಿ ಗ್ರಾಮದಲ್ಲಿ ವಾಸವಾಗಿದ್ದು. ಸುನೀಲ್ ರವರು ವಜ್ರಸ್ವಾಮಿ ಬಾಬತ್ತು ಕಾರಿನ ಚಾಲಕನಾಗಿ ಸುಮಾರು 6 ತಿಂಗಳಿಂದ ಇದ್ದು. ಆತ ಕಾರನ್ನು ಬಾಡಿಗೆಗೆ ಬೆಂಗಳೂರಿಗೆ ಹೋದಾಗ ವಜ್ರಸ್ವಾಮಿ ಸುನೀಲ್ ಹೆಂಡತಿಯೊಂದಿಗೆ ಅಕ್ರಮ ಸಂಬಂಧ ಬೆಳೆಸಿಕೊಂಡಿದ್ದು, ಸಂಜೆ 7-30 ಗಂಟೆಗೆ ಪಿರ್ಯಾಧಿದಾರರು ಮತ್ತು ಶಶಿಕುಮಾರ್ ಅಭಿಲಾಷ್ ತಮ್ಮ ಗ್ರಾಮದ ಸರ್ಕಲ್ ಬಳಿ ಇದ್ದಾಗ ಪ್ರಕಾಶ್ ಓಡಿ ಬಂದು ಪಿರ್ಯಾಧಿದಾರರಿಗೆ ತಮ್ಮ ಗ್ರಾಮದ ಸೊಸೈಟಿ ಗೋಪಾಲಪ್ಪ ರವರ ಜಮೀನಿನ ಬಳಿ ಪ್ರಕಾಸ್ ವಜ್ರಸ್ವಾಮಿ, ಬಾಬು, ಸುನೀಲ್ ರವರು ಕುಳಿತು ಪಾರ್ಟಿ ಮಾಡುತ್ತಿದ್ದಾಗ ಸುನೀಲ್ ತನ್ನ ಹೆಂಡತಿಯನ್ನು ಯಾರೋ ಇಟ್ಟಿಕೊಂಡಿರುತ್ತಾರೆ. ಅವನನ್ನು 2-3 ದಿನದಲ್ಲಿ ಒಂದು ಗತಿ ಕಾಣಿಸುತ್ತೇನೆಂತ ಮಾತನಾಡಿದಾಗ ವಜ್ರಸ್ವಾಮಿ ಏಕಾಏಕಿ ಸುನೀಲ್ ಮೇಲೆ ಜಗಳ ತೆಗೆದು ಮಚ್ಚಿನಿಂದ ಹೊಡೆದು ಕೊಲೆ ಮಾಡಿರುತ್ತಾನೆಂತ ದೂರು. | ಅನೈತಿಕ ಸಂಬಂಧದ ವಿಚಾರದಲ್ಲಿ |
| 27 | ಮಾಲೂರು | ಮೊ.ಸಂ 269/2020 ಕಲಂ 302 ಐಪಿಸಿ | ದಿನಾಂಕ 01/11/2021 ರಂದು ರಾತ್ರಿ 08-00 ಗಂಟೆ ಸಮಯದಲ್ಲಿ ವಿಜಯ ಕುಮಾರುರವರು ಮನೆಯ ಮುಂದೆ ಅವಾಚ್ಯ ಶಬ್ದಗಳಿಂದ ಬೈದು ಪ್ರಾಣಬೆದರಿಕೆ ಹಾಕಿದಾಗ ಆರೋಪಿಯ ಚಾಕುವಿಂದ ವಿಜಯ ಕುಮಾರ್‌ರವರಿಗೆ ತಿವಿದು ಕೊಲೆ ಮಾಡಿರುವುದಾಗಿ ದೂರು | ಕೆಟ್ಟ ಮಾತುಗಳಿಂದ ಬೈದಿರುವುದಕ್ಕೆ |
| 28 | ಮಾಲೂರು | ಮೊ.ಸಂ-301/2020. ಕಲಂ-302 ಐ.ಪಿ.ಸಿ. | ಪಿರ್ಯಾಧಿ ಮಗ ಬಾಬು ಮತ್ತು ಆರೋಪಿಗೆ ಈಗ್ಗ ಒಂದು ವರ್ಷ?ದ ಹಿಂದೆ 50,000-00 ರೂ ಸಾಲವಾಗಿ ಕೊಟ್ಟಿದ್ದು ಸದರಿ ಹಣವನ್ನು ಕೊಡುವಂತೆ ಒತ್ತಾಯ ಮಾಡಿದ್ದು ಈ ಹಿಂದೆ ಜಗಳ ಮಾಡಿ ಕೊಂಡಿದ್ದು ಇದೇ ವಿಚಾರವಾಗಿ ಶಶಿಕುಮಾರ್ ಕರೆ ಮಾಡಿ ಕೋಲಾರ ರಸ್ತೆಯಲ್ಲಿರುವ ಬಜಾಜ್ ಶೋರೂಂ ಬಳಿ ಕರೆಸಿಕೊಂಡು ಕೊಲೆ ಮಾಡುವ ಉದ್ದೇಶದಿಂದ ರಾತ್ರಿ 10-00 ಗಂಟೆಯಲ್ಲಿ ಶಶಿಕುಮಾರ್ ಗಲಾಟೆ ಮಾಡಿ. ಮಚ್ಚಿನಿಂದ ತಲೆಗೆ ಮತ್ತು ಇತರೆ ಕಡೆಗಳಲ್ಲಿ ಹೊಡೆದು ಕೊಲೆ ಮಾಡಿರುವುದಾಗಿ ದೂರು. | ಹಣದ ವಿಚಾರದಲ್ಲಿ |
| 29 | ಮಾಸ್ತಿ ಪೊಲೀಸ್ ಠಾಣೆ | ಮೊ.ಸಂ.44/2020 ಕಲಂ-302 ಐ.ಪಿ.ಸಿ. | ದಿ:04-05-2020 ರಂದು ಪಿರ್ಯಾದಿದಾರರು ಠಾಣೆಗೆ ಹಾಜರಾಗಿ ನೀಡಿದ ದೂರಿನ ಸಾರಾಂಶವೇನೆಂದರೆ, ತನ್ನ ಮಗಳಾದ ಜ್ಯೋತಿ 17 ವರ್ಷ. ಎಂಬುವರು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದು ಮನೆಯಲ್ಲಿಯೇ ಕೆಲಸ ಮಾಡಿಕೊಂಡಿರುತ್ತಾರೆ. ದಿನಾಂಕ:03-05-2020 ರಂದು ತನ್ನ ಮಗ ಮುರಳಿ ಎಂಬುವರೊಂದಿಗೆ ತಮಿಳುನಾಡಿನ ಸೂಲಗಿರಿ ತಾಲ್ಲೂಕು ವ್ಯಾಪನಪಲ್ಲಿಗೆ ಹೋಗಿದ್ದು ದಿನಾಂಕ:04-05-2020 ರಂದು ಬೆಳಿಗ್ಗೆ 6-00 ಗಂಟೆಗೆ ತನ್ನ ಗಂಡ ಪೋನ್ ಮಾಡಿ ಬೆಳಿಗ್ಗೆ 3-00 ಗಂಟೆಯ ಸಮಯದಲ್ಲಿ ತೋಟದ ಬಳಿ ಸೀಮೆ ಹಸುಗಳಿಗೆ ಹುಲ್ಲು ಹಾಕಿ ಬೆಳಿಗ್ಗೆ 6-00 ಗಂಟೆಗೆ ಮನೆ ಬಳಿ ಬಂದು ಬಾಗಿಲು ಮುಂದಕ್ಕೆ ಹಾಕಿದ್ದು ತಳ್ಳಿ ನೋಡಿದಾಗ ಮನೆಯ ಹಾಲ್ ನಲ್ಲಿ ಮಲಗಿದ್ದ ಜ್ಯೋತಿಯ ಮೂಗಿನಲಲಿ ಮತ್ತು ಬಾಯಿಯಲ್ಲಿ ರಕ್ತ ಬರುತ್ತಿದ್ದು ಆಕೆ ಹಾಕಿಕೊಂಡಿದ್ದ ಚೂಡಿದಾರ್ ಮತ್ತು ಪ್ಯಾಂಟ್ & ಕಾಚಾ ಪಕ್ಕದಲ್ಲಿಯೇ ಒಂದು ಕಡೆ ಬಿದ್ದಿದ್ದು ರಕ್ತಸ್ರಾವವನ್ನು ಮೃತಪಟ್ಟಿರುತ್ತಾಳೆಂದು ಯಾರೋ ದುಷ್ಕರ್ಮಿಗಳು ಕೊಲೆ ಮಾಡಿರುತ್ತಾರೆಂತ ನೀಡಿದ ದೂರನ್ನು ಪಡೆದುಕೊಂಡು ಪ್ರಕರಣ ದಾಖಲಿಸಿರುವ ಬಗ್ಗೆ. | ಆರೋಪಿಯ ಮಗಳು ಪ್ರೀತಿ ಮಾಡಿದ್ದರಿಂದ |

| ಕ್ರ.ಸಂ | ಪೊಲೀಸ್ ಠಾಣೆ ಹೆಸರು | ಮೊಸಂ ಮತ್ತು ಕಲಂ | ಘಟನೆಯ ವಿವರ | ಕೊಲೆಗೆ ಕಾರಣ |
|---|---|---|---|---|
| 1 | ಮುಳಬಾಗಿಲು ನಗರ ಪೊಲೀಸ್ ಠಾಣೆ | 20/2021 ಕಲಂ 302 ಐ.ಪಿ.ಸಿ ಎಸ್‌ಸಿ/ಎಸ್‌ಟಿ ಆಕ್ಟ್ | ಪಿರ್ಯಾದಿ ಮಗಳಾದ ಪ್ರಿಯಾಂಕ ಬೆಂಗಳೂರಿನ ಶೇಷಾದ್ರಿಪುರಂ ಕಾಲೇಜಿನಲ್ಲಿ 2 ನೇ ವರ್ಷದ ಪಿ.ಯು.ಸಿ. ವಿದ್ಯಾಭ್ಯಾಸವನ್ನು ಓದಿಕೊಳ್ಳುತ್ತಿದ್ದು. ಆಕೆಗೆ ರಾಜೇಶ್ ಎಂಬುವನು ಪ್ರೀತಿಸುವಂತೆ ಒತ್ತಾಯಿಸುತ್ತಿರುವುದಾಗಿ ತಿಳಿಸಿದ್ದು ಪಿರ್ಯಾದಿ ರಾಜೇಶ್‌ಗೆ ಪೋನ್ ಮುಖಾಂತರ ಕಿರುಕುಳ ನೀಡಬೇಡ ಎಂತ ತಿಳಿಸಿದ್ದು. ದಿ. 8-3-21 ರಂದು ಪ್ರಿಯಾಂಕ ಒಬ್ಬಳೇ ಮನೆಯಲ್ಲಿದ್ದು ಸಂಜೆ 5 ಗಂಟೆಗೆ ಪಿರ್ಯಾದಿ ಮನೆಗೆ ಬಂದು ಹಾಲ್ ನಲ್ಲಿ ಕುಳಿತಿದ್ದ ಪಿರ್ಯಾದಿ ಮಗನಾದ ರಾಜೇಶನನ್ನು ಪ್ರಿಯಾಂಕ ಎಲ್ಲಿ ಎಂತ ಕೇಳಲಾಗಿ ಎಲ್ಲೋ ಹೋಗಿರಬೇಕು ಎಂದು ತಿಳಿಸಿ ರೂಂ ಒಳಗೆ ಹೋಗಿ ನೋಡಿ ಮಲಗಿದ್ದಾಳೆ ಎಂದು ಎಬ್ಬಿಸಲಾಗಿ ಪ್ರಿಯಾಂಕ ಎಚ್ಚರಗೊಂಡಿರುವುದಿಲ್ಲ ರೂಂನಲ್ಲಿದ್ದ ಲೈಟ್ ಆನ್ ಮಾಡಿ ನೋಡಲಾಗಿ ಪ್ರಿಯಾಂಕ ಕುತ್ತಿಗೆ ಬಳಿ ಯಾವುದೋ ವಸ್ತುವಿನಿಂದ ಬಿಗಿದಿರುವ ಮಾರ್ಕ ಕಂಡು ಬಂದು ಪ್ರಿಯಾಂಕ ಸತ್ತು ಹೋಗಿದ್ದು ರಾಜೇಶ್ ತನ್ನ ಮಗಳು ಪ್ರೀತಿಸಿಲ್ಲ ಎಂತ ದ್ವೇಷವನ್ನು ಹೊಂದಿ ಯಾವುದೋ ಉದ್ದೇಶದಿಂದ ಉಸಿರುಗಟ್ಟಿ ಸಾಯಿಸಿರುವುದಾಗಿ ದೂರು | ಪ್ರೀತಿ ವಿಷಯಕ್ಕಾಗಿ |
| 2 | ಮುಳಬಾಗಲು ಗ್ರಾ. ಠಾಣೆ | ಮೊ.ಸಂ.27/2021 ಕಲಂ.143.147.363.364. 365.342 ರೆ/ವಿ 149 ಐಪಿಸಿ ಮತ್ತು 3(1)(ಆರ್)(ಎಸ್) ಮತ್ತು 3(2)(5) ಎಸ್.ಸಿ/ಎಸ್‌ಟಿ ಪಿಎ ಕಾಯ್ದೆ | ದಿನಾಂಕ:26.01.2021 ರಂದು ಸಂಜೆ ಮುಳಬಾಗಲು ತಾಲ್ಲೂಕು ಎನ್.ಹೆಚ್.75 ರಸ್ತೆ ಪಕ್ಕದಲ್ಲಿರುವ ಇಂಚರ ಡಾಬಾ ಬಳಿ ಉದ್ದೇಶಪೂರ್ವಕವಾಗಿ ಅಪಹರಣ ಮಾಡಿಕೊಂಡು ಯಾವುದೋ ಕಾರ್‌ನಲ್ಲಿ ಹಾಕಿಕೊಂಡು ಬಂದು ರಾತ್ರಿಯಿಡಿ ಇಟ್ಟು ತನ್ನನ್ನು ಹೊಡೆದು ಹಲ್ಲೆ ಮಾಡಿದ್ದಾಗಿ ತಿಳಿಸಿದ್ದು. ನಮ್ಮ ಗ್ರಾಮದ ರಾಮಕೃಷ್ಣಪ್ಪ ಎಂಬುವವರು ಯಾರು ಎಂದು ಕೇಳಲಾಗಿ, ತಾನು ಆತ ನಮ್ಮ ಗ್ರಾಮದವರಾಗಿದ್ದು, ಏಕೆ ಏನು ಎಂದು ತಿಳಿದು ಮತ್ತೆ ತಿಳಿಸು ಎಂದು ಹೇಳಲು, ನಾಗರಾಜಪ್ಪ ಮತ್ತೆ ಸ್ಥಳಕ್ಕೆ ಹೋಗಲಾಗಿ, ಡಾಬಾ ಬಳಿ ಯಾರೊಬ್ಬರೂ ಇರಲಿಲ್ಲವೆಂದು ತಿಳಿಸಿದ್ದು. ಆ ವಿಚಾರವನ್ನು ರಾಮಚಂದ್ರಪ್ಪನಿಂದ ತಿಳಿದುಕೊಂಡ ನಮ್ಮ ಮಾವ ವೆಂಕಟೇಶಪ್ಪ ನನಗೆ ಮತ್ತು ನನ್ನ ತಮ್ಮ ಶ್ರೀನಿವಾಸ್‌ಗೆ ತಿಳಿಸಿದ್ದು. ನಾವು ರಾಮಚಂದ್ರಪ್ಪ ರವರನ್ನು ಮಾತನಾಡಿ ಮೇಲ್ಕಂಡ ಎಲ್ಲಾ ವಿಚಾರವನ್ನು ಅವರಿಂದ ತಿಳಿದುಕೊಂಡೆವು. ನಂತರ ರಾಮಚಂದ್ರಪ್ಪನವರು ದಿನ್ನೂರು ನಾಗರಾಜಪ್ಪರವರಿಗೆ ಕರೆ ಮಾಡಿ ಮುಳಬಾಗಲು ಆರ್.ಎಂ.ಸಿ. ಮಾರ್ಕೆಟ್‌ಗೆ ಬರಲು ಹೇಳಿದ್ದು. ಅದರಂತೆ ನಾಗರಾಜಪ್ಪ ಬರಲಾಗಿ ಆರ್.ಎಂ.ಸಿ. ಯಾರ್ಡ್‌ನಲ್ಲಿ ರಾಮಚಂದ್ರಪ್ಪ, ನಾನು, ವೆಂಕಟೇಶಪ್ಪ, ನನ್ನ ತಮ್ಮ ಶ್ರೀನಿವಾಸ, ನಮ್ಮ ಚಿಕ್ಕಪ್ಪನ ಮಗ ರತ್ನಪ್ಪ ಇನ್ನೂ ಇತರರ ಸಮಕ್ಷಮ ನಾಗರಾಜಪ್ಪನನ್ನು ವಿಚಾರ ಮಾಡಿದ್ದು. ಅವರು ಮೇಲ್ಕಂಡಂತೆ ನನ್ನ ಅಣ್ಣನನ್ನು ಮೇಲ್ಕಂಡವರು ಅಪಹರಣ ಮಾಡಿ, ಶೆಡ್‌ನಲ್ಲಿ ಹೊಡೆದು, ಕಟ್ಟಿಹಾಕಿರುವ ವಿಚಾರವನ್ನು ತಿಳಿಸಿದರು. ಇದರಿಂದ ನಾನು ಮತ್ತು ಇತರರು ನಮ್ಮ ಅಣ್ಣ ರಾಮಕೃಷ್ಣಪ್ಪನನ್ನು ಪತ್ತೆ ಮಾಡಿ ನೋಡಲು ಪತ್ತೆಯಾಗಿರುವುದಿಲ್ಲ. ನಮ್ಮ ಅಣ್ಣನಿಗೆ ಮತ್ತು ಮೇಲ್ಕಂಡ ರಾಘವೇಂದ್ರ, ರಘುನಾಥ @ ರಘು, ಲೋಕೇಶ, ಬಿನ್ ಮಂಜುನಾಥ, ರಘು ತಮ್ಮ ವಿನಾಯಕ ಮತ್ತು ಬೈರೆಡ್ಡಿ ಹಾಗು ಇತರರಿಗೆ ಹಣದ ವ್ಯವಹಾರಗಳಿದ್ದು. ಈ ವಿಚಾರದಲ್ಲಿ ಇವರೆಲ್ಲರೂ ನಮ್ಮ ಗ್ರಾಮಕ್ಕೆ ಸುಮಾರು 10 – 15 ಬಾರಿ ಬಂದು ನಮ್ಮ ಅಣ್ಣ ರಾಮಕೃಷ್ಣ ರವರ ಬಗ್ಗೆ ವಿಚಾರ ಮಾಡಿದ್ದು. ನಾನು, ನಮ್ಮ ಅಣ್ಣ ತಮ್ಮಂದಿರೆಲ್ಲರೂ ನೋಡಿರುತ್ತೇವೆ. ಅವರನ್ನು ವಿಚಾರಿಸಿದರೆ ನಮಗೆ ಯಾವುದೇ ಮಾಹಿತಿ ತಿಳಿಸುತ್ತಿರಲಿಲ್ಲ. ಆರೋಪಿಗಳು ಸವರ್ಣೀಯರು ಹಾಗು ಇತರೆ ಜಾತಿಯವರಾಗಿದ್ದು, ಪರಿಶಿಷ್ಟ ಜಾತಿಗೆ ಸೇರಿದ ನಮ್ಮ ಅಣ್ಣ ರಾಮಕೃಷ್ಣನೊಂದಿಗೆ ಇದ್ದ ಹಣದ ವ್ಯವಹಾರದ ವಿಚಾರದಲ್ಲಿ ನಮ್ಮ ಅಣ್ಣನನ್ನು ಕೊಲೆ ಮಾಡುವ ಉದ್ದೇಶದಿಂದ | ಉದ್ಯೋಗ ಕೊಡಿಸುವುದಾಗಿ ಹಣ ತೆಗೆದುಕೊಂಡು ವಂಚಿಸಿರುವ ಬಗ್ಗೆ |

| | | | | |
|---|---|---|---|---|
| | | | ಅಪಹರಣ ಮಾಡಿ, ಕೈಕಾಲುಗಳನ್ನು ಕಟ್ಟಿಹಾಕಿ, ಲೆಪ್ಪಲ್ಲಿ ಅಕ್ರಮವಾಗಿ ಕೂಡಿಹಾಕಿ, ಹೊಡೆದು ದೌರ್ಜನ್ಯವೆಸಗಿರುತ್ತಾರೆ. ನನ್ನ ಅಣ್ಣ ರಾಮಕೃಷ್ಣಪ್ಪ ಇದುವರೆವಿಗೂ ಪತ್ತೆಯಾಗಿರುವುದಿಲ್ಲ. ನಮ್ಮ ಅಣ್ಣನನ್ನು ಯಾರೋ ಹೊಡೆದು ಸಾಯಿಸಿ ಕೊಲೆ ಮಾಡಿರುತ್ತಾರೆ. | |
| 3 | ನಂಗಲಿ ಪೊಲೀಸ್ ಠಾಣೆ | ಮೊ.ಸಂ.22/2021 ಕಲಂ 302-201 ಐಪಿಸಿ | ದಿ:21-02-2021 ರಂದು ಯಾರೋ ದುರಾತ್ಮರು ಅಪರಿಚಿತ ಹೆಂಗಸನ್ನು ನಂಗಲಿ ಪೊಲೀಸ್ ಠಾಣೆ ಸರಹದ್ದು ಘಟ್ಟು ಅರಣ್ಯ ಪ್ರದೇಶದಲ್ಲಿ ನೀಲಗಿರಿ ಮತ್ತು ಲಂಟಾಣಿ ಗಿಡಗಳ ಬಳಿ ಯಾವುದೋ ಕಾರಣಕ್ಕೆ ಕೊಲೆ ಮಾಡಿ ಸಾಕ್ಷ್ಯ ಮರೆಮಾಚಲು ಯಾವುದೋ ಇಂಧನದಿಂದ ಸುಟ್ಟು ಹಾಕಿರುತ್ತಾರೆ. | ತಿಳಿದಿಲ್ಲ |
| 4 | ಮುಳಬಾಗಲು ನಗರ ಠಾಣೆ | ಮೊ.ಸಂ.20/2021 ಕಲಂ 302 ಐಪಿಸಿ ಕಲಂ3 ಉಪಕಲಮು (2) ಕ್ಲಾಸ್(5) ಎಸ್ ಸಿ ಎಸ್ ಟಿ ಪಿಓಎ ತಿದ್ದುಪಡಿ ಅಧಿನಿಯಮ 2015 | ದಿನಾಂಕ:8-3-2021 ರಂದು ಆರೋಪಿಯು ಮುಳಬಾಗಲು ಹೊಸಪಾಳ್ಯ ವಾಸಿ ಪ್ರಿಯಾಂಕ ಎಂಬುವರನ್ನು ಆಕೆ ಪ್ರೀತಿಸಲಿಲ್ಲ ವೆಂದ ಕಾರಣಕ್ಕೆ ಆಕೆಯ ಮನೆಗೆ ಬಂದು ಯಾವುದೋ ವಸ್ತುವಿನಿಂದ ಆಕೆಯ ಕುತ್ತಿಗೆ ಬಿಗಿದು ಕೊಲೆ ಮಾಡಿ ಪರಾರಿಯಾಗಿರುತ್ತಾನೆ. | ಲವ್ ಫೈಲೂರ್ |
| 5 | ನಂಗಲಿ ಪೊಲೀಸ್ ಠಾಣೆ | ಮೊ.ಸಂ.142/2021 ಕಲಂ 302 ಐಪಿಸಿ ಮತ್ತು ಅಟ್ರಾಸಿಟಿ | ದಿನಾಂಕ:23-11-2021 ರಂದು ಸಂಜೆ ಸುಮಾರು 4-30 ಗಂಟೆ ಸಮಯದಲ್ಲಿ ಯಾರೋದುಷ್ಕರ್ಮಿಗಳು ಪಿರ್ಯಾದಿ ಗಂಡನಾದ ಮುನಿವೆಂಕಟಪ್ಪ ರವರನ್ನು ಯವುದೋ ಕಾರಣಕ್ಕೆ ಕಸುವುಗಾನಹಳ್ಳಿ ಗೇಟ್ (ಪಾತೂರು ತಿರುವು) ಬಳಿ ಹೊಡೆದು ಸಾಯಿಸಿ ಕೊಲೆ ಮಾಡಿರುತ್ತಾರೆ. | ಹಿಂದಿನ ದ್ವೇಷ |
| 6 | ಶ್ರೀನಿವಾಸಪುರ ಪೊಲೀಸ್ ಠಾಣೆ | 8/2021 ಕಲಂ: 143.147.148.504.506.427.323.324.302.307.149 ಐಪಿಸಿ | ಆರೋಪಿಗಳು ರಾಜಕೀಯ ಉದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದು ಹೊಡೆದು ಸಾಯಿಸಿರುವುದಾಗಿ ದೂರು | ರಾಜಕೀಯ |
| 7 | ಶ್ರೀನಿವಾಸಪುರ ಪೊಲೀಸ್ ಠಾಣೆ | 102/2021 ಕಲಂ: 302.307 ಐಪಿಸಿ | ಆರೋಪಿಯ ತಂದೆಯು 2 ನೇ ಮದುವೆ ಯಾಗಿದ್ದು ಆರೋಪಿ ನವೀನ್ ಆಸ್ತಿ ಪಾಲು ಪದೇ ಪದೇ ಕೇಳುತ್ತಿದ್ದು ತಂದೆ ವೆಂಕಟೇಶಪ್ಪ ಕೊಡದ ಕಾರಣಕ್ಕೆ ರಾತ್ರಿ ಮಲಗಿದ್ದಾಗ ತಲೆ ಮೇಲೆ ಕಲ್ಲುಹಾಕಿ ಸಾಯಿಸಿರುವುದಾಗಿ ದೂರು. | ಆಸ್ತಿ ಗಲಾಟೆ |
| 8 | ಶ್ರೀನಿವಾಸಪುರ ಪೊಲೀಸ್ ಠಾಣೆ | 199/2021 ಕಲಂ:- 302.201.34 ಐಪಿಸಿ | ಮೊದಲು ಯುಡಿಆರ್ ಪ್ರಕರಣ ದಾಖಲಾಗಿದ್ದು ನಂತರ ಸಾವಿನ ಬಗ್ಗೆ ಅನುಮಾನದಿಂದಪಿರ್ಯಾದಿಯು ಮರು ದೂರು ನೀಡಿದ್ದು ಹಣಕಾಸಿನ ವಿಚಾರದಲ್ಲಿ ಆರೋಪಿಗಳು ಹೊಡೆದು ಸಾಯಿಸಿರುವುದಾಗಿ ದೂರು. | ಹಣಕಾಸಿನ ವಿಚಾರ |
| 9 | ಗೌನಿಪಲ್ಲಿ ಪೊಲೀಸ್ ಠಾಣೆ | 12/2021 ಕಲಂ 302. ಐಪಿಸಿ | ದಿನಾಂಕ:07.03.2021 ರಂದು ಆರೋಪಿ ರಾಜು ಹೆಂಡತಿಯಂದಿಗೆ ಕೊಪ್ಪವಾರಿಪಲ್ಲಿ ಧರ್ಮಚತ್ರದಲ್ಲಿ ಮುರು-ನಾಲ್ಕು ತಿಂಗಳಿಂದ ಇದ್ದು ಕುಡಿದು ಸಂಸಾರ ವಿಚಾರದಲ್ಲಿ ಗಲಾಟೆ ಮಾಡಿ ಮಚ್ಚಿನಿಂದ ಕೊಚ್ಚಿ ಕೊಲೆ ಮಾಡಿರುತ್ತಾನೆ. | ಸಾಂಸಾರಿಕ ವಿಚಾರ |
| 10 | ರಾಯಲ್ಪಾಡು ಪೊಲೀಸ್ ಠಾಣೆ | 63/2021 ಕಲಂ 302.201 ಐಪಿಸಿ | ಪಿರ್ಯಾದಿದಾರರ ಹೆಂಡತಿಯನ್ನು ಆರೋಪಿಯು ಹತ್ಯೆ ಮಾಡಿ ಸಾಕ್ಷ್ಯ ಗಳನ್ನು ನಾಶಪಡಿಸಲು ಸಲುವಾಗಿ ಲಕ್ಷ್ಮಿಪುರ ಕೆರೆ ಅಂಗಳದಲ್ಲಿ ಆರೋಪಿಯು ಮೃತಳನ್ನು ಹೂತು ಹಾಕಿರುತ್ತಾನೆ . | ಹಣಕಾಸಿನ ವಿಚಾರ |
| 11 | ಕೋಲಾರ ನಗರ ಪೊಲೀಸ್ ಠಾಣೆ | 37/2021 ಕಲಂ 302 ಐಪಿಸಿ | ದಿನಾಂಕ 20.04.2023 ರಂದು ಪಿರ್ಯಾದಿದಾರರು ಠಾಣೆಗೆ ಹಾಜರಾಗಿ ನೀಡಿದ ದೂರಿನ ಸಾರಾಂಶವೇನೆಂದರೆ ಪಿರ್ಯಾದಿಯು ಅಂಗಡಿ ಸಾಮಾನು ತರಲು ಕೋಲಾರಕ್ಕೆ ಬಂದಿದ್ದು ತಾನು ತನ್ನ ಹೆಂಡತಿಗೆ ಪೋನ್ ಮಾಡಿದಾಗ ಪೋನ್ ತೆಗೆದಿರುವುದಿಲ್ಲ. ಈ ಕೇಸಿನ ಆರೋಪಿಯು ತನ್ನ ಹೆಂಡತಿಯ ಕುತ್ತಿಗೆಗೆ ಚಾಕುವಿನಿಂದ ಹರಿತವಾದ ರಕ್ತ ಸ್ರಾವ ವಾಗಿ ಚಿಕಿತ್ಸೆ ಫಲಕಾರಿಯಾಗದೇ ಆರ್ ಎಲ್ ಜೆ ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾಳೆ. | ಕೌಟುಂಬಿಕ ಕಾರಣಗಳಿಗಾಗಿ ಜಗಳದ ಸಮಯದಲ್ಲಿ ಕೊಲೆ ಮಾಡಿರುತ್ತಾರೆ |

| | | | | |
|---|---|---|---|---|
| 12 | ಗಲ್‌ಪೇಟೆ | ಮೊ.ಸಂ:76/21 ಕಲಂ:302, 120(ಬಿ) 201, ರೆ/ವಿ 34 ಐಪಿಸಿ | ಆರೋಪಿ-03 ಜಾಕೀಯಾ ಫಿರ್ದೋಸ್ ರವರು ಮೃತನೊಂದಿಗೆ ಅಕ್ರಮ ಸಂಭಂಧ ಇಟ್ಟುಕೊಂಡಿರುತ್ತಾರೆ. ದಿನಾಂಕ: 04-04-2021 ರಂದು ಮೃತನಿಗೆ ಅಮೀನಾ ರವರೊಂದಿಗೆ ಮದುವೆಯಾಗುತ್ತದೆ. ಆರೋಪಿ-03 ರವರಿಗೆ ಮೃತನು ತನ್ನನ್ನು ಬಿಟ್ಟು ಬೇರೆ ಮಹಿಳೆಯೊಂದಿಗೆ ಮದುವೆಯಾಗಿರುವುದು ಹಾಗೂ ಇನ್ನೊಂದು ಮಹಿಳೆಯೊಂದಿಗೆ ಸಂಬಧ ಸಹಿಸದೇ ಆರೋಪಿ-01 ರವರಿಗೆ ಸುಪಾರಿ ಕೊಟ್ಟು, ಕೊಲೆ ಮಾಡಲು ತಿಳಿಸಿರುತ್ತಾರೆ. ಅದರಂತೆ ಆರೋಪಿ-01 ರವರು ಆರೋಪಿ-2 ರವರ ಸಹಾಯದಿಂದ ಮೃತ ಜಬೀ ರವರನ್ನು ನೆಡುವಂಚ ಗ್ರಾಮಕ್ಕೆ ಕರೆಯಿಸಿಕೊಂಡು ಕೊಲೆ ಮಾಡಿರುತ್ತಾರೆ. | ಅಕ್ರಮ ಸಂಭಂಧ |
| 13 | ಕೋಲಾರ (ಗ್ರಾ) ಠಾಣೆ | 243/2021, ಕಲಂ-302 ಐಪಿಸಿ ದಿ.01/07/2021 | ದಿನಾಂಕ:30.06.2021 ರಂದು ಈ ಕೇಸಿನ ಆರೋಪಿ ಮೃತ ಬಾನುಪ್ರಿಯ ಮತ್ತು ಅವರ ಗಂಡನಾದ ಹರೀಶ್ ಸುಮಾರು ಒಂದು ವರ್ಷದಿಂದ ಸಂಸಾರ ಮತ್ತು ವರಧಕ್ಷಣೆ ವಿಚಾರದಲ್ಲಿ ಗಲಾಟೆಗಳು ಮಾಡಿಕೊಳ್ಳುತ್ತಿದ್ದು ಆರೋಪಿಯು ತನ್ನ 2 ವರ್ಷದ ನಿಧಿ ರವರನ್ನು ನೇಣು ಹಾಕಿ ಸಾಯಿಸಿ ನಂತರ ಆರೋಪಿಯು ಸಹ ನೇಣು ಹಾಕಿಕೊಂಡು ಮೃತಪಟ್ಟಿದ್ದು ಕಾನೂನು ಕ್ರಮಕ್ಕಾಗಿ ದೂರು. | ಕುಟುಂಬ ಕಲಹ |
| 14 | ಕೋಲಾರ (ಗ್ರಾ) ಠಾಣೆ | 378/2021, ಕಲಂ-302 ಐಪಿಸಿ | ದಿನಾಂಕ;16.09.202021 ರಂದು ಪಿರ್ಯಾದಿ ಅಣ್ಣ ಮೃತನಾದ ಮಂಜುನಾಥ ರವರು ಮೈಯಲ್ಲಿ ಉಷಾರಿಲ್ಲದ ಕಾರಣ ತನ್ನ ಬಾಬತ್ತು ಪ್ಯಾಸೆಂಜರ್ ಆಟೋದಲ್ಲಿ ಆಸ್ಪತ್ರೆಗೆ ಹೋಗಿ ಬರುವುದಾಗಿ ಹೇಳಿ ಹೋಗಿದ್ದು ನಂತರ ಸಂಪರ್ಕಕ್ಕೆ ಸಿಗದ ಕಾರಣ ಹುಡುಕಲಾಗಿ ಗ್ರಾಮದ ಪಕ್ಕದ ಅರಣ್ಯದಲ್ಲಿ ಆಟೋ ಪಕ್ಕದಲ್ಲಿ ಬಿದ್ದಿದ್ದು ನೋಡಲಾಗಿ ಯಾರೋ ದುಷ್ಕಮಿಗಳು ಯಾವುದೋ ಉದ್ದೇಶದಿಂದ ಅರಣ್ಯದ ಒಳಗಡೆ ಕರೆದುಕೊಂಡು ಹೋಗಿ ಹರಿತವಾದ ಆಯುಧದಿಂದ ಎಡಗೈ ಮುಂಗೈ ಮೇಲೆ ಮತ್ತು ಕತ್ತನ್ನು ಕೊಯ್ದು ಸಾಯಿಸಿದ್ದು ಆರೋಪಿಗಳ ಪತ್ತೆಗಾಗಿ ದೂರು. | ಆರೋಪ ಸಾಬೀತಾಗಿರುವುದಿಲ್ಲ. |
| 15 | ಕೋಲಾರ (ಗ್ರಾ) ಠಾಣೆ | 391/2021, ಕಲಂ-302, 201,120 (ಬಿ), 34 ಐಪಿಸಿ | ದಿನಾಂಕ:23.09.2021 ರಂದು ರಾತ್ರಿ 10.00 ಗಂಟೆಯ ಸಮಯದಲ್ಲಿ ಪಿರ್ಯಾದಿಯವರ ಮಗನಾದ ವಿನಯ್ ರವರನ್ನು ಈ ಕೇಸಿನ ಆರೋಪಿಗಳಾದ ಅಜಯ್ ಮತ್ತು ಇತರರು ಸೇರಿಕೊಂಡು ವಿನಯ್ ರವರು ಪ್ರೀತಿಸುತ್ತಿದ್ದ ಹರಳಕುಂಟೆ ಗ್ರಾಮದ ಹೆಚ್.ಎಸ್ ಲೇಖನ ರವರನ್ನು ಮೃತ ವಿನಯ್ ರವರು ಪ್ರೀತಿಸುತ್ತಿದ್ದ ಕಾರಣ ದ್ವೇಶದಿಂದ ರಾತ್ರಿ 10.00 ಗಂಟೆಯ ಮೇಲೆ ಯಾವುದೋ ಒಳ ಸಂಚು ನಡೆಸಿ ಕರೆಸಿಕೊಂಡು ಯಾವುದೋ ಆಯುದದಿಂದ ತಲೆಗೆ ಹೊಡೆದು ಕೊಲೆ ಮಾಡಿ ನಂತರ ಕೊಲೆಯನ್ನು ಮರೆಮಾಚುವ ಉದ್ದೇಶದಿಂದ ಮೃತ ವಿನಯ್ ರವರ ದ್ವಿಚಕ್ರ ವಾಹನವನ್ನು ವಿನಯ್ ರವರ ಮೇಲೆ ಮಲಗಿಸಿರುವುದಾಗಿ ಕೊಲೆ ಆರೋಪಿಗಳನ್ನು ಪತ್ತೆ ಹಚ್ಚಿ ಕಾನೂನು ಕ್ರಮಕಾಗಿ ದೂರು. | ಮಗಳ ಪ್ರೇಮ ವಿಚಾರವಾಗಿ |
| 16 | ವೇಮಗಲ್ | 12/2021 ಕಲಂ. 302 ಐ.ಪಿ.ಸಿ | ದಿನಾಂಕ 19/01/2021 ರಂದು ಮೂರ್ತಿ ತನ್ನ ಹೆಂಡತಿ ಮಕ್ಕಳ ಜೊತೆ ಕರೇನಹಳ್ಳಿ ಗ್ರಾಮಕ್ಕೆ ಬಂದಿದ್ದು ನಾರಾಯಣಮ್ಮ ರವರ ಮನೆಗೆ ಹೊಂದಿಕೊಂಡಂತೆ ಮೂರ್ತಿ ಮನೆಯಿದ್ದು ತಾನು ಆಗಾಗ ಬಂದು ಹೋಗುತ್ತಿದ್ದು ಅದರಂತೆ ಗ್ರಾಮಕ್ಕೆ ಬಂದಿದ್ದು ರಾತ್ರಿ ಪಿರ್ಯಾಧಿ ಜೊತೆಯಲ್ಲಿ ಎಲ್ಲರು ಮಾತನಾಡಿಕೋಂಡು ರಾತ್ರಿ ಮಲಗಲು ಮೂರ್ತಿ ತನ್ನ ಮನೆಯವರು ಮನೆಗೆ ಹೋಗಿದ್ದು ಮಾರನೆ ದಿನ ಮೂರ್ತಿ ತನ್ನ ಮಕ್ಕಳೊಂದಿಗೆ ಮನೆಯ ಬಳಿ ಇದ್ದಾಗ ಪಿರ್ಯಾಧಿ ಏಕೆ ನಿಂತಿರುವುದೆಂದ ಕೇಳಿದಾಗ ತನ್ನ ಹೆಂಡತಿ ಮನೆಯ ಬೀಗ ಹಾಕಿಕೊಂಡು ಯಾರಜೊತೆಯಲ್ಲೋ ಹೊರಟುಹೋಗಿದ್ದಾಳೆಂದು ಹೇಳಿ ತಾನು ಊರಿನಲ್ಲಿಯೆ ಓಡಾಡಿಕೋಂಡಿದ್ದು ದಿನಾಂಕ 22/01/2021 ರಂದು ತನ್ನ ತಾಯಿಯನ್ನು ಕರೆಯಿಸಿಕೋಂಡು ಆಟೋದಲ್ಲಿ ಹೊರಟು ಹೋಗಿದ್ದು ಮೂರ್ತಿ ಮನೆಯಿಂದ ದಕೆಟ್ಟವಾಸನೆ ಬರುತ್ತಿದ್ದು ತಾನು ಗ್ರಾಮಸ್ಥರ ಸಹಾಯದಿಂದ ಮನೆಯ ಬಾಗಿಲು ತೆಗೆದು ಹೋಗಿ ನೋಡಲಾಗಿ ಮೂರ್ತಿ ಹೆಂಡತಿ ಮೋರಲು ಮಲಗಿದು ದೇಹ ಊತ ಬಂದಿದ್ದು ಮೃತಪಟ್ಟಿದ್ದು ಮೂರ್ತಿ ಯಾವುದೋ ಬಲವಾದ ಆಯುಧದಿಂದ ಕೊಲೆ ಮಾಡಿ ವಿಚಾರವನ್ನು ಮರೆಮಾಚಿ ಯಾರಿಗೂ ತಿಳಿಸದೆ ಹೊರಟು ಹೋಗಿರುತ್ತಾನೆಮತ ದೂರು | ಕೌಟುಂಬಿಕ ವ್ಯಾಜ್ಯ |
| 17 | ವೇಮಗಲ್ | 24/2021 ಗ/ಖ 302 ಐಪಿಸಿ | 15 ವರ್ಷಗಳ ಹಿಂದೆ ವಿಜಯಲಕ್ಷ್ಮೀಯೋಂದಿಗೆ ಆರೋಪಿತನ ಮದುವೆಯಾಗಿದ್ದು, 12 ವರ್ಷದ ಗಂಡುಮಗನಿದ್ದು ಸೋಮಶೇಖರನಿಗೆ ಮದ್ಯಪಾನ ಮಾಡುವ ಚಟ್ಟವಿದ್ದು, ಸಂಸಾರದಲ್ಲಿ ವಿನಾಕಾರಣ ಗಲಾಟೆಗಳನ್ನು ಮಾಡುತ್ತಿದ್ದು, ಆಗಾಗ ಪಂಚಾಯಿತ್ತಿಗಳನ್ನು ಸಹ ಮಾಡಿದ್ದು, ಈಗಿರುವಾಗ ದಿನಾಂಕ:18/02/2021 ರಂದು ಬೆಳಗಿನ ಜಾವ 4:00 ಗಂಟೆಯಲ್ಲಿ ವಿನಾಕಾರಣ ಗಲಾಟೆ ಮಾಡಿ ಮದ್ಯಪಾನ ಮಾಡಲು ದುಡ್ಡು ಕೇಳಿದ್ದು ,ಹಣನೀಡದ ತನ್ನ ಪತ್ನಿಯನ್ನು ಸುತ್ತಿಗೆಯಿಂದ ತಲೆಗೆ ಬಲವಾಗಿ ಹೊಡೆದಿದ್ದು, ನಂತರ ಅಕ್ಕ ಪಕ್ಕದವರು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದು ಮಾರ್ಗಮಧ್ಯೆ ಮೃತಪಟ್ಟಿರುವುದಾಗಿ ನೀಡಿದ ದೂರು. | ಕೌಟುಂಬಿಕ ಕಾರಣ |

| | | | | |
|---|---|---|---|---|
| 18 | ವೇಮಗಲ್ | 0172/2021 IPC 1860 U/s: 302 R/w 149 IPC | ದಿ: 09-10-2021 ರಂದು ಬೆಳಿಗ್ಗೆ 7:30 ಗಂಟೆಯಲ್ಲಿ ಫಿರ್ಯಾದಿದಾರರು ತಮ್ಮ ಮನೆಯಲ್ಲಿದ್ದಾಗ ಮುರಳಿ @ ಮುನಿಚೌಡ ಎಂಬುವರು ಮನೆಯ ಬಳಿ ಬಂದು ತನ್ನ ತಮ್ಮ ಚಂದ್ರ ನರಸಾಪುರ ಫ್ಲೈಓವರ ಬಳಿ ಮೃತಪಟ್ಟಿರುವುದಾಗಿ ತಿಳಿಸಿದ್ದು, ಹೋಗಿ ನೋಡಲಾಗಿ ಬಲಕಣ್ಣು ಮತ್ತು ಎಡಗಾಲಿಗೆ ರಕ್ತಗಾಯವಾಗಿದ್ದು, ಹಾಗೂ ಮೂಗಿನಿಂದ ರಕ್ತಬರುತ್ತಿದ್ದು, ಯಾವುದೋ ವಸ್ತುವಿನಿಂದ ಕುತ್ತಿಗೆ ಬಿಗಿದು ಉಸಿರುಗಟ್ಟಿಸಿ ಸಾಯಿಸಿರುವುದಾಗಿ ಈ ಬಗ್ಗೆ ಮುನಿಚೌಡ, ಆನಂದ, ಕೆಂದಟ್ಟಿ ರಾಜೇಶ್, ರಾಜೇಶ್ ಮತ್ತು ಶ್ರೀನಾಥ್ ರವರ ಮೇಲೆ ಅನುಮಾನವಿರುವುದಾಗಿ ನೀಡಿದ ದೂರು. | ಮೊಬೈಲ್ ವಿಚಾರಕ್ಕೆ ಗಲಾಟೆ ಕ್ಷುಲ್ಲಕ ಕಾರಣ |
| 19 | ವೇಮಗಲ್ | 0200/2021 U/S 302 IPC | ದಿ.18.12.2021 ರಂದು ರಾತ್ರಿ 20.00 ಗಂಟೆಯಿಂದ 20.30 ಗಂಟೆಯ ಮಧ್ಯೆ ಪಿರ್ಯಾದಿ ಮಾವನಾದ ವೆಂಕಟರವಣ @ ವೆಂಕಿ ರವರನ್ನು ಯಾರೋ ದುಷ್ಕರ್ಮಿಗಳು ಯಾವುದೋ ಆಯುಧದಿಂದ ಕೊಚ್ಚಿ ಕೊಲೆ ಮಾಡಿರುತ್ತಾರೆಂದು ಮುಂದಿನ ಕ್ರಮ ಕೈಗೊಳ್ಳಲು ಕೋರಿ ನೀಡಿದ ದೂರು. | ಹಳೆ ದ್ವೇಷ |
| 20 | ಮಾಲೂರು | 30/2021 ಕಲಂ-302 ಐ.ಪಿ.ಸಿ | ದಿನಾಂಕ.25-01-2021 ರಂದು ಪಿರ್ಯಾಧಿ ಮತ್ತು ಈತನ ಹೆಂಡತಿ ಸ್ವಂತ ಕೆಲಸದ ಮೇಲೆ ಮಾಗೊಂದಿ ಗ್ರಾಮಕ್ಕೆ ಹೋಗಿ ಮನೆಗೆ ಬಂದಿದ್ದು, ಸುರೇಶ್ ಎಂಬುವನು ಪೋನ್ ಮಾಡಿ, ನಿಮ್ಮ ಅಣ್ಣ ಆಂಜಿನಪ್ಪ ಗ್ರಾಮದ ಮಧ್ಯಭಾಗದಲ್ಲಿರುವ ನಾರಾಯಣಪ್ಪ ರವರ ಮನೆಯ ಬಳಿ ಖಾಲಿ ಜಾಗದಲ್ಲಿ ಬಿದ್ದು ಸತ್ತು ಹೋಗಿದ್ದು ಸುರೇಶ್ ಯಾವುದೇ ವೈಷಮ್ಯದಿಂದ ಆಂಜಿನಪ್ಪನ ಮೇಲೆ ಗಲಾಟೆ ಮಾಡಿ, ಟವಲ್‌ನಿಂದ ಕತ್ತಿಗೆ ಸುತ್ತಿ ಬಿಗಿದ್ದು, ಕೊಲೆ ಮಾಡಿರುವುದಾಗಿ ದೂರು. | ಕ್ಷುಲಕ ಕಾರಣಕ್ಕೆ |
| 21 | ಮಾಲೂರು | ಮೊ.ಸಂ 75/2021 ಕಲಂ143, 147,,148, ,341,,302 ರೆ/ವಿ 149 ಐಪಿಸಿ ಸೆಕ್ಷನ್ 3(ಕ್ಯೂ) ಎಸ್.ಸಿ.ಎಸ್‌ಟಿ ಪಿಓಎ ಆಕ್ಟ್ | ದಿನಾಂಕ 18-03-2021 ಮಧ್ಯಾಹ್ನ 3-00 ಗಂಟೆಗೆ ಪಿರ್ಯಾದಿ ಮತ್ತು ಗಿರೀಶ್‌ರವರುಮಾಲೂರಿಗೆ ಬರುತ್ತಿದ್ದಾಗ ಗಂಗಾಪುರ ಗೇಟ್‌ನಲ್ಲಿ ಬಂದಾಗ ಗಿರೀಶ್ ರವರು ಅಡ್ಡಗಟ್ಟಿ ಮಂಜು @ ಲೇವರ್ ಮಂಜು @ ಮಂಜುನಾಥ ಇತರೆ 8-9 ಜನರ ಕಾರದ ಪುಡಿ ಹಾಕಿ ಮಚ್ಚು ಮತ್ತು ಲಾಂಗ್‌ನಿಂದ ಹೊಡೆದು ಕೊಲೆ ಮಾಡಿರುವುದಾಗಿ ದೂರು | ವೈಷಮ್ಯ ದಿಂದ |
| 22 | ಮಾಲೂರು | ಮೊ.ಸಂ-126/2021 & ಕಲಂ-302, 201 ಐ.ಪಿ.ಸಿ. | ದಿ:02-05-2021 ರಂದು ಮಾರನಗೆರೆಯ ತಮ್ಮ ಮನೆಯಿಂದ ಹೊರಗೆ ಹೋದವನು ಸಂಜೆ ಆದರೂ ಮನೆಗೆ ಬಾರದ ಇದ್ದು ತಮ್ಮ ಗ್ರಾಮದ ಸುರೇಂದ್ರ ರವರು ಪೋನ್ ಮಾಡಿ ತಮ್ಮ ಬಾಬತ್ತು ತೋಟದ ಜಮೀನಿನಲ್ಲಿ ಕೆಲಸ ಮಾಡಿಕೊಂಡು ತೋಟದಲ್ಲಿನ ಕೃಷಿ ಹೊಂಡಾ ಬಳಿ ಇರುವ ಸುರೇಂದ್ರ ರವರ ಜಮೀನಿನಲ್ಲಿ ನೀರಿನ ಕಡೆ ನೋಡಲಾಗಿ ನೀರಿನಲ್ಲಿ ತನ್ನ ತಮ್ಮನ ತಲೆ ಕಾಣಿಸುತಿದ್ದು ಮೃತದೇಹವನ್ನು ಹೊರಗೆ ತೆಗೆದು ನೋಡಲಾಗಿ ಯಾರೋ ದುಷ್ಕರ್ಮಿಗಳು ಹಲ್ಲೆ ಮಾಡಿ ಕೃಷಿ ಹೊಂಡಾದ ಸಾಯಿಸಿ ರುವುದಾಗಿ ಅನುಮಾನ ವಿದ್ದು ಮುಂದಿನ ಕ್ರಮಕ್ಕಾಗಿ ದೂರು. | ಕೃಷಿ ಹೊಂಡಾದಲ್ಲಿ ಮೃತಪಟ್ಟಿರುವು ದರಿಂದ |
| 23 | ಮಾಲೂರು | ಮೊ.ಸಂ-135/2021 & ಕಲಂ-302, 307 ರೆ/ವಿ 34 ಐ.ಪಿ.ಸಿ. | ದಿನಾಂಕ.14-05-2021 ರಂದು ಪಿರ್ಯಾದಿ ಮನೆಯ ಬಳಿ ನಿಂತಿದ್ದು, ತನ್ನತಾಯಿ ಮುನಿರತ್ನಮ್ಮರವರು ಪಾತ್ರೆ ತೊಳೆಯುತ್ತಿದ್ದಾಗ ಲಕ್ಷ್ಮಯ್ಯ ಮತ್ತು ಶ್ರೀನಿವಾಸ್‌ರವರುತನ್ನ ಬಳಿ ಬಂದು ಲಕ್ಷ್ಮಯ್ಯಆತನಕೈಯಲ್ಲಿದ್ದಒಂದು ಚಾಕುವಿನಿಂದ ಏಕಾಏಕಿ ತನ್ನ ಭುಜದ ಬಳಿ ತಿವಿದಿದ್ದು, ಶ್ರೀನಿವಾಸ್ ಮರದ ರಿಪೀಸಿನಿಂದ ತನ್ನಎಡಮೊಕ್ಕೆಗೆ ಹೊಡೆದು ಹಲ್ಲೆ ಮಾಡಿದ್ದು, ಆಗ ತನ್ನತಾಯಿ ಮುನಿರತ್ನಮ್ಮರವರುತನ್ನನ್ನು ಕೊಲೆ ಮಾಡುತ್ತಾನೆಂತ ತಿಳಿದು ಬಿಡಿಸಲು ಬಂದಾಗ ಲಕ್ಷ್ಮಯ್ಯಆದೇ ಚಾಕುವಿನಿಂದತನ್ನತಾಯಿಯಎಡಎದೆಗೆತಿವಿದು ಪ್ರಜ್ಞೆತಪ್ಪಿ ಬಿದ್ದು ಹೋದಳು ಚಿಕಿತ್ಸೆಪಡಿಸಿದರೂ ಫಲಕಾರಿಯಾಗದೆ ಮೃತಪಟ್ಟಿರುತ್ತಾನೆಂತದೂರು. | ಸೈಟಿನ ವಿಚಾರದಲ್ಲಿ |
| 24 | ಮಾಲೂರು | ಮೊ.ಸಂ 191/2021 ಕಲಂ 302 ಐಪಿಸಿ | ದಿನಾಂಕ 03/07/2021 ರಂದು ಮುನಿಯಪ್ಪರವರು ಸಂಸಾರ ವಿಚಾರದಲ್ಲಿ ಜಗಳ ಮಾಡಿಕೊಳ್ಳುತ್ತಿದ್ದಾಗ ಆರೋಪಿ ವೆಂಕಟೇಶ್‌ರವರು ಮುನಿಯಪ್ಪರವರ ಮೇಲೆ ಗಲಾಟೆ ಮಾಡಿ ಬಂದೂಕಿನಿಂದ ಗುಪ್ತಾಂಗಕ್ಕೆ ಶೂಟ್ ಮಾಡಿ ಕೊಲೆ ಮಾಡಿರುವುದಾಗಿ ದೂರು | ಸಂಸಾರದ ವಿಚಾರದಲ್ಲಿ |
| 25 | ಮಾಲೂರು | 360/2021 ಕಲಂ 302 ಐಪಿಸಿ | ದಿನಾಂಕ 30/10/2021 ರಂದು ರಾತ್ರಿ 11-00 ಗಂಟೆ ಸಮಯದಲ್ಲಿ ಆತನ ಕೆಲಸ ಮಾಡುತ್ತಿದ್ದ ಪ್ಯಾಕ್ಟರಿಯ ಬಳಿ ಬಂದು ಪ್ಯಾಕ್ಟರಿಯಲ್ಲಿ ಬಿದ್ದು ತಲೆಗೆ ಗಾಯವಾಗಿದೆ ಆಸ್ಪತ್ರೆಯಲ್ಲಿದ್ದಾನೆ ಎಂತ ತಿಳಿಸಿದ್ದು, ಪಿರ್ಯಾದಿ ಸಿಲಿಕಾನ್ ಸಿಟಿ ಆಸ್ಪತ್ರೆಗೆ ಹೋಗಿ ನೋಡಿದಾಗ ತನ್ನ ತಮ್ಮ ಅಜಿತ್ ಅನ್ನ್ ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ ನಂತರ ತನ್ನ ತಮ್ಮನನ್ನು ವಿರಾಮಪಟ್ಟೂರಿನ ಕೆಜಿ ಹೇಕ್ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಿ ಚಿಕಿತ್ಸೆ ಕೊಡಿಸಿದರೂ ಫಲಕಾರಿಯಾಗದೆ ಮೃತ ಪಟ್ಟಿರುವುದಾಗಿ ಮುಂದಿನ ಕ್ರಮ ಬಗ್ಗೆ ಕೋರಿ ದೂರು | ಹಳೇ ವೈಷಮ್ಯ ದಿಂದ |

| | | | | |
|---|---|---|---|---|
| 26 | ಮಾಸ್ತಿ ಪೊಲೀಸ್ ಠಾಣೆ | ಮೊ.ಸಂ:86/21, ಕಲಂ:302 ಐ.ಪಿ.ಸಿ | ಪಿರ್ಯಾದಿದಾರರ ಮಗಳಾದ ಕವಿತಾ ರವರನ್ನು 9 ವರ್ಷಗಳ ಹಿಂದೆ ಆರೋಪಿ ಶಂಕರ್‌ರವರಿಗೆ ಕೊಟ್ಟು ಮದುವೆ ಮಾಡಿದ್ದು, ಶಂಕರ ರವರು ಕುಡಿಯುವ ಅಭ್ಯಾಸ ಮಾಡಿಕೊಂಡು, ಸಂಸಾರದಲ್ಲಿ ಗಂಡ-ಹೆಂಡತಿ ಗಲಾಟೆಗಳು ಮಾಡಿಕೊಂಡು ನ್ಯಾಯ ಪಂಚಾಯ್ತಿ ಮಾಡಿ ಸರಿ ಮಾಡುತ್ತಿದ್ದೆವು. 2016ನೇ ಸಾಲಿನಲ್ಲಿ ಶಂಕರ್ ಕವಿತಾಳಿಗೆ ಹೊಡೆದಿರುವ ಬಗ್ಗೆ ಕೆ.ಜಿ.ಎಫ್ ಅಂಡರ್‌ಸನ್‌ಪೇಟೆ ಠಾಣೆಯಲ್ಲಿ ಕೇಸು ದಾಖಲಾಗಿರುತ್ತದೆ. ಶಂಕರ ಮತ್ತು ಮನೆಯವರು ಹೊಡೆದು ಕಿರುಕುಳ ನೀಡಿರುವ ಬಗ್ಗೆ ಬಂಗಾರಪೇಟೆ ಠಾಣೆಯಲ್ಲಿ ದಿನಾಂಕ:23/04/2021 ರಂದು ಕೇಸು ದಾಖಲಾಗಿರುತ್ತದೆ. ಹಿರಿಯರು ಬುದ್ದಿವಾದ ಹೇಳಿ ಸಂಸಾರ ಸರಿ ಮಾಡಿದ್ದು, ಒಂದೂವರೆ ತಿಂಗಳಿಂದ ಶಂಕರ ಮತ್ತು ಕವಿತಾ ಕಾಮಸಮುದ್ರದಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದರು. ದಿ:30/05/2021 ರಂದು ಕವಿತಾ ಬೆಳಿಗ್ಗೆ 11:00 ಗಂಟೆಯಲ್ಲಿ ಪಿರ್ಯಾದಿ ತಂಗಿ ನಾಗಮ್ಮರವರಿಗೆ ಪೋನ್ ಮಾಡಿ ಕಿರುಕುಳ ನೀಡುತ್ತಿದ್ದಾನೆಂದು ದೂರವಾಣಿಯಿಂದ ತಿಳಿಸಿದ್ದು, ನಂತರ ಕವಿತಾ ಮತ್ತು ಶಂಕರ್ ರವರ ಫೋನುಗಳು ಸ್ವಿಚ್ ಆಫ್ ಆಗಿರುತ್ತೆ. ದಿ:10/06/2021 ರಂದು ಬಂಗಾರಪೇಟೆ ಠಾಣೆಗೆ ಹೋದಾಗ ಕರಪತ್ರ ತೋರಿಸಿದ್ದರಿಂದ ಅನುಮಾನ ಬಂದು ಮಾಸ್ತಿ ಠಾಣೆಗೆ ಬಂದು ವಿಚಾರ ಮಾಡಿದ್ದು, ಠಾಣೆಯಲ್ಲಿ ಕವಿತಾಳ ಭಾವಚಿತ್ರ ಮತ್ತು ಬಟ್ಟೆಗಳನ್ನು ತೋರಿಸಿದ್ದು, ಅಪರಿಚಿತ ಹೆಂಗಸು ಕವಿತಾ ಆಗಿದ್ದು, ಕವಿತಾರವರನ್ನು ಆರೋಪಿ ಶಂಕರ ರವ | ಸಂಸಾರ ವಿಚಾರ |
| 27 | ಮಾಸ್ತಿ ಪೊಲೀಸ್ ಠಾಣೆ | ಮೊ.ಸಂ: 122/2021, ಕಲಂ: 498(ಎ), 302 ಐ.ಪಿ.ಸಿ | ಪಿರ್ಯಾದುದಾರರ ಮಗಳಾದ ಚಂದ್ರಿಕಾರವರನ್ನು 15 ವರ್ಷ ಗಳ ಹಿಂದೆ ದಿನ್ನಹಳ್ಳಿ ಗ್ರಾಮದ ಭದ್ರಪ್ಪರವರಿಗೆ ಕೊಟ್ಟು ಮದುವೆ ಮಾಡಿದ್ದು, ಇವರಿಗೆ ಇಬ್ಬರು ಮಕ್ಕಳಿದ್ದು, ಭದ್ರಪ್ಪ ಕುಡುಕ ನಾಗಿದ್ದು, ಹೆಂಡತಿಗೆ ವರದಕ್ಷಿಣೆಗಾಗಿ ಕಿರುಕುಳ ನೀಡಿ ಹೊಡೆದು ತವರಿಗೆ ಕಳುಹಿಸುತ್ತಿದ್ದು, ಪಿರ್ಯಾದಿ ಅಳಿಯನಿಗೆ ಹಣ ಕೊಟ್ಟರು ಸಹ ಆರೋಪಿ ಹೆಂಡತಿಗೆಯನ್ನು ಕೂಲಿಗೆ ಕಳುಹಿಸಿ ಬಂದ ಹಣವನ್ನು ಕಿತ್ತುಕೊಂಡು ಹೊಡೆಯುತ್ತಿದ್ದನೆಂದು, ಹಲವಾರಿ ಭಾರಿ ಪಂಚಾಯ್ತಿ ಮಾಡಿ ಬುದ್ದಿವಾದ ಹೇಳಿದರೂ ಸಹ ದಿನಾಂಕ:26/11/21ರಂದು ಸಂಜೆ 4:30 ಗಂಟೆಯಲ್ಲಿ ಆರೋಪಿ ಭದ್ರಪ್ಪ ಶಾಲೆಯಿಂದ ಬಂದ ಮಕ್ಕಳಿಗೆ ನಿಮ್ಮ ತಾಯಿ ತವರು ಮನೆಗೆ ಹೋಗಿದ್ದಾಳೆ, ನೀವು ಅಜ್ಜಿ ಮನೆಗೆ ಹೋಗಿ ಎಂದು ಮನೆಯ ಬೀಗದ ಕೈ ಕೊಟ್ಟು ಹೋಗಿದ್ದು, ಮಕ್ಕಳು ಮನೆಯ ಬೀಗವನ್ನು ತೆಗೆದು ಒಳಗೆ ಹೋದಾಗ ಚಂದ್ರಕಾ ಬಚ್ಚಲು ಮನೆಯ ಚಪ್ಪಡಿ ಕೆಳಗೆ ಶವವಾಗಿ ಬಿದ್ದಿದ್ದು, ಮಕ್ಕಳು ಪಿರ್ಯಾದಿಗೆ ವಿಚಾರ ತಿಳಿಸಿದ್ದು, ಪಿರ್ಯಾದಿ ಮತ್ತು ಇತರರು ಬಂದು ನೋಡ ಲಾಗಿ ಚಂದ್ರಿಕಾಳ ಮೈ ಮೇಲೆ ಗಾಯಗಲಾಗಿದ್ದು, ಬಳೆಗಳು ಹೊಡೆದಿದ್ದು, ಭದ್ರಪ್ಪ ಚಂದ್ರಿಕಾಳನ್ನು ವೇಲಿನಿಂದ ಕುತ್ತಿಗೆಗೆ ಸುತ್ತಿ ಸಾಯಿಸಿರುತ್ತಾ ನೆಂದು ದೂರು | ಸಂಸಾರ ವಿಚಾರ |
| 28 | ಮಾಸ್ತಿ ಪೊಲೀಸ್ ಠಾಣೆ | ಮೊ.ಸಂ: 131/2021, ಕಲಂ:498(ಎ), 302, 504 ಐಪಿಸಿ | ಪಿರ್ಯಾದಿದಾರರ ಅಕ್ಕನ ಮಗಳಾದ ಶಾಂತಮ್ಮರವರನ್ನು 10 ವರ್ಷಗಳ ಹಿಂದೆ ತಮಿಳುನಾಡಿನ ಅಂಚಟ್ಟಿಯ ಮೋಹನ್ ರವರಿಗೆ ಕೊಟ್ಟು ಮದುವೆ ಮಾಡಿದ್ದು, ಇವರು ತೊಳಕನಹಳ್ಳಿ ಯಲ್ಲಿ ಗ್ರಾಮದಲ್ಲಿ ವಾಸವಾಗಿದ್ದು, ಇವರಿಗೆ ಇಬ್ಬರು ಗಂಡು ಮಕ್ಕಳಿದ್ದು, ಮೋಹನ್ ಕುಡಿಯುವ ಹವ್ಯಾಸ ಮಾಡಿ ಕೊಂಡು ಹೆಂಡತಿ ಮಕ್ಕಳನ್ನು ಅನಾಧಾರಣೆ ಮಾಡಿ ಹೆಂಡತಿಯ ಮೇಲೆ ಗಲಾಟೆ ಮಾಡುತ್ತಿದ್ದನೆಂದು, ಈ ಬಗ್ಗೆ ಗ್ರಾಮಸ್ಥರು ಪಂಚಾಯ್ತಿ ಮಾಡಿ ಬುದ್ದಿ ಹೇಳಿದ್ದು, ದಿನಾಂಕ:24/12/2021 ರಂದು ಶಾಂತಮ್ಮ ಕೂಲಿಗೆ ಹೋಗಿ ಬಂದು ಸಂಜೆ 7:00 ಮನೆಯಲ್ಲಿ ದ್ದಾಗ ಮನೆಗೆ ಬಂದ ಮೋಹನ್ ಶಾಂತಮ್ಮಯನ್ನು ಕುಡಿ ಯಲು ಹಣ ಕೇಳಿ ಕೊಡದಿದ್ದಾಗ ಹೆಂಡತಿಯ ಮೇಲೆ ಗಲಾಟೆ ಮಾಡುತ್ತಿದ್ದಾಗ ಬಾಲಮ್ಮ ಮತ್ತು ಅಕ್ಕಪಕ್ಕದವರು ಬುದ್ದಿವಾದ ಹೇಳಿ ಕಳಿಹಿಸಿದ್ದು, ರಾತ್ರಿ 12:00ಗಂಟೆಯ ನಂತರ ಶಾಂತಮ್ಮ ರವರ ಮೇಲೆ ಗಲಾಟೆ ಮಾಡಿ ಹೊಡೆದು ಸಾಯಿಸಿರುತ್ತಾ ನೆಂದು | ಸಂಸಾರ ವಿಚಾರ |

# 2022

| ಕ್ರ.ಸಂ | ಪೊಲೀಸ್ ಠಾಣೆ ಹೆಸರು | ಮೊಸಂ ಮತ್ತು ಕಲಂ | ಘಟನೆಯ ವಿವರ | ಕೊಲೆಗೆ ಕಾರಣ |
|---|---|---|---|---|
| 1 | ಮುಳಬಾಗಲು ನಗರ ಠಾಣೆ | 150/2022 ಕಲಂ 302.307 ಐ.ಪಿ.ಸಿ | ದಿನಾಂಕ: 06-12-2022 ರಂದು ಸಂಜೆ 06-00 ಗಂಟೆಗೆ ಇಲ್ಲಿಗೆ ಕರೆದುಕೊಂಡು ಬಂದು ಇಲ್ಲೇ ಮಲಗಿಕೊಂಡಿರುತ್ತೇವೆ. ದಿನಾಂಕ: 07-12-2022 ರಂದು ಬೆಳಗ್ಗೆ 04:00 ಗಂಟೆಗೆ ನಾನು ತಂದಿದ್ದ ಪೆಟ್ರೋಲ್‌ನ್ನು ಸುರಿದು ಬೆಂಕಿ ಇಟ್ಟಿದ್ದು ಅಕ್ಷಯ ಮೃತಪಟ್ಟಿದ್ದು ಉದಯಶ್ರೀಗೆ ಸುಟ್ಟಗಾಯಗಳಾಗಿರುತ್ತೆ, ನನಗೆ ಭಯವಾಗಿ ಆತ್ಮಹತ್ಯೆ ಮಾಡಿಕೊಳ್ಳದೇ ಸುಮ್ಮನೇ ಕುಳಿತುಕೊಂಡಿರುತ್ತೇನೆಂದು ತಿಳಿಸಿರುತ್ತಾರೆ. ನಂತರ ಇಲ್ಲಿದ್ದವರು ಯಾರೋ ಅಂಬ್ಯುಲೆನ್ಸ್‌ನಲ್ಲಿ ಆಸ್ಪತ್ರೆಗೆ ಸಾಗಿಸಿರುತ್ತಾರೆ. ಸದರಿ ಹಿರಿಯ ಮಗಳನ್ನು ಸಾಯಿಸಿದ & ಮತ್ತೊಬ್ಬ ಮಗಳನ್ನು ಸಾಯಿಸಲು ಪ್ರಯತ್ನಿಸಿದ ಜ್ಯೋತಿ ರವರ ಮೇಲೆ ಕಾನೂನು ಕ್ರಮಕ್ಕಾಗಿ ದೂರು | ಜೀವನದಲ್ಲಿ ಜಿಗುಪ್ಸೆಗೊಂಡು |
| 2 | ಗೌನಿಪಲ್ಲಿ ಪೊಲೀಸ್ ಠಾಣೆ | 70/2022 ಕಲಂ 323.324.504.506.448. 302 ಐಪಿಸಿ | ಪಿರ್ಯಾದಿಗೂ ಮತ್ತು ಆರೋಪಿಗು ಮೂತ್ರವಿಸರ್ಜನೆ ವಿಚಾರದಲ್ಲಿ ಗೌನಿಪಲ್ಲಿ ಸಂತೆಯಲ್ಲಿ ಜಗಳವಾಗಿದ್ದು ಪಿರ್ಯಾದಿಯ ತಂದೆ ಪ್ರಶ್ನೆ ಮಾಡಿದ್ದು ಆರೋಪಿಯು ಪಿರ್ಯಾದಿಯವರ ತಂದೆಗೆ ದೊಣ್ಣೆಯಿಂದ ಹೊಡೆದು ಎದೆಯ ಮೇಲೆ ಗುದ್ದಿ ಸಾಯಿಸಿರುತ್ತಾನೆ | ಕ್ಷುಲ್ಲಕ ವಿಚಾರದಲ್ಲಿ ಜಗಳವಾಗಿರುತ್ತದೆ |
| 3 | ಮುಳಬಾಗಲು ಗ್ರಾಮಾಂತರ ಠಾಣೆ | ಮೊ.ಸಂ.54/2022 ಕಲಂ 323-324-504-302- ರೆ.ವಿ.34 ಐಪಿಸಿ | ದಿನಾಂಕ:16-03-2022 ರಂದು ಸಂಜೆ ಸುಮಾರು 6-30 ಗಂಟೆ ಸಮಯದಲ್ಲಿ ಆರೋಪಿಗಳು ಜಮೀನು ವಿವಾದದ ದ್ವೇಷದ ಹಿನ್ನಲೆಯಲ್ಲಿ ರಾಮರಾಯನಕೋಟೆ ಬಳಿ ಜಗಳ ಮಾಡಿಕೊಂಡಿದ್ದು ಆರೋಇಗಳು ಸಮಾನ ಉದ್ದೇಶದಿಂದ ರಾಮರಾಯನಕೋಟೆಯ ಪ್ರಮೀಳಮ್ಮ ರವರನ್ನು ಕೊಲೆ ಮಾಡುವ ಉದ್ದೇಶದಿಂದ ಅವರ ಮನೆಯ ಬಳಿಗೆ ಕಲ್ಲು ದೊಣ್ಣೆ, ಮಚ್ಚಿನಿಂದ ಹೋಗಿ ಹೊಡೆದು ಗಾಯಪಡಿಸಿದ್ದು ಆಕೆಯನ್ನು.ಬೆಂಗಳೂರು ನಿಮ್ಹಾನ್ಸ್ ಆಸ್ಪತ್ರೆಗೆ ಸಾಗಿಸಿದಾಗ ಅಲ್ಲಿ ಮೃತಪಟ್ಟಿರುತ್ತಾಳೆ. | ಜಮೀನು ತಕರಾರು |
| 4 | ನಂಗಲಿ ಪೊಲೀಸ್ ಠಾಣೆ | ಮೊ.ಸಂ.69/2022 ಕಲಂ 302- ರೆ.ವಿ.34 ಐಪಿಸಿ | ದಿನಾಂಕ:8-5-2022 ರಂದು ರಾತ್ರಿ ಸುಮಾರು 7-00 ಗಂಟೆ ಸಮಯದಲ್ಲಿ ನಗವಾರ ಮಜರಾ ಕೊತ್ತೂರು ಗ್ರಾಮದ ವಾಸಿಯಾದ ವೆಂಕಟರಾಮಪ್ಪ ರವರು ಗ್ರಾಮದಲ್ಲಿ ಆರೋಪಿ ಸತ್ಯನಾರಾಯಣ ರವರ ಮನೆ ಬಳಿನಡೆದುಕೊಂಡು ಹೋಗುತ್ತಿದ್ದಾಗ ಆರೋಪಿಯು ಹಳೇ ದ್ವೇಷದಿಂದ ಕೈಯಲ್ಲಿ ದೊಣ್ಣೆ ಹಿಡಿದುಕೊಂಡು ಬಂದು ವಂಕಟರಾಮಪ್ಪ ರವರಿಗೆ ತಲೆಗೆ ಹೊಡೆದ ಪರಿಣಾಮ ವೆಂಕಟರಾಮಪ್ಪ ರವರ ತಲೆಗೆ ಗಾಯವಾಗಿ ರಕ್ತ ಗಾಯವಾಗಿದ್ದು ಅತನನ್ನು ಬೆಂಗಳೂರು ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಾಗ ದಿ;10-5-2022 ರಂದು ಬೆಳಿಗ್ಗೆ 10-15 ಗಂಟೆಗೆ ಮೃತಪಟ್ಟಿರುತ್ತಾರೆ. | ಕುಡಿದು ಹಲ್ಲೆ |
| 5 | ಮುಳಬಾಗಲು ಗ್ರಾಮಾಂತರ ಠಾಣೆ | ಮೊ.ಸಂ/.145/2022 ಕಲಂ 114-302-201 ರೆ.ವಿ..34 ಐಪಿಸಿ | ದಿನಾಂಕ:2015 ರ ಸಾಲಿನಲ್ಲಿ ಮಾಚು ಸಮಾಹಯಲ್ಲಿ ಆರೋಪಿ 1 ರವರು ಆತನಿಗೆ ಪೈಂಟರ್ ರಮೇಶ ರವರು ಜೈದು ಬೆದರಿಕೆ ಹಾಕಿರುವ ಹಿನ್ನಲೆಯಲ್ಲಿ ಅವರು ಆರೋಪಿ 2 ರವರಿಗೆ ಸುಪಾರಿ ನೀಡಿದ್ದು ಆತನು ಗಂಗಾಧರ, ಜಗನ್ ರವರೊಂದಿಗೆ ಸೇರಿ ಪೈಂಟರ್ ರಮೇಶನನ್ನು ಲಿಂಗಾಪುರದ ನಿರ್ಜನ ಪ್ರದೇಶಕ್ಕೆ ಕರೆದುಕೊಂಡು ಹೋಗಿಸಾಯಿಸಿ ಕೊಲೆ ಮಾಡಿರುತ್ತಾರೆ. | ಹಿಂದಿನ ದ್ವೇಷ |
| 6 | ಮುಳಬಾಗಲು ಗ್ರಾಮಾಂತರ ಠಾಣೆ | ಮೊ.ಸಂ.259/2022 ಕಲಂ 302 ಐಪಿಸಿ | ದಿನಾಂಕ:23-10-2022 ರಂದು ರಾತ್ರಿ ಆವಣಿ ಗ್ರಾಮದಲ್ಲಿ ಜಿಡಮ್ಮ ರವರನ್ನು ಯಾವುದೋ ಕಾರಣಕ್ಕೆ ಕೊಲೆ ಮಾಡಿರುತ್ತಾರೆ. ಆಕೆಯ ಸಹವಾಸದಲ್ಲಿ ಇದ್ದ ಶಂಕರ ರವರು ಕೊಲೆ ಮಾಡಿರುವುದಾಗಿರುತ್ತೆ. | ಲೈಂಗಿಕ ಸಂಬಂಧ ಹಿನ್ನಲೆ |
| 7 | ಗ್ರಾಮಾಂತರ ಪೊಲೀಸ್ ಠಾಣೆ | ಮೊ.ಸಂ.223/2022 ಕಲಂ 302-203 ಐಪಿಸಿ | ದಿನಾಂಕ: ದಿನಾಂಕ:16-09-2022 ರಂದು ರಾತ್ರಿ ನಲ್ಲಾಂಡಹಳ್ಳಿ ಗ್ರಾಮದಲ್ಲಿ ಕೃಷ್ಣಪ್ಪ ರವರನ್ನು ಅದೇ ಗ್ರಾಮದಲ್ಲಿ ಆರೋಪಿ ಗಂಗಾಧರ ರವರು ಟ್ರಾಕ್ಟರ್ ಖರೀದಿಸಿದ ಹಿನ್ನಲೆಯಲ್ಲಿ ಮದ್ಯಪಾನ ಪಾರ್ಟಿ ನೀಡಿದಾಗ ಆರೋಪಿ ಗಂಗಾಧರನು ಕೃಷ್ಣಪ್ಪರವರು ತನ್ನ ಕೇಸಿನಲಿ ತನಗೆ ಅನುಕೂಲವಾಗಿ ಸಾಕ್ಷಿ ನೀಡಿಲ್ಲವೆಂದು ದ್ವೇಷದಿಂದ ಉಳಿದ 2) ಸತೀಶ 3) ಕೇಶವ 4) ಚಿಂದಪ್ಪ ರವರ ಸಹಾಯದಿಂದ ಕೃಷ್ಣಪ್ಪನ ತಲೆ ಮೇಲೆ ಕಲ್ಲು ಹಾಕಿ ಗಾಯ ಪಡಿಸಿದ್ದು ನಂತರ ಕೃಷ್ಣಪ್ಪ ರವರು ಹೊಸಕೋಟೆ ಎಲಿಕಾನ ಸಿಟಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ನಂತರ ಕೋಲಾರ ಆರ್.ಎಲ್.ಜಾಲಪ್ಪ | ಹಿಂದಿನ ದ್ವೇಷದಿಂದ |

| | | | | |
|---|---|---|---|---|
| 8 | ಶ್ರೀನಿವಾಸಪುರ ಪೊಲೀಸ್ ಠಾಣೆ | 36/2022 ಕಲಂ 323.302.149 ಐ.ಪಿ.ಸಿ | ದಿ:11.02.2022 ರಂದು ಆರೋಪಿತರು ಪಿರ್ಯಾದಿದಾರರ ಮೇಲೆ ಗುಂಪುಕಟ್ಟಿಕೊಂಡು ಬಂದು ಪಿರ್ಯಾದಿಯ ತಂದೆಯನ್ನು ಕೈ ಮತ್ತು ಕಾಲುಗಳಿಂದ ಹೊಡೆದಿದ್ದು ನಂತರ ಬೆಳಗ್ಗೆ ಮುನಿಯಪ್ಪ ಮತ್ತು ಇತರರು ತಮ್ಮ ಅಕ್ಕನ ಮನೆಯ ಬಳಿ ಹೋಗಿ ನಿಮ್ಮ ತಂದೆಯವರನ್ನು ಸಾಯಿಸಿದ್ದೇವೆ ನೀವು ಏನು ಕಿತ್ತುಕೋಳ್ಳಕ್ಕೆ ಆಗುತ್ತೆ ಕಿತ್ತುಕೊಳ್ಳಿ ಎಂದು ಆವಾಜ್ ಹಾಕಿ ಹೋಗಿದ್ದು ಬೆಳಗ್ಗೆ ಹೋಗಿ ನೋಡಿದಾಗ ಮಾವಿನ ತೋಪಿನಲ್ಲಿ ಹುಣಸೆಮರಕ್ಕೆ ನೇಣು ಬಿಗಿದ ರೀತಿಯಲ್ಲಿ ಸತ್ತಿರುತ್ತಾರೆಂದು ದೂರು. | ಹಳೇದ್ವೇಷದಿಂದ |
| 9 | ಶ್ರೀನಿವಾಸಪುರ ಪೊಲೀಸ್ ಠಾಣೆ | 44/2022 ಕಲಂ 302 ಐ.ಪಿ.ಸಿ | ದಿನಾಂಕ:21.02.2022 ರಂದು ಸಂಜೆ ಸುಮಾರು 4.45 ಗಂಟೆಯಲ್ಲಿ ಪಿರ್ಯಾದಿದಾರರು ಠಾಣೆಗೆ ಹಾಜರಾಗಿ ನೀಡಿದ ದೂರಿನ ಸಾರಾಂಶವೇನೆಂದರೆ ಪಿರ್ಯದಿಯ ತಂದೆ ಮುನಿಶಾಮಿರವರು ಸುಮಾರು 45 ವರ್ಷಗಳಿಂದ ಕುರಿ ವ್ಯಾಪಾರ ಮಾಡುತ್ತಿದ್ದು ಇವರ ಜೇಬಿನಲ್ಲಿ ಯಾವಾಗಲೂ ಹಣವಿರುತ್ತೆ ಇದೇ ದಿನ ದಿನಾಂಕ:21.02.2022 ರಂದು ಬೆಳಗ್ಗೆ ಸುಮಾರು 11.30 ಗಂಟೆಯಿಂದ ಸಂಜೆ ಸುಮಾರು 4.00 ಗಂಟೆಯ ಸಮಯದೊಳಗೆ ತಮ್ಮ ತಂದೆಯವರನ್ನು ಇಂದಿರಾನಗರ ಸಮೀಪ ಮಾವಿನ ತೋಟದಲ್ಲಿ ಯಾವುದೋ ದ್ವೇಷದಿಂದ ಯಾರೋ ಅಪರಿಚಿತರು ತಮ್ಮ ತಂದೆಯವರನ್ನು ಮಾವಿನ ತೋಟದಳಗೆ ಕರೆದುಕೊಂಡು ಹೋಗಿ ಯಾವುದೋ ಹರಿತವಾದ ಆಯುಧದಿಂದ ಕತ್ತು ಕೊಯ್ದು ಕೊಲೆ ಮಾಡಿರುತ್ತಾರೆಂದು ಕಾನೂನು ರೀತ್ಯಾ ಕ್ರಮ ಕೈಗೊಳ್ಳಲು ನೀಡಿದ ದೂರು. | ಹಣಕ್ಕಾಗಿ ಕೊಲೆ |
| 10 | ಶ್ರೀನಿವಾಸಪುರ ಪೊಲೀಸ್ ಠಾಣೆ | 207/2022 ಕಲಂ: 302.307.324 ಐ.ಪಿ.ಸಿ. | ಆರೋಪಿ. ಆರೋಪಿ ಹೆಂಡತಿ ಮತ್ತು ಮೃತ ಮದ್ಯಪಾನ ಮಾಡಿ ಊಟ ಮಾಡುವ ವಿಚಾರದಲ್ಲಿ ಗಲಾಟೆ ಮಾಡಿಕೊಂಡು ಆರೋಪಿ ಮೃತನ ಕುತ್ತಿಗೆ ಮೇಲೆ ತುಳಿದು ಸಾಯಿಸಿರುತ್ತಾರೆಂದು ದೂರು. | ಮದ್ಯಪಾನ ವಿಚಾರ |
| 11 | ಶ್ರೀನಿವಾಸಪುರ ಪೊಲೀಸ್ ಠಾಣೆ | 232/2022 ಕಲಂ ಮನುಷ್ಯ ಕಾಣೆ ನಂತರ 302 ಐ.ಪಿ.ಸಿ. | ದಿ:06.09.2022 ರಂದು ಪಿರ್ಯಾದಿದಾರರ ಗಂಡ ಕೋರ್ಟ್ ಕೆಲಸದ ಸಲುವಾಗಿ ಬೆಳಗ್ಗ ಹೋಗಿದ್ದರು. ನಂತರ ತಾನು ಕೆಲಸ ಮುಗಿಸಿಕೊಂಡು ಸಂಜೆ 07.10 ಗಂಟೆಗೆ ಮನೆಗೆ ಬಂದು ನೋಡಲಾಗಿ ತನ್ನ ಗಂಡ ಮನೆಗೆ ಬಂದಿಲ್ಲವೆಂದು ನೀಡಿದ ದೂರು. | ಕಾಣೆ ಯಾದವರು ಮೃತವಾಗಿ ಪತ್ತೆಯಾಗಿ ರುತ್ತಾರೆ |
| 12 | ಗೌನಿಪಲ್ಲಿ ಪೊಲೀಸ್ ಠಾಣೆ | 82/2022 ಕಲಂ.143.147.148.323.324.307. 302 ರೆ/ವಿ 149 ಐಪಿಸಿ | ದಿನಾಂಕ 7/11/2022 ರಂದು ಗಂಡ ಹೆಂಡತಿಯ ವಿಚಾರದಲ್ಲಿ ಊರಿಗೆ ಕರೆದು ಕೊಂಡು ಹೋಗುವ ವಿಚಾರದಲ್ಲಿ ಗಲಾಟೆಗಳಾಗಿದ್ದು ರಾಜಿ ಪಂಚಾಯ್ತಿ ಮಾಡಿದ್ದು ಸದರಿ ಪಂಚಾಯ್ತಿ ವಿಫಲವಾಗಿದ್ದು ದಿನಾಂಕ 6/11/2022 ರಂದು ಆರೋಪಿಗಳು ಮೃತರ ಚಿಲ್ಲರೆ ಅಂಗಡಿಗೆ ಕಾರಿನಲ್ಲಿ ಗುದ್ದಿ ನಂತರ ದೊಣ್ಣೆಗಳಿಂದ ಹೊಡೆದು ಕೊಲೆ ಮಾಡಿರುತ್ತಾರೆ | ಗಂಡ ಹೆಂಡತಿ ಸಂಸಾರಿಕ ವಿಚಾರ |
| 13 | ಕೋಲಾರ ನಗರ ಪೊಲೀಸ್ ಠಾಣೆ | 40/2022 ಕಲಂ 302 ರೆ/ವಿ 34 ಐಪಿಸಿ | ದಿನಾಂಕ 15.03.2023 ರಂದು ರಾತ್ರಿ ಸುಮಾರು 10 ಗಂಟೆಯಲ್ಲಿ ಟೇಕಲ್ ಕ್ರಾಸ್ ನಲ್ಲಿರುವ ಚಾಲುಕ್ಯ ವೈನ್ಸ್ ನಲ್ಲಿ ಯುವಕರು ಕಡಿಮೆ ಹಣ ಕೊಟ್ಟು ಏಕೀ ಖಿಖಿಖಿಔಟಿಲು ಬಿಯರ್ ಕೊಡಿ ಎಂದು ಕೇಳಿದ್ದಕ್ಕೆ ಮೋಹನ್ ಇನ್ನು ಹಣ ಕೊಡಬೇಕು ಎಂದು ಕೇಳಿದ್ದಕ್ಕೆ ಪ್ರತಿ ದಿನ ಬಂದು ನಿಮ್ಮಲ್ಲಿಯೇ ಡಿಂಕ್ಸ್ ತೆಗೆದುಕೊಂಡು ಹೋಗುತ್ತೇವೆ ಅವಾಚ್ಯ ಶಬ್ದಗಳಿಂದ ಬೈದುಈ ಕೇಸಿನ ಆರೋಪಿಗಳು ಹರಿತವಾದ ಡ್ರ್ಯಾಗನ್ ನಿಂದ ತಿವಿದು ಕೊಲೆ ಮಾಡಿರುತ್ತಾರೆ. | ಹಣದ ವಿಚಾರವಾಗಿ ಜಗಳ ಮಾಡಿ ಕೊಲೆ ಮಾಡಿರುತ್ತಾರೆ |
| 14 | ಗಲ್‌ಪೇಟೆ | ಮೊ.ಸಂ:26/22 ಕಲಂ 143. 147. 148. 341. 302. ರೆ/ವಿ 149 | ಮೃತನಾದ ರವಿಕುಮಾರ್ @ ಗೂಟ್ ರವಿ ರವರು ಕಿರಣ್ ಬಾಬು. ತರುಣ್ @ ಅಗ್ಗಿ ಗುಂಪಿನ ಕಡೆಯವರಾಗಿದ್ದು. ಆರೋಪಿತರು ಮತ್ತೊಂದು ಗುಂಪಿನವರಾಗಿದ್ದು. ದಿನಾಂಕ:05/04/2022 ರಂದು ರಾತ್ರಿ 9-45 ಗಂಟೆಯಲ್ಲಿ ಕೋರ್ಟ್ ವೃತ್ತದ ಬಳಿ ಮೊಬೈಲ್ ವಿಚಾರದಲ್ಲಿ ಗಲಾಟೆಯಾಗಿ ನಂತರ ಮುನೇಶ್ವರ ದೇವಸ್ಥಾನದ ಹತ್ತಿರ ರವಿಕುಮಾರ್ ಮತ್ತು ಆತನ ಸ್ನೇಹಿತರು ಗಾಂಧಿನಗರಕ್ಕೆ ಹೋಗುತ್ತಿದ್ದಾಗ ಪ್ರಭಾಸ್ ಮತ್ತು ಆತನ ಕಡೆಯವರು ಗಲಾಟೆ ಮಾಡಿ ಸಾಯಿಸುವುದಾಗಿ ಬೆದರಿಕೆ ಹಾಕಿದ್ದು. ನಂತರ ರಾತ್ರಿ 10-30 ಗಂಟೆಗೆ ರವಿಕುಮಾರ್ ಮತ್ತು ಆತನ ಸ್ನೇಹಿತರೊಂದಿಗೆ ಗಾಂಧಿನಗರದ ಶ್ರೀ.ಆಂಜನೇಯಸ್ವಾಮಿ ವೃತ್ತ ಬಳಿ ನೀರು ಶುದ್ಧೀಕರಣ ಘಟಕದ ಎದುರು ಹೋಗುತ್ತಿದ್ದಾಗ ಪ್ರಭಾಸ್ ಮತ್ತು ಆತನ ಕಡೆಯವರು ರವಿಕುಮಾರ್ ನನ್ನು ಸಾಯಿಸುವ ಉದ್ದೇಶದಿಂದ ಪ್ರಭಾಸನು ಚಾಕುವಿನಿಂದ ಹೊಟ್ಟೆಗೆ ತಿವಿದಿದ್ದು. ಸಂತೋಷನು ರಾಡಿನಿಂದ ರವಿಕುಮಾರನ ತಲೆಗೆ ಹೊಡೆದು ಕೊಲೆ ಮಾಡಿರುವುದಾಗಿ ದೂರು. | ಹಳೇ ವೈಷಮ್ಯದಿಂದ ಹಾಗೂ |

| | | | | |
|---|---|---|---|---|
| 15 | ಕೋಲಾರ (ಗ್ರಾ) ಠಾಣೆ | 105/2022, ಕಲಂ-302, 34 ಐಪಿಸಿ | ದಿನಾಂಕ:25.02.2022 ರಂದು ಮೃತ ನಾರಾಯಣಸ್ವಾಮಿ ಮತ್ತು ಆರೋಪಿಗಳು ಗ್ರಾಮದ ಗೇಟ್ ಬಳಿ ಕುಳಿತುಕೊಂಡು ಕುಡಿಯುತ್ತಿದ್ದಾಗ ವಿನಾಕಾರಣ ಮೃತ ನಾರಾಯಣಸ್ವಾಮಿ ಆರೋಪಿ ಸುದರ್ಶನ್ ರವರನ್ನು ಪೋರಾ ನಿಯಮ್ಮನ್ನೇದೆಂಗಾ ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದಕ್ಕೆ ಆರೋಪಿಗಳು ಸೇರಿಕೊಂಡು ನಾರಾಯಣಸ್ವಾಮಿ ರವರನ್ನು ಕಪಾಳಕ್ಕೆ ಮತ್ತು ತಲೆಗೆ ಜೋರಾಗಿ ಹೊಡೆದು ರಕ್ತಗಾಯ ಪಡಿಸಿ ನಂತರ ರಚ್ಚೆಯ ಮೇಲೆ ಮಲಗಿಸಿ ಹೊರಟು ಹೋಗಿದ್ದು ಬೆಳಗ್ಗೆ ಎದ್ದು ನೋಡಲಾಗಿ ನಾರಾಯಣಸ್ವಾಮಿ ರವರು ಮೃತಪಟ್ಟಿದ್ದು ಆರೋಪಿಗಳ ಮೇಲೆ ಕಾನೂನು ಕ್ರಮಕ್ಕಾಗಿ ದೂರು. | ವಿನಾಕಾರಣ |
| 16 | ಕೋಲಾರ (ಗ್ರಾ) ಠಾಣೆ | 323/2022, ಕಲಂ-363, 302,201 ಐಪಿಸಿ | ದಿನಾಂಕ:27.06.2022 ರಂದು ಪಿರ್ಯಾದಿಯವರ ಅಳಿಯ ಆರೋಪಿ ಮಣಿಕಂಠ ರವರು ಭಜಂತ್ರಿ ಜಾತಿಗೆ ಸೇರಿದ್ದು ಕುಲಕಸುಬು ಕೆಲಸ ಮಾಡಿಕೊಂಡು ವಾಸವಾಗಿದ್ದು ಇತ್ತೀಚಿಗೆ ಆರೋಪಿಯು ಐ.ಪಿ.ಎಲ್ ಬೆಟ್ಟಿಂಗ್ ಕಟ್ಟುವದು ರೂಡಿಗತ ಮಾಡಿಕೊಂಡು ಕೈ ತುಂಬ ಸಾಲಗಳು ಮಾಡಿಕೊಂಡಿರುತ್ತಾರೆ. ಇದೆ ವಿಚಾರವಾಗಿ ಸಾಲಗಾರರು ಅಂಗಡಿ ಬಳಿ ಬಂದು ಹಣ ವಾಪಸ್ಸು ನೀಡುವಂತೆ ಗಲಾಟೆ ಮಾಡಿದ್ದು ಸದರಿ ಗಲಾಟೆಯನ್ನು ಆರೋಪಿ ಮಗ ಮೃತ ನಿಖಿಲ್ ಕುಮರ್ ರವರು ನೋಡಿದ್ದು ನಂತರ ಮನೆಗೆ ಹೋಗಿ ಅವರ ತಾಯಿಗೆ ಹೇಳಿದ್ದರಿಂದ ಮನೆಯಲ್ಲಿ ಗಲಾಟೆಯಾಗಿರುದನ್ನು ಗಮನದಲ್ಲಿಟ್ಟುಕೊಂಡು ಮಗನನ್ನು ಸಾಯಿಸುವ ಉದ್ದೇಶದಿಂದ ಕೆರೆಯ ನೀರಿನ ಬಳಿ ಕರೆದುಕೊಂಡು ಬಂದು ತನ್ನ 11 ವರ್ಷದ ನಿಖಿಲ್ ಕುಮರ್ ರವರನ್ನು ನೀರಿನಲ್ಲಿ ಮುಳಗಿಸಿ ಸಾಯಿಸಿರುವುದಾಗಿ ದೂರು. | ಐ.ಪಿ.ಎಲ್ ಬೆಟ್ಟಿಂಗ್ ಕಟ್ಟುವದು ರೂಡಿಗತ ಸಾಲಗಳ ಬದೆಯಿಂದ |
| 17 | ಕೋಲಾರ (ಗ್ರಾ) ಠಾಣೆ | 541/2022 ಕಲಂ. 201, 302 ಐಪಿಸಿ | ದಿನಾಂಕ 29/10/2022 ರಂದು ಪಿರ್ಯಾದಿ ತನ್ನ ತೋಟದ ಬಳಿಗೆ ಹೋಗುತ್ತಿದ್ದಾಗ ಕಾಳಹಸ್ತಿಪುರ ಕೆರೆಯ ಅಂಗಳದಲ್ಲಿ ಕಾಲು ದಾರಿಯ ಪಕ್ಕದಲ್ಲಿ ತೆಗೆದಿರುವ ಗುಂಡಿಯಲ್ಲಿ ಒಂದು ಮೃತ ದೇಹ ಕಾಣಿಸಿದ್ದು ತಾನು ಮತ್ತು ತನ್ನ ಗ್ರಾಮದ ವೆಂಕಟೇಶರವರು ಹತ್ತಿರ ಹೋಗಿ ನೋಡಲಾಗಿ ಮುಖದ ಮೇಲೆ ಯಾವುದೋ ಒಂದು ಪ್ಲಾಸ್ಟಿಕ್ ಗೋಣಿ ಚೀಲ ಮುಚ್ಚಿದ್ದು ಒಂದು ಕಲ್ಲು ಸಹ ಇದ್ದು ಮುಖಕಾಣಿಸುತ್ತಿರಲಿಲ್ಲ. ಮೃತ ಮಹಿಳೆ ಸುಮಾರು 30-35 ವರ್ಷ ವಯಸ್ಸಾಗಿದ್ದು ಬಲ ಕೈ ಮೇಲೆ ಅಪ್ಪ, ಅಮ್ಮ ಎಂಬ ಅಕ್ಷರ ಎಡಕೈ ಮೇಲೆ ಎಸ್.ಎಂ.ಪಿ ಎಂಬ ಅಕ್ಷರ ಹಚ್ಚೆ ಗುರುತು ಇದ್ದು ಯಾರೋ ಉದ್ದೇಶಪೂರ್ವಕವಾಗಿ ಕೊಲೆ ಮಾಡಿರುವುದಾಗಿ ನೀಡಿದ ದೂರಾಗಿರುತ್ತೆ. | ಅನೈತಿಕ ಸಂಬಂಧ |
| 18 | ಕೋಲಾರ (ಗ್ರಾ) ಠಾಣೆ | 546/2022 ಕಲಂ 302 ಐಪಿಸಿ | ದಿನಾಂಕ 01.11.2022 ರಂದು ಬೆಳಿಗ್ಗೆ 6.30 ಗಂಟೆಗೆ ಪಿರ್ಯಾದಿಯು ಕೆಲಸಕ್ಕೆ ಹೋಗಿ ಮದ್ಯಾಹ್ನ ಸುಮಾರು 1.20 ಗಂಟೆಗೆ ಮನೆಗೆ ಬಂದಾಗ ಮನೆಯ ಚಿಲಕ ಹಾಕಿದ್ದು ಚಿಲಕ ತೆಗೆದು ನೋಡಲಾಗಿ ತನ್ನ ಹೆಂಡತಿ ಅಡುಗೆ ಮನೆಯಲ್ಲಿ ಕುಸಿದು ಬಿದ್ದಿದ್ದು ಹಿಂದಕ್ಕೆ ಮಲಗಿಸಿ ನೋಡಿದಾಗ ಯಾರೋ ದುಷ್ಕರ್ಮಿಗಳು ಕತ್ತು ಕೊಯ್ದು ತನ್ನ ಬಳಿ ಇದ್ದ 20 ಬಂಗಾರದ ಗುಂಡುಗಳು ಮತ್ತು ಓಲೆ, ಕಾಲು ಚೈನ್ ಗಳನ್ನು ತೆಗೆದುಕೊಂಡು ಹೋಗಿರುವ ಆರೋಪಿ ಪತ್ತೆ ಮಾಡಿ ಕಾನೂನು ಕ್ರಮಕ್ಕಾಗಿ ದೂರು. | ಅನೈತಿಕ ಸಂಬಂಧ |
| 19 | ಕೋಲಾರ (ಗ್ರಾ) ಠಾಣೆ | 577/2022, ಕಲಂ. 302 ಐ.ಪಿ.ಸಿ. | ದಿ: 15.11.2022 ರಂದು ಪಿರ್ಯಾದಿ ಮನೆಗೆ ಬಾಗಲೂರು ಪೊಲೀಸರು ಬಂದು ಠಾಣೆಯಲ್ಲಿ ನೀಡಿರುವ ರಾಬರಿ ಕೇಸನ್ನು ಕ್ಲೋಸ್ ಮಾಡಲು ವಿಚಾರಣೆಗೆ ಬರುವಂತೆ ತಿಳಿಸಿರುತ್ತಾರೆ. ಪಿರ್ಯಾದಿದಾರರ ಗಂಡ ರೆಡಿ ಇರುವಂತೆ ತಿಳಿಸಿ ಮಗುವನ್ನು ಸ್ಕೂಲ್‌ನಲ್ಲಿ ಬಿಡಲು ಹೋಗಿದ್ದು, ಪುನಃ ಮನೆಗೆ ವಾಪಸ್ಸು ಬಾರದೇ ಇದ್ದು ಪೋನ್ ಸ್ವಿಚ್ ಆಫ್ ಬರುತ್ತಿರುತ್ತದೆ. ನಂತರ ಬಾಗಲೂರು ಪೊಲೀಸ್ ಠಾಣೆಗೆ ಹೋಗಿ ಗಂಡ ರಾಹುಲ್ ಮತ್ತು ಮಗಳು ಜಿಯಾ ರವರು ಕಾಣೆಯಾಗಿರುವ ಬಗ್ಗೆ ದೂರು ನೀಡಿದ್ದು. ನಂತರ ರಾತ್ರಿ ಸಮಯದಲ್ಲಿ ಪಿರ್ಯಾದಿ ಕೆಂದಟ್ಟಿ ಕೆರೆಯ ಬಳಿ ಬಂದು ನೋಡಲಾಗಿ ಪಿರ್ಯಾದಿ ಗಂಡನ ಕೆಎ-51 ಎಂಎಂ- 1940 ಹುಂಡೈ ಕಾರ್ ನಿಂತಿದ್ದು. ಮಗಳ ಮೃತ ದೇಹ ನೀರಿನಲ್ಲಿ ತೇಲುತಿದ್ದು. ಈ ಬಗ್ಗೆ ಪಿರ್ಯಾದಿದಾರ ಗಂಡ ಯಾವುದೋ ವ್ಯವಹಾರದಿಂದ ಯಾರೋ ಭಯಪಡಿಸಿರುವುದಾಗಿ ಪಿರ್ಯಾದಿ ಮಗಳ ಕೊಲೆ ಹಾಗೂ ಗಂಡನ ಕಾಣೆ ಬಗ್ಗೆ ಪ್ರಕರಣ ದಾಖಲಿಸಿರುತ್ತೆ. | ಯಾವುದೋ ವ್ಯವಹಾರದಿಂದ ಯಾರೋ ಭಯಪಡಿಸಿರುವುದಾಗಿ |
| 20 | ವೇಮಗಲ್ | 18/2022 U/s 302 ,201 IPC | ದಿ.30.01.2022 ರಂದು ಆರೋಪಿ ಪೂರಣ್ ಕುಮಾರ ಮದ್ಯಸೇವನೆ ಮಾಡಲೆಂದು ಸಂತಲಾಲ್ ರನ್ನು ಕರೆದುಕೊಂಡು ಹೋಗಿದ್ದು ರಾತ್ರಿ 11.00 ಗಂಟೆಗೆ ಪೂರಣ್ ಕುಮಾರ್ ಒಬ್ಬನೇ ವಾಪಸ್ ಮನಗೆ ಬಂದಿದ್ದು ವಿಚಾರ ಮಾಡಿದರೆ ಸಂತಲಾಲ್ ಬಗ್ಗೆ ಏನೂ ಹೇಳಿರುವುದಿಲ್ಲವಂತ ಸಂತಲಾಲ್ ಕಾಣೆಯದ ಬಗ್ಗೆ ಪೂರಣ್ ಕುಮಾರ್ ರವರೆ ಮೇಲೆ ಅನುಮಾನ ಇರುವುದಾಗಿ ದೂರು ನೀಡಿದ್ದು ವಿಚಾರಣೆ ಕಾಲದಲ್ಲಿ ಹಳೇ ದ್ವೇಷದ ಹಿನ್ನಲೆಯಲ್ಲಿ ಪೂರಣ್ ಕುಮಾರ್ ಸಂತಲಾಲ್ ನನ್ನು ಕೊಲೆ ಮಾಡಿ ಪಿಸ್ತಾನ್ ಕಂಪನಿಯ ಬಳಿ ಕಾಲುವೆಯಲ್ಲಿ ಹಾಕಿದ್ದುವರ ಮೇಲೆಗೆ ಕಲಂ 201, 302, 120 ಬಿ ಅಳವಡಿಸಿಕೊಂಡು ತನಿಖೆ ಕೈಗೊಂಡಿದೆ. | ಮದ್ಯಪಾನ ಮಾಡಿ ಕ್ಷುಲ್ಲಕ ಕಾರಣ |

| | | | | |
|---|---|---|---|---|
| 21 | ವೇಮಗಲ್ | 226/2022 ಕಲಂ 302,34 ಐ.ಪಿ.ಸಿ | ಪಿರ್ಯಾದಿಯ ತಂದೆ ವಾಸವಾಗಿರುವ ಮನೆಯಲ್ಲಿ ತನ್ನ ತಂದೆಯ ಮೃತದೇಹವು ಅಂಗಾತವಾಗಿ ರಕ್ತದ ಮಡುವಿನಲ್ಲಿ ಬಿದ್ದಿದ್ದು, ಗಡ್ಡದ ಬಳಿ ಯಾವುದೋ ಒಂದು ಹರಿತವಾದ ಆಯುಧದಿಂದ ಕತ್ತರಿಸಿದ ಮಾದರಿಯಲ್ಲಿ ಭಾರಿ ರಕ್ತಗಾಯಗಳಾಗಿದ್ದು, ಎರಡೂ ಭುಜಗಳ ಕೆಳಗೆ ಎದೆಗೆ ಮತ್ತು ಎರಡೂ ಕೈಗಳ ಮೇಲೆ ಚುಚ್ಚಿದ್ದು, ತನ್ನ ತಂದೆಯನ್ನು ದಿನಾಂಕ:03-11-2022 ಸಂಜೆ 6-00 ಗಂಟೆಯಿಂದ 04-11-2022 ರಂದು ಬೆಳಿಗ್ಗೆ 05-00 ಗಂಟೆಯೊಳಗೆ ಯಾರೋ ಕೊಲೆ ಮಾಡಿದ್ದು, ಮುಂದಿನ ಕ್ರಮಕ್ಕಾಗಿ ಕೋರಿ ನೀಡಿರುವ ದೂರಾಗಿರುತ್ತೆ. | ಜಮೀನಿನ ವಿಚಾರ |
| 22 | ಮಾಲೂರು | ಮೊ.ಸಂ–390/2022 ಮತ್ತು ಕಲಂ–302 ರೆ/ವಿ 34 ಐ.ಪಿ.ಸಿ | ಪಿರ್ಯಾಧಿದಾರರ ಗ್ರಾಮದಲ್ಲಿ ಏಪ್ರೀಲ್ 8ನೇ ತಾರೀಖಿನಂದು ಜಾತ್ರೆ ಇದ್ದು, ಆ ಜಾತ್ರೆಯಲ್ಲಿ ಪಿರ್ಯಾಧಿಯ ಅಣ್ಣ ಸೌಂದರ್‌ರಾಜ್ ಮತ್ತು ಚಂದ್ರಪ್ಪ ರವರಿಗೆ ಗಲಾಟೆಗಳಾಗಿದ್ದು, ಆಗ ಚಂದ್ರಪ್ಪ ಸೌಂದರ್‌ರಾಜ್ ರವರಿಗೆ ವಾರ್ನಿಂಗ್ ಕೊಟ್ಟು, ನಿನ್ನನ್ನು ಸಾಯಿಸದೆ ಬಿಡುವುದಿಲ್ಲವೆಂತ ಬೆದರಿಕೆ ಹಾಕಿದ್ದು, ಅಂದಿನಿಂದ ದ್ವೇಷವನ್ನು ಸಾಧಿಸುತ್ತಿದ್ದನು. ದಿನಾಂಕ.13–08–2022 ರಂದು ಚಂದ್ರಪ್ಪ, ಸಂದೀಶ, ಶ್ರೀಧರ್ @ ಅಪ್ಪಿ ರವರು ಜೊತೆ ಗೂಡಿ ಚಂದ್ರಪ್ಪನ ಬಾಬತ್ತು ಆಟೋ ನಂ–ಕೆಎ–72–ಎ–8773 ರಲ್ಲಿ ಸೌಂದರ್ ರಾಜ್‌ನನ್ನು, ಈ ಹಿಂದೆ ಆದ ಗಲಾಟೆ ಮಾತನಾಡೋಣವೆಂತ ಹೇಳಿ ಸಂಜೆ 4–30 ಗಂಟೆಯಲ್ಲಿ 3 ಜನರು ಜೈನ್ ನೆಟ್ ಲೇಔಟ್‌ನಲ್ಲಿ ಕುಳಿತು ಮದ್ಯಪಾನ ಮಾಡಿಕೊಂಡು, ಸೌಂದರ್‌ರಾಜ್ ರವರನ್ನು ಹಳೆ ದ್ವೇಷವನ್ನು ಇಟ್ಟುಕೊಂಡು ಮಚ್ಚಿನಿಂದ ಕೊಚ್ಚಿ ಕೊಲೆ ಮಾಡಿರುತ್ತಾರೆಂತ ದೂರು. | ಹಳೇ ವೈಷಮ್ಯದಿಂದ |
| 23 | ಮಾಲೂರು | ಮೊ.ಸಂ–508/2022 ಮತ್ತು ಕಲಂ–302 ಐ.ಪಿ.ಸಿ. | ದಿನಾಂಕ.18–11–2022 ರಂದು ಪಿರ್ಯಾಧಿದಾರರು ಬೆಳಿಗ್ಗೆ 8–00 ಗಂಟೆಯಲ್ಲಿ ಮಾಲೂರು ಕೈಗಾರಿಕಾ ಪ್ರದೇಶದ ಕಡೆ ಚೀತಾ ಗಸ್ತು ಕರ್ತವ್ಯದಲ್ಲಿದ್ದಾಗ ವೆಂಕಟೇಶ್ವರ ಗ್ಯಾಸ್ ಫ್ಯಾಕ್ಟರಿ ಮುಂಭಾಗದ ರಸ್ತೆಯ ಬಳಿ ಮಣ್ಣು ಗುಡ್ಡೆ ಪಕ್ಕದಲ್ಲಿ ಯಾರೋ ಅಪರಿಚಿತ ವ್ಯಕ್ತಿ ಬಿದ್ದಿದ್ದು, ನೋಡಲಾಗಿ ಸದರಿ ವ್ಯಕ್ತಿಯು ಮೃತಪಟ್ಟಿದ್ದು, ಸುಮಾರು 25ವರ್ಷ ವಯಸ್ಸಿನವನಾಗಿದ್ದು, ಆತನ ಎಡಕಣ್ಣಿನ ಬಳಿ, ಎಡಕೈ ಬಳಿ, ಬಲಕಿವಿಯ ಬಳಿ, ಬೆನ್ನು ಹಾಗೂ ಎದೆ ಭಾಗದಲ್ಲಿ ಯಾರೋ ಆತನಿಗೆ ಹೊಡೆದು ಬಾಸುಂಡೆಗಳುಬಂದಿದ್ದು, ಸದರಿ ವ್ಯಕ್ತಿಯನ್ನು ಯಾರೋ ಅಪರಿಚಿತ ವ್ಯಕ್ತಿಗಳು ಯಾವುದೋ ಕಾರಣಕ್ಕೋ ದಿನಾಂಕ.17–11–20220 ರಂದು ರಾತ್ರಿಯಿಂದ ದಿನಾಂಕ.18–11–2022 ರಂಧು ಬೆಳಿಗ್ಗೆ 7–00 ಗಂಟೆಯ ಮದ್ಯೆ ಹೊಡೆದು ಕೊಲೆ ಮಾಡಿದಂತೆ ಕಂಡುಬಂದಿರುತ್ತೆ. ಸದರಿ ವ್ಯಕ್ತಿಯ ಬಗ್ಗೆ ಅಜುಬಾಜು ಫ್ಯಾಕ್ಟರಿಯ ಮತ್ತು ಬಾತ್ಮಿದಾರರನ್ನು ವಿಚಾರ ಮಾಡಲಾಗಿ ಮೃತನ ವಿಳಾಸ ತಿಳಿದುಬಂದಿರುವುದಿಲ್ಲವೆಂತ ದೂರು. | – |
| 24 | ಮಾಲೂರು | ಮೊ.ಸಂ–523/2022 ಮತ್ತು ಕಲಂ–324, 302 504, 506 ಐ.ಪಿ.ಸಿ. | ದಿನಾಂಕ.29–11–2022 ರಂದು ಬೆಳಿಗ್ಗೆ 6–00 ಗಂಟೆಯಲ್ಲಿ ಪಿರ್ಯಾಧಿ ತಂದೆ ವೆಂಕಟಶಾಮಿರೆಡ್ಡಿ ರವರು ಡೈರಿಗೆ ಹಾಲು ಹಾಕಲು ಮನೆಯಿಂದ ಹೊರಟಾಗ ಚಲಪತಿರೆಡ್ಡಿ ರವರು ಕೈಯಲ್ಲಿದ್ದ ದೊಣ್ಣೆಯನ್ನು ಹಿಡಿದುಕೊಂಡು ವೆಂಕಟಶಾಮಿರೆಡ್ಡಿ ರವರನ್ನು ಕುರಿತು ಏನೋ ನನ್ನ ಮಗನೇ ನೀನು ನಮ್ಮ ಜಮೀನನೆಲ್ಲಾ ಹಾಕಿಕೊಂಡಿದ್ದೀಯಾ ಎಂತ ಬೈದು, ಏಕಾಏಕಿ ದೊಣ್ಣೆಯಿಂದ ಬಲವಾಗಿ ವೆಂಕಟಶಾಮಿರೆಡ್ಡಿ ರವರ ಹಣೆಗೆ, ತಲೆಗೆ ಹೊಡೆದು ರಕ್ತಗಾಯಗಳನ್ನುಂಟು ಮಾಡಿದ್ದು, ಬಿಡಿಸಲು ಬಂದ ಪಿರ್ಯಾಧಿ ತಾಯಿ ಸಾವಿತ್ರಮ್ಮ ರವರಿಗೆ ಚಲಪತಿರೆಡ್ಡಿ ರವರು ತಲೆಗೆ, ಎಡಕೈಗೆ ಹೊಡೆದು ರಕ್ತಗಾಯಗಳನ್ನುಂಟು ಮಾಡಿ, ಜಮೀನುಗಳ ವಿಚಾರದಲ್ಲಿ ಹಳೇ ದ್ವೇಷವನ್ನು ಇಟ್ಟುಕೊಂಡು ಪ್ರಾಣ ಬೆದರಿಕೆ ಹಾಕಿರುತ್ತಾನೆಂತ ದೂರು. | ಜಮೀನಿನ ವಿಚಾರವಲ್ಲಿ |
| 25 | ಮಾಸ್ತಿ ಪೊಲೀಸ್ ಠಾಣೆ | ಮೊ.ಸಂ: 1/2022, ಕಲಂ:302 ಐ.ಪಿ.ಸಿ | ಪಿರ್ಯಾದಿದಾರರು ಬೆಂಗಳೂರಿನಲ್ಲಿ ಸೆಕ್ಯೂರಿಟಿ ಕೆಲಸ ಮಾಡಿ ಕೊಂಡಿದ್ದು, ಪಿರ್ಯಾದಿಯ ಅಣ್ಣ ಸಂತೋಷ ಬಹದೂರ್ ಸುನಾರಿ ರವರು ಮಾಲೂರು ತಾಲ್ಲೂಕು, ಹರದ ಕೊತ್ತೂರು ಬಳಿ ಟಾರ್ ಪ್ಲಾಂಟ್ ನಲ್ಲಿ ಚಾಲಕನಾಗಿ ಕೆಲಸ ಮಾಡಿಕೊಂಡು ಫ್ಯಾಕ್ಟರಿಯ ರೂಮಿನಲ್ಲಿ ಮಣಿರಾಮ್ ಛತ್ರಿರವರ ಜೊತೆಯಲ್ಲಿ ವಾಸವಾಗಿರುತ್ತಾರೆ. ದಿನಾಂಕ:02/01/2022 ರಂದು ಬೆಳಿಗ್ಗೆ 05:00 ಗಂಟೆಯಲ್ಲಿ ಶೀರ್ಘರಾಜ ಛತ್ರಿರವರು ಪಿರ್ಯಾದಿಗೆ ಫೋನ್ ಮಾಡಿ ನಿಮ್ಮ ಅಣ್ಣ ಮತ್ತು ಮಣಿರಾಮ್ ಛತ್ರಿರವರು ಗಲಾಟೆ ಮಾಡಿಕೊಂಡು ನಿಮ್ಮ ಅಣ್ಣನ ಹಣೆಗೆ ರಕ್ತಗಾಯ ವಾಗಿದ್ದು ಮಲಗಿದ್ದಲ್ಲಿಯೇ ಮೃತಪಟ್ಟಿರುತ್ತಾರೆಂದು ತಿಳಿಸಿದ ಮೇರೆಗೆ ಬಂದು ನೋಡಿ ಶೀರ್ಘರಾಜ ಛತ್ರಿರವರನ್ನು ಪಿರ್ಯಾದಿ ವಿಚಾರ ಮಾಡಲಾಗಿ ದಿ:01/01/2022 ರಂದು ಹೊಸ ವರ್ಷದ ಪ್ರಯುಕ್ತ ರಜೆ ಇದ್ದುದರಿಂದ ರೂಮಿನಲ್ಲಿಯೇ ಇದ್ದರೆಂದು, ಈ ಹಿಂದೆ ತಮ್ಮ ಗ್ರಾಮದಲ್ಲಿ ಮೃತನಿಗೆ ಮತ್ತು ಆರೋಪಿಗೆ ಹಳೆ ಗಲಾಟೆಗಳ ದ್ವೇಷವಿದ್ದು, ಆರೋಪಿ ಸಂತೋಷ ಬಹದೂರ ಸುನಾರಿ ರವರ ಮೇಲೆ ಗಲಾಟೆ ಮಾಡಿ ರೂಮಿನಲ್ಲಿ ಬಾರಿಂಯ ಕಟ್ಟಿರುವ ಬೇರಿಂಗ್‌ನಿಂದ ಸಂತೋಷ ಬಹದೂರ ಸುನಾರಿಯು ಹಣೆಗೆ ಹೊಡೆದು ತೀವ್ರ ರಕ್ತಗಾಯ ಮಾಡಿ ಕೊಲೆ ಮಾಡಿರು ತ್ತಾನೆಂದು ದೂರು. | ಹಳೇ ದ್ವೇಷ |

| | | | | |
|---|---|---|---|---|
| 26 | ಮಾಸ್ತಿ ಪೊಲೀಸ್ ಠಾಣೆ | ಮೊ.ಸಂ 54/2022 ಕಲಂ 302 ರ/ವಿ 34 ಐಪಿಸಿ | ದಿನಾಂಕ: 09-07-2022 ರಂದು ಪಿರ್ಯಾದಿ ಠಾಣೆಗೆ ಹಾಜರಾಗಿ ನೀಡಿದ ದೂರೇನಂದರೆ ಸೀತಹಳ್ಳಿ ಗ್ರಾಮದಲ್ಲಿ ದಿನಾಂಕ: 07-07-2022 ರಂದು ರಾತ್ರಿ 8.00 ಗಂಟೆ ಸಮಯದಲ್ಲಿ ಪಿರ್ಯಾದಿಯ ಮಾವ ವಸಂತ್ ಕುಮಾರ್ ರವರು ತಮ್ಮ ಗ್ರಾಮದ ಬಾಬು ಬಿನ್ ಬುಡ್ಡಪ್ಪ ರವರು ಕುಡಿದು ಪೈದಾಡಿಕೊಳ್ಳುತ್ತಿದ್ದು. ವಸಂತ್ ಕುಮಾರ್ ಬುದ್ಧಿವಾದ ಹೇಳಿ ಕಳುಹಿಸಿದ್ದು ಈ ವಿಚಾರದಲ್ಲಿ 08-07-2022 ರಂದು ಗಲಾಟೆ ಮಾಡಿ ಬಾಬುರವರನ್ನು ಕೆಳಕ್ಕೆ ತಳ್ಳಿನದ ಪರಿಣಾಮ ಸಿಮೆಂಟ್ ನೆಲದ ಮೇಲೆ ಬಿದ್ದು ತಲೆಯ ಹಿಂಬದಿಗೆ ರಕ್ತ ಗಾಯವಾಗಿದ್ದು ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿರುವುದಾಗಿ ದೂರು | ಹಳೇ ದ್ವೇಷ |
| 27 | ಮಾಸ್ತಿ ಪೊಲೀಸ್ ಠಾಣೆ | ಮೊ.ಸಂ 74/2022 ಕಲಂ 302.324.504 ರ/ವಿ 34 ಐಪಿಸಿ | ದಿ:04-09-2022 ರಂದು ಕನಕಮ್ಮ ಮತ್ತು ನಾಗರಜ್ ರವರು ಜಮೀನಿನ ಬಳಿ ಇದ್ದಾಗ ಆರೋಪಿಗಳು ಹಳೇದ್ವೇಷದಿಂದ ಗೆನಿಮೆಯನ್ನು ಹಾಕಲು ಅಡ್ಡಿಪಡಿಸಿ ಅವಾಚ್ಯ ಶಬ್ದಗಳಿಂದ ಬೈದು ದೊಣ್ಣೇಯನ್ನು ಹಿಡಿದುಕೊಂಡು ಬಂದು ನಾಗರಾಜು ರವರು ಮನೆಯಿಂದ ಹೊರಗೆ ಬಂದಾಗ ರಾಮಪ್ಪ ದೊಣ್ಣೆಯಿಂದ ತಲೆಗೆ ಹೊಡೆದು ಕೊಲೆ ಮಾಡಿರುತ್ತಾರೆಂತ ದೂರು | ಜಮೀನು ವಿಚಾರ |
| 28 | ಕೋಲಾರ ನಗರ ಪೊಲೀಸ್ ಠಾಣೆ | 80/2023 ಕಲಂ 302 ರ/ವಿ 34 ಐಪಿಸಿ | ದಿನಾಂಕ 26.05.2023 ರಂದು ರಾತ್ರಿ 10.45 ಗಂಟೆಯಲ್ಲಿ ಮನೆಯಲ್ಲಿದ್ದಾಗ ತನ್ನ ಅತ್ತಿಗೆ ಫೋನ್ ಮಾಡಿ ನಿನ್ನ ಅಣ್ಣನನ್ನು ಯಾರೂ ದುರಾತ್ಮರು ಕೊಲೆ ಮಾಡಿರುತ್ತಾರೆಂತ ತಿಳಿಸಿದ್ದು ತಕ್ಷಣ ತಾನು ಬಂದು ನೋಡಲಾಗಿ ರಕ್ತದ ಮಡಿವಿನಲ್ಲಿ ಇದ್ದು ಈ ಕೇಸಿನ ಆರೋಪಿಗಳು ಯಾವುದೋ ಬಲವಾದ ಆಯುಧ ದಿಂದ ತಿವಿದು ಗಾಯಗಳನ್ನು ಮಾಡಿ ಕೊಲೆ ಮಾಡಿರುತ್ತಾರೆಂತ ಇತ್ಯಾದಿ ದೂರು. | ಅಕ್ರಮ ಸಂಬಂದ |

# 2023

| ಕ್ರ.ಸಂ: | ಪೊಲೀಸ್ ಠಾಣೆ ಹೆಸರು | ಮೊಸಂ ಮತ್ತು ಕಲಂ | ಘಟನೆಯ ವಿವರ | ಕೊಲೆಗೆ ಕಾರಣ |
|---|---|---|---|---|
| 1 | ಮುಳಬಾಗಿಲು ನಗರ ಪೊಲೀಸ್ ಠಾಣೆ | 68/2023 ಕಲಂ | ಪಿರ್ಯಾದಿ ತನ್ನ ಬಾಬತ್ತು ಟೆಂಪೋ ವಾಹನದಲ್ಲಿ ಕಾಂತರಾಜ ವ್ಯಕ್ತಿಕ್ಕೆ ದಿನಾಂಕ: 22-05-2023 ರಂದು ಬೆಳಗ್ಗೆ 11-00 ಗಂಟೆಗೆ ಸಮಯದಲ್ಲಿ ತನ್ನ ಸ್ವಂತ ಕೆಲಸ ನಿಮಿತ್ತ ಹೋಗುತ್ತಿದ್ದಾಗ ಎನ್‌ಹೆಚ್-75 ರಸ್ತೆ ಮದರಸಾ ಸಮೀಪ ಶ್ರೀ. ಸಾಯಿ ವಿದ್ಯಾ ನಿಕೇತನ ಶಾಲೆಯ ಬಳಿ ರಸ್ತೆಯ ಬಲ ಬದಿಯ ಕಡೆ ಸುಮಾರು ಜನರ ಗುಂಪು ಇದ್ದು ಟೆಂಪೋ ನಿಲ್ಲಿಸಿ ಹೋಗಿ ನೋಡಲಾಗಿ ರಸ್ತೆಯ ಬದಿ ಖಾಲಿ ನಿವೇಶನದಲ್ಲಿ ಸುಮಾರು 35 ವರ್ಷ ವಯಸ್ಸಿನ ಒಂದು ಹೆಂಗಸಿನ ಮೃತ ದೇಹವು ಅಂಗಾತವಾಗಿ ಇದ್ದು ಸದರಿ ಹೆಂಗಸಿನ ಎಡಭಾಗದ ತಲೆ ಮತ್ತು ಮುಖಕ್ಕೆ ಕಲ್ಲಿನಿಂದ ಅಥವಾ ಯಾವುದೋ ಆಯುಧದಿಂದ ಹೊಡೆದು ತೀವ್ರವಾಗಿ ಗಾಯವುಂಟು ಮಾಡಿರುವಂತೆ ಕಾಣುತ್ತಿದ್ದು ಹೆಂಗಸಿನ ಗುರುತು ಪತ್ತೆಯಾಗಿರುವುದಿಲ್ಲ. ಯಾರೋ ಅಪರಿಚಿತರು ಯಾವುದೋ ಕಾರಣಕ್ಕಾಗಿ ಅಪರಿಚಿತ ಹೆಂಗಸನ್ನು ದಿ:21-5-2023ರಂದು ರಾತ್ರಿ ಕೊಲೆ ಮಾಡಿ ಸಾಯಿಸಿರುವುದಾಗಿ ಕಂಡು ಬಂದಿದ್ದು ಕಾನೂನು ಕ್ರಮ ಕೋರಿ ದೂರು. | ಅತ್ಯಾಚಾರ ಕೊಲೆ/ಲೈಂಗಿಕ ತೃಷೆಗಾಗಿ ನಡೆದಿರುವ ಕೊಲೆ |
| 2 | ಮುಳಬಾಗಲು ಗ್ರಾಮಾಂತರ ಠಾಣೆ | ಮೊ.ಸಂ.27/2023 ಕಲಂ 302-309 ಐಪಿಸಿ | ದಿನಾಂಕ:27-1-2023 ರಂದು ಸಂಜೆ ಸುಮಾರು 5-30 ಗಂಟೆ ಸಮಯದಲ್ಲಿ ಆರೋಪಿ ಮರಳಮೇಡು ಗ್ರಾಮದಲ್ಲಿ ತನ್ನ ಮನೆಯಲ್ಲಿ ತನ್ನ ಮಗಳಾದ 1 ವರೆ ವರ್ಷದ ಮಾನ್ವಿತ ಎಂಬ ಮಗುವಿಗೆ ತಲೆಯನ್ನು ಗೋಡೆಗ ಹೊಡೆದು ಬಳೆ ಗಾಜುಗಳಿಂದ ಮಗು ದೇಹದ ಮೇಲೆ ಕುಚ್ಚಿ ಸಾಯಿಸಿ ಕೊಲೆ ಮಾಡಿ ತಾನು ಸಹ ಯಾವುದೋ ಕ್ರಿಮಿ ನಾಶಕ ಸೇವಿಸಿ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿರುತ್ತಾಳೆ | ತಂದೆ ತಾಯಿ ಮಕ್ಕಳನ್ನು ಸಾಯಿಸಿರುವ ಪ್ರಕರಣಗಳು |
| 3 | ನಂಗಲಿ ಠಾಣೆ | ಮೊ.ಸಂ..52/2023 ಕಲಂ 302 ಐಪಿಸಿ | ದಿನಾಂಕ:27-3-2023 ರಂದು ರಾತ್ರಿ ಸುಮಾರು 10-45 ಗಂಟೆಗೆ ಆರೋಪಿ ಸುಬ್ರಮಣಿ ರವರು ತನ್ನ ಮಗ ಬುವನ್ ತೇಜ್ ರವರನ್ನು ಯಾವುದೋ ಕಾರಣಕ್ಕೆ ಚಾಕುವಿನಿಂದ ಕತ್ತು ಕೊಯಿದು ಕೊಲೆ ಮಾಡಿರುತ್ತಾನೆ. | ತಂದೆ ತಾಯಿ ಮಕ್ಕಳನ್ನು ಸಾಯಿಸಿರುವ ಪ್ರಕರಣಗಳು |
| 4 | ನಂಗಲಿ ಠಾಣೆ | ಮೊ.ಸಂ.89/2023 ಕಲಂ 302-307-309 ಐಪಿಸಿ | ದಿನಾಂಕ:29-5-2023 ರಂದು ರಾತ್ರಿ ಆರೋಪಿತಳು ಜೀವನದಲ್ಲಿ ಜಿಗುಪ್ಸೆ ಗೊಂಡು ತನ್ನ ಮಕ್ಕಳಾದ ಚಾರ್ವಿಕ ಮತ್ತು ನಿಕಿಲ್ ರವರಿಗೆ ವಿಷವನ್ನು ಹಾಲಿನಲ್ಲಿ ಬೆರೆಸಿ ಮಕ್ಕಳಿಗೆ ಕೊಲೆ ಮಾಡಲು ಅವರಿಗೆ ಕುಡಿಸಿ ನಂತರ ತಾನು ಆತ್ಮಹತ್ಯೆ ಮಾಡಿಕೊಳ್ಳಲು ಸೇವನೆ ಮಾಡಿರುವುದಾಗಿರುತ್ತೆ. | ತಂದೆ ತಾಯಿ ಮಕ್ಕಳನ್ನು ಸಾಯಿಸಿರುವ ಪ್ರಕರಣಗಳು |
| 5 | ನಂಗಲಿ ಠಾಣೆ | ಮೊ.ಸಂ.114/2023 ಕಲಂ 302 ಐಪಿಸಿ | ದಿನಾಂಕ:12-6-2023 ರಂದು ಸಂಜೆ 4-00 ರಿಂದ 7-00 ಗಂಟೆ ಮದ್ಯೆ ಆರೋಪಿಯು ತನ್ನ ಮಗಳಾದ ರಮ್ಯ ರವರನ್ನು ಕೆ.ಬಿ.ಕೊತ್ತೂರು ಗ್ರಾಮದ ತೋಟದ ಬಳಿ ಯಾವುದೋ ಕಾರಣಕ್ಕೆ ಕತ್ತು ಹಿಸುಕಿಯೋ ಅಥವಾ ಬೇರೆ ಯವುದೋ ರೀತಿಯಲ್ಲಿ ಸಾಯಿಸಿ ಕೊಲೆಮಾಡಿರುತ್ತಾನೆ | ತಂದೆ ತಾಯಿ ಮಕ್ಕಳನ್ನು ಸಾಯಿಸಿರುವ ಪ್ರಕರಣಗಳು |
| 6 | ನಂಗಲಿ ಠಾಣೆ | ಮೊ.ಸಂ.158/2023 ಕಲಂ 302 ಐಪಿಸಿ | ದಿನಾಂಕ:8=8-2023 ರಂದು ರಾತ್ರಿ ಮುಳಬಾಗಲು ತಾಲ್ಲೂಕು ದೇವಹಳ್ಳಿ ಗ್ರಾಮದಲ್ಲಿ ಸುರೇಶ ಎಂಬುವರನ್ನುಅವರ ಮನೆಯಲ್ಲಿ ಆರೋಪಿ ರವಿ ರವರು ಮೃತನ ಹಂಡತಿಯನ್ನು ಅಕ್ರಮ ಸಂಬಂದ ಹೊಂದಿರುವ ಕಾರಣ ಈತನ ಅಡ್ಡಿಯನ್ನು ಹೋಗಲಾಡಿಸಿಕೊಳ್ಳಲು ಕಬ್ಬಿಣದ ರಾಡ್ ಆಯುಧದಿಂದ ತಲೆಗೆ ಹೊಡೆದು ಕೊಲೆ ಮಾಡಿರುತ್ತಾರೆ. | ಅಕ್ರಮ ಸಂಬಂಧ/ಪ್ರೀತಿ ಕಾರಣಕ್ಕಾಗಿ ಕೊಲೆ |
| 7 | ಮುಳಬಾಗಲು ಗ್ರಾಮಾಂತರ ಠಾಣೆ | ಮೊ..ಸಂ.230/2023 ಕಲಂ 302-201 ಐಪಿಸಿ | ದಿನಾಂಕ:19-8-2023 ರ ಹಿಂದೆ ಪಿರ್ಯಾದಿದಾರರ ಜಮೀನು ಮುಳಬಾಗಲು- ಕೆ.ಬೈಪಲ್ಲಿ ರಸ್ತೆಯ ಸರ್ವೆ ನಂ.611 ರಲ್ಲಿನ 34 ಗುಂಟೆ ಜಮೀನಿನಲಿ ಯಾರೋ ಅಪರಿಚಿತರು ಅಪರಿಚಿತ ಮಹಿಳೆಯನ್ನು ಯಾವುದೋ ಉದ್ದೇಶಕ್ಕೆ ಅಲ್ಲಿಗೆ ಕರೆದು ಕೊಲೆ ಮಾಡಿ ಅಲ್ಲಿಂದ ಪರಾರಿಯಾಗಿರುತ್ತಾರೆಂದು ದೂರು | ಅತ್ಯಾಚಾರ ಕೊಲೆ/ಲೈಂಗಿಕ ತೃಷೆಗಾಗಿ |

| | | | | |
|---|---|---|---|---|
| | | | | ನಡೆದಿರುವ ಕೊಲೆ |
| 8 | ನಂಗಲಿ ಠಾಣೆ | ಮೊ.ಸಂ.212/2023 ಕಲಂ302-201 ರ.ವಿ.34 ಐಪಿಸಿ | ದಿನಾಂಕ:11-10-2023 ರಂದು ಪಾಯಸ್ತನಹಳ್ಳಿ ವಾಸಿ ನಾಗಬೂಷಣ ರವರಿಗೆ ಕುಟುಂಬದ ಕಲಹ ಹಿನ್ನಲೆಯಲ್ಲಿ ಅವರ ತಂದೆ ಮುನಿವೆಂಕಟಪ್ಪ ಮತ್ತು ತಮ್ಮಹರಿಕೃಷ್ಣ ರವರು ನಾಗಬೂಷಣನ ಮೇಲೆ ಜಗಳ ಮಾಡಿ ಆತನಿಗೆ ಹೊಡೆದುಗಾಯಪಡಿಸಿ ಕೊಲೆ ಮಾಡಿ ಬಾಯಿಗೆ ಬಟ್ಟೆ ತುರುಕಿ ನರಸಿಂಹಪ್ಪ ರವರ ಬಾವಿಯಲ್ಲಿ ಹಾಕಿ ಸಾಕ್ಷತ್ವ ಮರೆ ಮಾಚಿ ಹೋಗಿರುತ್ತಾರೆಂದು ದೂರು | ತಂದೆ ತಾಯಿ ಮಕ್ಕಳನ್ನು ಸಾಯಿಸಿರುವ ಪ್ರಕರಣಗಳು |
| 9 | ಶ್ರೀನಿವಾಸಪುರ ಪೊಲೀಸ್ ಠಾಣೆ | 68/2023 ಕಲಂ 302.201 ಐ.ಪಿ.ಸಿ | ದಿನಾಂಕ:06.03.2023 ರಿಂದ ಪಿರ್ಯಾದಿದಾರರ ಹೆಂಡತಿಯವರಾದ ಶೋಭ ರವರು ಮಧ್ಯಾಹ್ನ ಸುಮಾರು 03.00 ಗಂಟೆಯಲ್ಲಿ ಕಾಣೇಯಾಗಿದ್ದು ನಂತರ ದಿನಾಂಏ07.03.2023 ರಂದು ಕೊಲೆಯಾಗಿರುತ್ತಾರೆ. | ಪೂರ್ವ ಯೋಜಿತ ಕೊಲೆಗಳು |
| 10 | ಶ್ರೀನಿವಾಸಪುರ ಪೊಲೀಸ್ ಠಾಣೆ | 196/2023 ಕಲಂ: 302.504 ರ.ವಿ. 34 ಐ.ಪಿ.ಸಿ. | ದಿನಾಂಕ:24/06/2023 ರಂದು ಬೆಳಿಗ್ಗೆ 08:00 ಗಂಟೆ ಸಮಯದಲ್ಲಿ ತಾನು ಮತ್ತು ತನ್ನ ಮಗನಾದ ಪ್ರಸಾದ್ ರೆಡ್ಡಿ, ಮತ್ತು ಇತರರು ಮಾವಿನ ಕಾಯಿ ಕೀಳುವುದಕ್ಕೆಂದು ತಮ್ಮವಾದ ಸರ್ವೆ ನಂ.130/5 ಕ್ಕೆ ಹೋಗುವ ದಾರಿಯಲ್ಲಿ ಏಕಾ ಏಕಿ ಕಿರಣ್ ಕುಮಾರ ಬಿನ್ ಲಕ್ಷ್ಮಣರೆಡ್ಡಿ ಮತ್ತು ಆತನ ಹೆಂಡತಿ ಪವಿತ್ರ, ಹಾಗೂ ತಾಯಿ ರತ್ನಮ್ಮ ರವರು ಬಂದು ಅವಾಚ್ಯ ಶಬ್ದಗಳಿಂದ ಬೈದು ಆ ಮೂವರು ಸೇರಿ ಪ್ರಸಾದ್ ರೆಡ್ಡಿ ರವರುನ್ನು ಅಟ್ಟಿಸಿಕೊಂಡು ಹೋಗಿ ಪವಿತ್ರ ರವರು ಕಾರದ ಪುಡಿಯನ್ನು ಎರಚಿದ್ದು ರತ್ನಮ್ಮ ರವರು ಪ್ರಸಾದ್ ರೆಡ್ಡಿ ರವರನ್ನು ಹಿಡಿಯಲು ಹೋಗಾದ ಪ್ರಸಾದ್ ರೆಡ್ಡಿ ರವರು ಕಾಲುವೆಯಲ್ಲಿ ಬಿದ್ದಿದ್ದು ಆಗ ಕಿರಣ್ ಕುಮಾರ್ ರವರು ಏಕಾ ಏಕಿ ಬಂದು ಪ್ರಸಾದ್ ರೆಡ್ಡಿ ರವರ ಮೇಲೆ ಹಲ್ಲೆ ಮಾಡಿ ತನ್ನ ಕೈಯಲ್ಲಿದ್ದ ಚಾಕುವಿನಿಂದ ಹೊಡಯ ಭಾಗಕ್ಕೆ ತಿವಿದಿದ್ದು ಅದರಿಂದ ಕರುಳಿನ ಭಾಗಕ್ಕೆ ಗಾಯವಾಗಿದ್ದು. ಆ ಗಲಾಟೆಯನ್ನು ಕಂಡ ಪಿರ್ಯಾದಿ ಮತ್ತು ಇತರರು ಮೇಲ್ಕಂಡವರಿಂದ ತನ್ನ ಮಗನನ್ನು ಬಿಡಿಸಿ ಪ್ರಸಾದ್ ರೆಡ್ಡಿ ರವರುನ್ನು ಪಿರ್ಯಾದಿ ಮತ್ತು ಇತರರು ಆಸ್ಪತ್ರೆಗೆ ಸಾಗಿಸಿಕೊಂಡು ಹೋಗುವಾಗ ಮಾರ್ಗ ಮಧ್ಯದಲ್ಲಿ ಪ್ರಾಸದ್ ರೆಡ್ಡಿ ರವರು ಮೃತಪಟ್ಟಿದ್ದು, ತನ್ನ ಮಗನ ಮೇಲೆ ಹಲ್ಲೆ ಮಾಡಿ ಕೊಲೆ ಮಾಡಿರುವ ಮೇಲ್ಕಂಡವರ ಮೇಲೆ ಕಾನೂನು ಕ್ರಮ ಜರುಗಿಸ ಬೇಕೆಂದು ಕೋರಿ ನೀಡಿದ ದೂರು | ಆಸ್ತಿ ವಿವಾದ/ಹಣಕಾಸು |
| 11 | ಶ್ರೀನಿವಾಸಪುರ ಪೊಲೀಸ್ ಠಾಣೆ | 234/2023 ಕಲಂ 302.201 ರ/ವಿ 34 ಐ.ಪಿ.ಸಿ | ದಿನಾಂಕ:22/07/2023 ರಂದು ರಾತ್ರಿ 08:15 ಗಂಟೆ ಸಮಯದಲ್ಲಿ ಶ್ರೀನಿವಾಸಪುರ ಪೊಲೀಸ್ ಠಾಣೆಯ ಪಿ.ಐ. ಸಾಹೇಬರು ನೀಡಿದ ಸೂಚನಾ ವರದಿಯಲ್ಲಿ. ದಿನಾಂಕ 21/06/2023 ರಂದು ಶ್ರೀನಿವಾಸಪುರ ಟೌನ್ ವಾಸಿ ಮುನಿಲಕ್ಷ್ಮಿ ಕೋಂ ಲಕ್ಷ್ಮೀನಾರಾಯಣ ರವರು ತಮ್ಮ ಗಂಡನ ದಾಯಾದಿಯಾದ ಸುಬ್ರಮಣಿ ಎನ್ ಬಿನ್ ಲೇಟ್ ನಾರಾಯಣಸ್ವಾಮಿ ಸುಮಾರು 40 ವರ್ಷ, ಗಾರೆಕೆಲಸ, ವಲ್ಲಭಾಯಿ ರಸ್ತೆ ಶ್ರೀನಿವಾಸಪುರ ಟೌನ್ ರವರು ದಿನಾಂಕ 29/04/2023 ರಂದು ಸಂಜೆ 06-30 ಗಂಟೆ ಸಮಯದಲ್ಲಿ ಮೃತಪಟ್ಟಿದ್ದು ದಿನಾಂಕ 30/04/2023 ರಂದು ಶ್ರೀನಿವಾಸಪುರ ಟೌನ್ ನ ಹೊರವಲಯದಲ್ಲಿರುವ ಸ್ಮಶಾನ ದಲ್ಲಿ ಸುಬ್ರಮಣಿ ರವರ ಮೃತ ದೇಹವನ್ನು ಅಂತ್ಯ ಸಂಸ್ಕಾರ ಮಾಡಿದ್ದು ಸುಬ್ರಮಣಿ ರವರ ಸಾವಿನ ಬಗ್ಗೆ ಆತನ ಹೆಂಡತಿ ಮೇಲೆ ಅನುಮಾನ ಇರುವುದಾಗಿ ದಿನಾಂಕ 21/06/2023 ರಂದು ಮುನಿಲಕ್ಷ್ಮಿ ರವರು ದೂರು ನೀಡಿದ್ದು ಈ ದೂರಿನ ಮೇರೆಗೆ ಠಾಣಾ ಗಅಖ ಟಣ 24/2023 ಕಲಂ 174 ( ಛಿ ) ಅಖಿಕಆ ರೀತ್ಯ ಪ್ರಕರಣ ದಾಖಲಿಸಿ ತನಿಖೆಯ ಸಲುವಾಗಿ ಮೃತ ದೇಹವನ್ನು ಮಾನ್ಯ ಉಪ ವಿಭಾಗಾಧಿಕಾರಿ ಕೋಲಾರ ಜಿಲ್ಲೆ ಕೋಲಾರ ರವರಿಗೆ ಮನವಿ ಪತ್ರ ಸಲ್ಲಿಸಿಕೊಂಡಿದ್ದು ಮಾನ್ಯರ ಆದೇಶದಂತೆ ತಾಲ್ಲೂಕು ದಂಡಾಧಿಕಾರಿಗಳು ಶ್ರೀನಿವಾಸಪುರ ರವರು ದಿನಾಂಕ 07/07/2023 ರಂದು ಶವ ತನಿಖಾ ವರದಿಯನ್ನು ನಡೆಸಿ ಕೋಲಾರ ಎಸ್ಎನ್ಆರ್ ಆಸ್ಪತ್ರೆಯ ವೈದ್ಯಾಧಿಕಾರಿಗಳಿಂದ ಶವ ಪರೀಕ್ಷೆ ಮಾಡಿಸಿದ್ದು ದಿನಾಂಕ 14/07/2023 ರಂದು ಶವ ಪರೀಕ್ಷಾ ವರದಿಯನ್ನು ಪಡೆದುಕೊಂಡಿದ್ದು ವೈದ್ಯರು ಸಾವಿಗೆ ಕಾರಣವಾದ ಬಗ್ಗೆ ಅಭಿಪ್ರಾಯ Provisional Opinion: DEATH IS DUE TO HEAD INJURY SUSTAINED ಎಂದು ವರದಿ ನೀಡಿದನ್ನು ಪಡೆದು ಪರಿಶೀಲಿಸಿಕೊಂಡು ನಂತರ ವೈದ್ಯರಿಗೆ ದಿನಾಂಕ 15/07/2023 | ಅಕ್ರಮ ಸಂಬಂಧ/ಪ್ರೀತಿ ಕಾರಣಕ್ಕಾಗಿ ಕೊಲೆ |

| | | | | |
|---|---|---|---|---|
| | | | ರಂದು ಮೃತ ಸುಬ್ರಮಣಿ ರವರ ಸಾವಿನ ಬಗ್ಗೆ ಸ್ಪಷ್ಟ ಅಭಿಪ್ರಾಯವನ್ನು ನೀಡಲು ಕೋರಿದ್ದು ದಿನಾಂಕ 21/07/2023 ರಂದು ಠಾಣಾ ಹೇಡ್ ಪಿ ಸಿ 384 ಶರತ್ ರವರು ವೈದ್ಯರಿಂದ ಅಭಿಪ್ರಾಯ ಪತ್ರವನ್ನು ತಂದು ಹಾಜರುಪಡಿಸಿದ್ದನ್ನು ಪರಿಶೀಲಿಸಿ ನೋಡಲಾಗಿ ಸುಬ್ರಮಣಿ ರವರ ಸಾವಿನ ಬಗ್ಗೆ ವೈದ್ಯರು ತಮ್ಮ ಅಭಿಪ್ರಾಯವನ್ನು ಈ ಕೆಳಕಂಡಂತೆ 1) Such skull and facial bone fractures mentioned in Post Mortem report are as a result of multiple heavy blunt force impact. 2) Such head injuries mentioned in Post Mortem Report are possible as a result of assault in the manner suggested by you. 3) However it is not possible for an individual to sustain such head injuries by voluntarily hitting his own head by himself. ಎಂಬುದಾಗಿ ನೀಡಿದ್ದನ್ನು ಪರಿಶೀಲಿಸಿದ್ದು ಮೃತ ಸುಬ್ರಮಣಿ ರವರ ಸಾವಿನ ವಿಚಾರದಲ್ಲಿ ಇದು ಕೊಲೆ ಎಂದು ಪರಿಗಣಿಸಿ ಆರೋಪಿತರು ಸುಬ್ರಮಣಿ ರವರನ್ನು ಕೊಲೆ ಮಾಡಿ ಕೊಲೆಯನ್ನು ಮರೆಮಾಚಲು ಸಾಕ್ಷ್ಯಾಧಾರಗಳನ್ನು ನಾಶ ಮಾಡುವ ಉದ್ದೇಶವನ್ನು ಹೊಂದಿರುವುದಾಗಿ ದೃಢಪಟ್ಟಿರುವುದಾಗಿ ಕಂಡುಬಂದಿದ್ದು ಆದ್ದರಿಂದ ಠಾಣಾ UDR no 24/2023 ಕಲಂ 174( c ) CRPC ಪ್ರಕರಣದಲ್ಲಿ ಫಿರ್ಯಾದಿದಾರು ಆರೋಪಿಸಿರುವ ಶೋಭಾ ಮತ್ತು ಕೃತ್ಯಕ್ಕೆ ಸಂಬಂಧಿಸಿದವರ ಮೇಲೆ ಕಾನೂನು ಕ್ರಮ ಜರುಗಿಸಲು ಸೂಚಿಸಿ ನೀಡಿದ ಸೂಚನ ಪತ್ರ. | |
| 12 | ಶ್ರೀನಿವಾಸಪುರ ಪೊಲೀಸ್ ಠಾಣೆ | 326/2023 ಕಲಂ 302,307 ಐ.ಪಿ.ಸಿ | ದಿನಾಂಕ:12/09/2023 ರಂದು ಸಂಜೆ 06:15 ಗಂಟೆ ಸಮಯದಲ್ಲಿ ಫಿರ್ಯಾದಿದಾರರಾದ ಮಂಜುನಾಥ ಬಿನ್ ಮುನಿಯಪ್ಪ, ನಂಬಿಹಳ್ಳಿ ಗ್ರಾಮ, ರವರು ಠಾಣೆಗೆ ಹಾಜರಾಗಿ ನೀಡಿದ ದೂರಿನಲ್ಲಿ, ನಮ್ಮ ತಂದೆಗೆ ನಾಲ್ಕು ಜನ ಮಕ್ಕಳಿದ್ದು 1ನೇ ಭಾಗ್ಯಲಕ್ಷ್ಮಿ ಕೋಂ ಶ್ರೀನಿವಾಸಮೂರ್ತಿ, 44 ವರ್ಷ, ವಾಸ:ಕೈವಾರ, ಚಿಂತಾಮಣಿ ತಾಲ್ಲೂಕು, 2ನೇ ಶೋಭಾ ಕೋಂ ನಾರಾಯಣಸ್ವಾಮಿ, 42 ವರ್ಷ, ಪಾಳ್ಯ ಗ್ರಾಮ, ವಿಜಯಪುರ ಹೋಬಳಿ, ದೇವನಹಳ್ಳಿ ತಾಲ್ಲೂಕು, ಮೂರನೇಯವನು ನಾನೇ, ನಾನು ನಂಬಿಹಳ್ಳಿ ಗ್ರಾಮದಲ್ಲಿ ವಾಸವಾಗಿರುತ್ತೇನೆ, 4ನೇ ರಾಧಮ್ಮ ಕೋಂ ನಾಗೇಶ, 38 ವರ್ಷ, ವಾಸ:ನಂಬಿಹಳ್ಳಿ ಗ್ರಾಮ ಆಗಿರುತ್ತೆ, ನನ್ನ ಹೆಂಡತಿ ಹೆಸರು ಅನೂಷ, 26 ವರ್ಷ, ನನಗೆ ಒಂದು ಹೆಣ್ಣು ಮತ್ತು ಒಂದು ಗಂಡು ಮಗು ಇದ್ದು ಮಗಳ ಹೆಸರು ಕೃತಿಕ, 7ವರ್ಷ, ಮಗನ ಹೆಸರು ಗುಣವರ್ಧನ್, 1.5 ವರ್ಷ ಆಗಿರುತ್ತೆ, ನನ್ನ ತಂಗಿ ರಾಧ ರವರಿಗೆ ನಾಗೇಶ್ ಬಿನ್ ಸತ್ಯನಾರಾಯಣ, 43 ವರ್ಷ, ಶ್ರೀನಿವಾಸಪುರ ಟೌನ್ ರವರೊಂದಿಗೆ ವಿವಾಹವಾಗಿ ಸುಮಾರು 15 ವರ್ಷಗಳಗಿದ್ದು, ಅವರಿಗೆ ಯಶಸ್ ಎಂಬ ಮಗ ನಿದ್ದು, 13 ವರ್ಷ ರವರಾಗಿರುತ್ತಾರೆ, ನಮ್ಮ ತಂಗಿ ರಾಧಮ್ಮ ಮತ್ತು ಅವರ ಕುಟುಂಬ ನಮ್ಮ ಗ್ರಾಮದಲ್ಲಿ ವಾಸವಿರುತ್ತಾರೆ, ನನ್ನ ತಂಗಿ ರಾಧಮ್ಮನಿಗೂ ಆಕೆಯ ಗಂಡ ನಾಗೇಶ, ರವರುಗಳ ಮಧ್ಯೆ ಸುಮಾರು 10 ವರ್ಷಗಳಿಂದ ವೈವಾಹಿಕ ವಿಚಾರದಲ್ಲಿ ಗಲಾಟೆಗಳು ನಡೆಯುತ್ತಿದ್ದು ನಾವುಗಳು ಸಹ ಬುದ್ಧಿ ಹೇಳಿ ರಾಜಿ ಪಂಚಾಯಿತಿಗಳು ಮಾಡಿಸಿರುತ್ತೇವೆ ಆದರು ಸಹ ಅವರ ವೈವಾಹಿಕ ಜೀವನ ಸರಿಹೋಗಲಿಲ್ಲ ಹೀಗಿರುವಲ್ಲಿ ನಾಗೇಶ ರವರು ನನ್ನ ತಂಗಿ ರಾಧಮ್ಮ ರವರನ್ನು ಬಿಟ್ಟು ಸುಮಾರು 7 ವರ್ಷಗಳ ಹಿಂದೆ ತೇಜಸ್ವಿನಿ, ಪಡತಿಮ್ಮನಹಳ್ಳಿ ಗ್ರಾಮ ರವರನ್ನು ಮದುವೆಯಾಗಿ ಅವರಿಗೂ ಸಹ ಇಬ್ಬರು ಮಕ್ಕಳಿರುತ್ತಾರೆ, ಮಕ್ಕಳ ಹೆಸರು ತಿಳಿದಿರುವುದಿಲ್ಲ, ತೇಜಸ್ವಿನಿ ರವರು ಶ್ರೀನಿವಾಸಪುರ ಟೌನ್ ನಲ್ಲಿ ವಾಸವಿರುತ್ತಾರೆ, ತೇಜಸ್ವಿನಿ ರವರನ್ನು ನಾಗೇಶ ರವರು ಮದುವೆಯಾದಾಗಿನಿಂದ ನನ್ನ ತಂಗಿಯನ್ನು ಸರಿಯಾಗಿ ನೋಡಿಕೊಳ್ಳುತ್ತಿರಲಿಲ್ಲ ನಾನು ನನ್ನ ತಂಗಿಯ ಜೀವನಾಂಶ ವಿಚಾರದಲ್ಲಿ ಕೇಸು ಹಾಕಲು ನನ್ನ ತಂಗಿಗೆ ತಿಳಿಸಿದ್ದು ನನ್ನ ತಂಗಿ ಈ ವಿಚಾರದಲ್ಲಿ ದಾಖಲು ಮಾಡಿರುತ್ತಾಳೆ, ಹೀಗಿರುವಲ್ಲಿ ನಾಗೇಶ ರವರು ಸುಮಾರು ಸಲ ನಮ್ಮ ಗ್ರಾಮಕ್ಕೆ ಬಂದು ನನ್ನ ತಂಗಿ ಮೇಲೆ ಗಲಾಟೆ ಮಾಡಿ ಹೋಗುತ್ತಿದ್ದ, ನನ್ನ ತಂಗಿ ಈ ವಿಚಾರವನ್ನು ನನ್ನ ಬಳಿ ಹೇಳಿದ್ದಳ್ಳು ಈ ವಿಚಾರದಲ್ಲಿ ನಾನು ನಾಗೇಶ ರವರನ್ನು ಮಾತನಾಡಿಸುತ್ತಿರಲ್ಲಿಲ್ಲ, ನನ್ನ ತಂಗಿ ರಾಧಮ್ಮ ಮತ್ತು ಅವರ ಮಗ ಯಶಸ್ ರವರನ್ನು ನನ್ನ ಮನೆಯಲ್ಲಿ ಇಟ್ಟುಕೊಂಡು ಅವರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದ್ದೆ, ನಾಗೇಶ ರವರು ಪದೆ ಪದೆ ನನ್ನ ತಂಗಿಯನ್ನು ಜೀವನಾಂಶಕ್ಕೆ ದಾಖಲು ಮಾಡಿರುವ ಕೇಸನ್ನು ಹಿಂಪಡೆಯುವಂತೆ ಆಗಾಗ ಗಲಾಟೆ ಮಾಡುತ್ತಿದ್ದನು, ಆದರೆ ನನ್ನ ತಂಗಿ ಕೇಸನ್ನು ಹಿಂಪಡೆಯದೆ ಮುಂದುವರೆಸಿದನು ಇದರಿಂದ ನಾಗೇಶ ರವರು ನನ್ನ ತಂಗಿಯ ಮೇಲೆ ದ್ವೇಷವನ್ನು ಸಾಧಿಸುತ್ತಿದ್ದರು, ಈ ದ್ವೇಷವನ್ನು ಮನದಲ್ಲಿ ಇಟ್ಟುಕೊಂಡು ಕೊಲೆ ಮಾಡುವ ಉದ್ದೇಶವನ್ನು | ವೈಯಕ್ತಿಕ ದ್ವೇಷ (ಕುಟುಂಬ, ಸಂಸಾರ, ಸ್ನೇಹಿತರು, ಕ್ಷುಲಕ್ಕ ಕಾರಣ ಇತ್ಯಾದಿ) |

| | | | | |
|---|---|---|---|---|
| | | | ಇಟ್ಟುಕೊಂಡಿದ್ದನು. ಹೀಗಿರುವಲ್ಲಿ ದಿನಾಂಕ:12/09/2023 ರಂದು ಸಮಯ ಸುಮಾರು 03:00 ಗಂಟೆಯಲ್ಲಿ ನಾನು ನಮ್ಮ ಗ್ರಾಮದಲ್ಲಿ ತೋಟದ ಬಳಿ ಕೆಲಸ ಮಾಡುತ್ತಿದ್ದೆ. ನಮ್ಮ ಪಕ್ಕದ ಮನೆಯ ವಾಸಿ ಕುಸುಮ ಕೋಂ ರಾಘವೇಂದ್ರ, 27 ವರ್ಷ, ಬ್ರಾಹ್ಮಣ ರವರು, ನಮ್ಮ ತೋಟದ ಬಳಿ ಗಾಬರಿ ಗಾಬರಿ ಇಂದ ಬಂದು ನಾಗೇಶ ರವರು ರಾಧಮ್ಮ ರವರನ್ನು ಮಚ್ಚಿನಿಂದ ಹೊಡೆದು ಕೊಲೆ ಮಾಡಿರುತ್ತಾನೆ ಎಂದು ತಿಳಿಸಿದರು ನಾನು ಕೂಡಲೇ ನಮ್ಮ ಮನೆ ಬಳಿ ಬಂದು ನೋಡಲಾಗಿ ನನ್ನ ತಂಗಿ ರಾಧಮ್ಮ ರವರು ರಕ್ತದ ಮಡುವಿನಲ್ಲಿ ಬಿದ್ದು ಪ್ರಾಣ ಹೋಗಿತ್ತು, ನನ್ನ ತಂದೆ ಮುನಿಯಪ್ಪ, ನನ್ನ ಬಾವಮೈದ ವರುಣ್, ನನ್ನ ಹೆಂಡತಿ ಅನೂಷ ರವರುಗಳು ಗಾಯಗೊಂಡು ಸ್ಥಳದಲ್ಲಿ ಇದ್ದರು ನಾನು ನನ್ನ ಹೆಂಡತಿಯನ್ನು ವಿಚಾರ ಮಾಡಲಾಗಿ, ನಮ್ಮ ತಂದೆ ಮುನಿಯಪ್ಪ ಬಿನ್ ಲೇಟ್ ಲಕ್ಕಯ್ಯ, 76 ವರ್ಷ, ರವರಿಗೆ ನಾಗೇಶ ರವರು ಮಚ್ಚಿನಿಂದ ತಲೆ ಭಾಗಕ್ಕೆ ಹೊಡೆದು ರಕ್ತ ಗಾಯಗೊಳಿಸಿದ್ದು, ನನ್ನ ಅಕ್ಕ ಭಾಗ್ಯಲಕ್ಷ್ಮಿ ರವರ ಮಗನಾದ ವರುಣ್ ಬಿನ್ ಶ್ರೀನಿವಾಸಮೂರ್ತಿ, ಸುಮಾರು 18 ವರ್ಷ, ವಿದ್ಯಾರ್ಥಿ, ರವರಿಗೆ ನಾಗೇಶ ರವರು ಮಚ್ಚಿನಿಂದ ಎಡಗೈಗೆ ಹೊಡದು ಗಾಯಗೊಳಿಸಿದ್ದು, ನನ್ನ ಹೆಂಡತಿ ಅನೂಷ ರವರ ಬಲ ಕೆನ್ನೆಗೆ ಮತ್ತು ಬಲಗೈಗೆ ನಾಗೇಶ ರವರು ಮಚ್ಚಿನಿಂದ ಹೊಡೆದು ಗಾಯಗೊಳಿಸಿದ್ದರು ಎಂದು ತಿಳಿಸಿದರು. ಗಾಯಗೊಂಡ ನನ್ನ ತಂದೆ ಮತ್ತು ನನ್ನ ಬಾವಮೈದ ವರುಣ್ ರವರನ್ನು ಯಾವುದೋ ಒಂದು ವಾಹನದಲ್ಲಿ ಜಾಲಪ್ಪ ಆಸ್ಪತ್ರೆಗೆ ಕಳುಹಿಸಿಕೊಟ್ಟೆವು, ನನ್ನ ಹೆಂಡತಿಯನ್ನು ಚಿಕಿತ್ಸೆಗಾಗಿ ಶ್ರೀನಿವಾಸಪುರ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇನೆ. ನನ್ನ ತಂಗಿ ಜೀವನಾಂಶ ಕೇಸನ್ನು ವಾಪಸ್ಸು ಪಡೆಯದೆ ಇದ್ದ ಕಾರಣ ನಾಗೇಶ ರವರು ನನ್ನ ತಂಗಿಯ ಮೇಲೆ ದ್ವೇಷವನ್ನು ಹೊಂದಿ ದಿನಾಂಕ:12/09/2023 ರಂದು ಮಧ್ಯಾಹ್ನ ಸುಮಾರು 02:45 ಗಂಟೆಗೆ ಕೊಲೆ ಮಾಡುವ ಉದ್ದೇಶವನ್ನು ಹೊಂದಿ ಮಚ್ಚಿಯೊಂದಿಗೆ ನಮ್ಮ ಮನೆಯ ಬಳಿ ಬಂದು ಮನೆಯಲ್ಲಿ ಇದ್ದ ನನ್ನ ತಂಗಿ ರಾಧಮ್ಮ ರವರ ತಲೆ ಭಾಗಕ್ಕೆ ಮತ್ತು ಕೈಗೆ ಹೊಡೆದ ಕಾರಣ ನನ್ನ ತಂಗಿ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾಳೆ. | |
| 13 | ಶ್ರೀನಿವಾಸಪುರ ಪೊಲೀಸ್ ಠಾಣೆ | 372/2023 ಕಲಂ 302,307,120(ಬಿ) ಐ.ಪಿ.ಸಿ | ದಿನಾಂಕ:23/10/2023 ರಂದು ನಾನು ಕೆಲಸಕ್ಕೆಂದು ಶ್ರೀನಿವಾಸನ್ ರವರ ಮನೆಯಾದ ಜಾಕೀರ್ ಹುಸೇನ್ ಮೊಹಲ್ಲ, ಬಳಿ ಹೋದೆ. ಆಗ ಶ್ರೀನಿವಾಸನ್ ರವರು ಮುಳಬಾಗಿಲು ರಸ್ತೆಯಲ್ಲಿ ನಿರ್ಮಾಣ ಮಾಡುತ್ತಿದ್ದ ಹೊಸ ಕಟ್ಟಡ ಮತ್ತು ಹೊಗಳಗೆರೆ ರಸ್ತೆಯಲ್ಲಿ ಇರುವ ಅರಣ್ಯ ಪ್ರದೇಶದಲ್ಲಿ ಕಟ್ಟಿದ ಕಟ್ಟಡ ಅರಣ್ಯ ಇಲಾಖೆಯವರು ತಳ್ಳಿದ್ದು ಅಲ್ಲಿ ಕೂಲಿ ಯವರಿಂದ ಇಟ್ಟಿಗೆಗಳನ್ನು ಸಾಗಿಸುತ್ತಿದ್ದ ಕೆಲಸದ ಬಗ್ಗೆ ವಿಚಾರಿಸಿದರು ನಾನು ಇನ್ನು ಸ್ವಲ್ಪ ಕೆಲಸ ಇದೆ ಈಗ ಕೆಲಸ ನಡಿತ ಇದೆ ಎಂದು ತಿಳಿಸಿದೆ. ಅವರಂತೆ ಶ್ರೀನಿವಾಸನ್ ರವರು ಸರಿ ನಡಿ ಕೆಲಸವನ್ನು ನೋಡಿಕೊಂಡು ಬರೋಣವೆಂದು ಹೇಳಿ ಬೆಳಿಗ್ಗೆ 11:00 ಗಂಟೆ ಸಮಯದಲ್ಲಿ ಮನೆಯನ್ನು ಬಿಟ್ಟು ಶ್ರೀನಿವಾಸನ್ ರವರ ಕಾರಿನಲ್ಲಿ ಹೊಗಳಗೆರೆ ಅರಣ್ಯ ಪ್ರದೇಶದ ಬಳಿ ಹೋಗಿ ಕೆಲಸವನ್ನು ನೋಡಿಕೊಂಡು ನಂತರ ಅಲ್ಲಿಂದ ಮುಳಬಾಗಿಲು ರಸ್ತೆಯ ಹೊಗಳಗೆರೆ ಕ್ರಾಸ್ ಬಳಿ ನಡೆಯುತ್ತಿದ್ದ ಹೊಸ ಕಟ್ಟಡದ ನಿರ್ಮಾಣ ಬಳಿ ಬಂದೆವು, ಅಲ್ಲಿ ಶ್ರೀನಿವಾಸನ್ ರವರು ಕಟ್ಟಡದ ನಿರ್ಮಾಣ ಕೆಲಸವನ್ನೆಲ್ಲಿ ನೋಡಿ ಕಟ್ಟಡದ ಮುಂದೆ ಇದ್ದ ಮಾವಿನ ಮರದ ಕೆಲಗಡೆ ಚೆರ್ ಗಳನ್ನು ಹಾಕಿಕೊಂಡು ಮಧ್ಯಾಹ್ನ ಸುಮಾರು 12:15 ಗಂಟೆ ಸಮಯದಲ್ಲಿ ನಾನು ಮತ್ತು ಶ್ರೀನಿವಾಸನ್ ರವರು, ಕೃಷ್ಣ ಬಿನ್ ಈರಪ್ಪ, ದಯಾನಂದ ರಸ್ತೆ, ಹಾಗೂ ಕಟ್ಟಡದ ಸೆಕ್ಯೂರಿಟಿ ನಾವು ನಾಲ್ಕು ಜನ ಟೀ ಕುಡಿಮುಕೊಂಡು ಮಾತನಾಡುತ್ತಿದ್ದೇವು ಗೇಟ್ ನ ಬಳಿ ರಾಜೇಶ್ ನಿಂತಿದ್ದನು ಆಗ , ಒಂದು ಬಿಳಿ ಬಣ್ಣದ ಪಲ್ಸರ್ ಮತ್ತು ಒಂದು ಸ್ಲೆಂಡರ್ ಬೈಕ್ ಗಳಲ್ಲಿ ಒಂದೊಂದು ಗಾಡಿಯಲ್ಲಿ ಮೂರು ಮೂರು ಒಟ್ಟು 6 ಜನ ಬಂದಿದ್ದು ಅವರಲ್ಲಿ ಒಬ್ಬ ಸಿಮೆಂಟ್ ಚೀಲದಂತ ಬಿಳಿ ಬಣ್ಣದ ಚೀಲದಲ್ಲಿ ಏನೋ ಎತ್ತಿಕೊಂಡು ಶ್ರೀನಿವಾಸನ್ ರವರ ಬಳಿ ಬಂದು ಅವರಲ್ಲಿ ಒಬ್ಬ ಅಂಕಲ್ ಚೆನ್ನಾಗಿದ್ದೀರ ಎಂದು ಮಾತನಾಡಿಸಿಕೊಂಡು ಶೇಕ್ ಹ್ಯಾಂಡ್ ನೀಡಿದ ಅಷ್ಟರಲ್ಲಿ ಮತ್ತೊಬ್ಬ ಯಾವುದೋ ಸ್ಪ್ರೇ ಯನ್ನು ಶ್ರೀನಿವಾಸನ್ ರವರ ಮುಖಕ್ಕೆ ಸ್ಪ್ರೇ ಮಾಡಿದ್ದು ಸಡನ್ ಆಗಿ ಎಲ್ಲರು ಚೀಲದಿಂದ ಚಾಕು, ಲಾಂಗು, ತಲ್ವಾರ್ ಗಳನ್ನು ತೆಗೆದು ಶ್ರೀನಿವಾಸನ್ ಮತ್ತು ನಮ್ಮ ಮೇಲೆ ಹಲ್ಲೆ ಮಾಡಲು ಬಂದರು ಅಷ್ಟರಲ್ಲಿ ನಾನು ತಪ್ಪಿಸಿಕೊಳ್ಳಲು ಸ್ವಲ್ಪ ದೂರ ಓಡಿದ್ದು ತಿರುಗಿ ನೋಡುವಷ್ಟರಲ್ಲಿ ಶ್ರೀನಿವಾಸನ್ ರವರಿಗೆ ಚಾಕು, ಲಾಂಗು, ತಲ್ವಾರ್ ಗಳಿಂದ ದಾಳಿ ಮಾಡಿ ತಲೆಗೆ, ಹೊಟ್ಟೆಗೆ ಮತ್ತು ದೇಹದ ಇತರೆ ಭಾಗಗಳಲ್ಲಿ ಕೊಚ್ಚಿ, ಚುಚ್ಚಿ ಬಿಳಿಸಿದರು ನನ್ನನ್ನು ಕೊಲೆ ಮಾಡಲು ಬಂದರು ನಾವು ಅಲ್ಲಿಂದ ಸ್ವಲ್ಪ ದೂರ ಓಡಿ ಹೋಗಿ ಕಿರುಚುಕೊಂಡೆನು ಅಷ್ಟರಲ್ಲಿ ಅವರು ಅಲ್ಲಿಂದ ಓಡಿ ಹೋಗಿ ಅವರು ತಂದಿದ್ದ ಬೈಕ್ ಗಳಲ್ಲಿ ಹೊರಟು ಹೋದರು. ಶ್ರೀನಿವಾಸನ್ ರವರಿಗೆ ಹಲ್ಲೆ ಮಾಡಿದವರಲ್ಲಿ ನನಗೆ ಪರಿಚಯವಿರುವ ಚೇತನ್, ರೇವಂತ್ ಮತ್ತು ಗೌರವ್ ಇದ್ದು ಉಳಿದ ಮೂವರ ಹೆಸರು ಗೊತ್ತಿಲ್ಲ ಅವರೆ ನವರೆಲ್ಲರೂ | ವೈಯಕ್ತಿಕ ದ್ವೇಷ |

| | | | | |
|---|---|---|---|---|
| | | | ವೇಣುಗೋಪಾಲ್ ರವರ ಜೊತೆ ಇರುತ್ತಿದ್ದು ನನಗೆ ಗೊತ್ತು. ನಂತರ ನಾನು ಕೃಷ್ಣ ಮತ್ತು ರಾಜೇಶ್ ರವರು. ಮಂಜುನಾಥ ಮತ್ತು ಪ್ರದೀಪ್ ರವರನ್ನು ಫೋನ್ ಮಾಡಿ ಸ್ಥಳಕ್ಕೆ ಕರೆಸಿಕೊಂಡು ನಾವೆಲ್ಲರು ರಕ್ತದ ಮಡುವಿನಲ್ಲಿದ್ದ ಶ್ರೀನಿವಾಸನ್ ರವರನ್ನು ಶ್ರೀನಿವಾಸನ್ ರವರ ಕಾರಿನಲ್ಲೆ ಶ್ರೀನಿವಾಸಪುರ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಿಸಿದೆವು ಅಲ್ಲಿನ ವೈದ್ಯರು ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ಕೋಲಾರ ಆರ್.ಎಲ್.ಜಾಲಪ್ಪ ಆಸ್ಪತ್ರೆಗೆ ಕರೆದುಕೊಂಡು ಹೋಗಲು ತಿಳಿಸಿದ್ದು ಅದರಂತೆ ಅಂಬುಲೇನ್ಸ್ ನಲ್ಲಿ ಕೋಲಾರ ಆರ್.ಎಲ್.ಜಾಲಪ್ಪ ಆಸ್ಪತ್ರೆಗೆ ಕರೆದುಕೊಂಡು ಹೊದರು ನಾನು ಇಲ್ಲೇ ಇದ್ದೆ. ನಂತರ ರಾಜೇಶ್ ರವರ ಮೂಲಕ ತಿಳಿಯಲಾಗಿ ಶ್ರೀನಿವಾಸನ್ ರವರು ಆರ್.ಎಲ್.ಜಾಲಪ್ಪ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಿಸಿದಾಗ ವೈದ್ಯ ಪರಿಶೀಲಿಸಿ ಮಧ್ಯಾಹ್ನ 01:50 ಗಂಟೆ ಸಮಯದಲ್ಲಿ ಶ್ರೀನಿವಾಸನ್ ರವರು ಮೃತಪಟ್ಟಿರುವುದಾಗಿ ತಿಳಿಸಿದರು ಎಂದು ಮಾಹಿತಿ ನೀಡಿದರು. | |
| 14 | ಗೌನಿಪಲ್ಲಿ ಪೊಲೀಸ್ ಠಾಣೆ | 70/2023 ಕಲಂ 323.324.504.506.448. 302 ಐಪಿಸಿ | ಪಿರ್ಯಾದಿಗೂ ಮತ್ತು ಆರೋಪಿಗು ಮೂತ್ರವಿಸರ್ಜನೆ ವಿಚಾರದಲ್ಲಿ ಗೌನಿಪಲ್ಲಿ ಸಂತೆಯಲ್ಲಿ ಜಗಳವಾಗಿದ್ದು ಪಿರ್ಯಾದಿಯ ತಂದೆ ಪ್ರಶ್ನೆ ಮಾಡಿದ್ದು ಆರೋಪಿಯು ಪಿರ್ಯಾದಿಯವರ ತಂದೆಗೆ ದೊಣ್ಣೆಯಿಂದ ಹೊಡೆದು ಎದೆಯ ಮೇಲೆ ಗುದ್ದಿ ಸಾಯಿಸಿರುತ್ತಾನೆ | ಕ್ಷುಲ್ಲಕ ವಿಚಾರದಲ್ಲಿ ಜಗಳವಾಗಿರುತ್ತದೆ |
| 15 | ಕೋಲಾರ ನಗರ ಪೊಲೀಸ್ ಠಾಣೆ | ಮೊ.ಸಂ.108/2023 ಕಲಂ 302 ಐಪಿಸಿ | ದಿನಾಂಕ:10/07/2023 ರಂದು ಪಿರ್ಯಾದಿ ಠಾಣೆಗೆ ಹಾಜರಾಗಿ ನೀಡಿದ ದೂರೇನೆಂದರೆ ತನ್ನ ತಮ್ಮನಾದ ಅಮೀರ್ ಖಾನ್ @ ತನ್ನು ರವರು ಪ್ರತಿ ದಿನ ಕೋಳಿ ತುಂಬಲು ಕೂಲಿ ಕೆಲಸಕ್ಕೆ ಹೋಗುತ್ತಿದ್ದನು. ಹೀಗಿರುವಲ್ಲಿ ದಿ:09.07.2023 ರಂದು ಮನೆ ಬಿಟ್ಟು ಹೋದವನು ರಾತ್ರಿ ಪುನಃ ಮನೆಗೆ ವಾಪಸ್ಸು ಬಂದಿರುವುದಿಲ್ಲ. ಈ ದಿನ ಬೆಳಿಗ್ಗೆ ಜುಬೇರ್ ರವರು ಕರೆ ಮಾಡಿ ನಿನ್ನ ತಮ್ಮ ಲಕ್ಷ್ಮೀಬಾರ್ ಪಕ್ಕದಲ್ಲಿರುವ ಖಾಲಿ ಸೈಟ್ ನಲ್ಲಿ ಯಾರೋ ಕತ್ತು ಕೊಯ್ದು ಸಾಯಿಸಿಬಿಟ್ಟಿರುತ್ತಾರೆ. | ಕೌಟುಂಬಿಕ ಕಾರಣಗಳಿಗಾಗಿ |
| 16 | ಕೋಲಾರ ನಗರ ಪೊಲೀಸ್ ಠಾಣೆ | ಮೊ.ಸಂ145/2023 ಕಲಂ 302.114.34 ಐ.ಪಿ.ಸಿ | ಪಿರ್ಯಾದಿದಾರರ ಮಗಳನ್ನು ಷಾಹೀದ್ ನಗರದ ವಾಸಿಯಾದ ತಬರೇಜ್ ಪಾಷ ರವರಿಗೆ ಕೊಟ್ಟು ಮದುವೆಮಾಡಿದ್ದು 2 ತಿಂಗಳ ನಂತರ ಅತ್ತೆ ಜಬೀನಾ ತಾಜ್ ರವರು ಕಿರುಕುಳ ನೀಡುತ್ತಿದ್ದು ದಿ 16.08.2023 ರಂದು ಮಗಳ ಮೊಬೈಲ್ಗೆ ಅಳಿಯ ಮೆಸೇಜ್ ಮಾಡಿ ಮನೆಯ ವಿಚಾರವನ್ನು ನಿಮ್ಮ ತಂದೆಗೆ ಕಹೇಳಿಕೊಂಡು ಮಾನ ಮರ್ಯಾದೆ ತೆಗೆದ ಅಳಿಯನನ್ನು ಕೇಳಲು ಹೋದಾಗ ಈ ಕೇಸಿನ ಆರೋಪಿಯು ತನ್ನ ಗಂಡನಿಗೆ ಚಾಕುವಿನಿಂದ ಚುಚ್ಚಿರುತ್ತಾನೆ ಸ್ವಲ್ಪ ಸಮಯದ ನಂತರ ನಮ್ಮ ಗಂಡ ಮೃತಪಟ್ಟಿರುವುದಾಗಿ ತಿಳಿಸಿರುತ್ತಾರೆ. | 9 ಯಂಚು ಸರ್ಜಾ ನಿರ್ಮಿಸಿರುವ ವಿಚಾರದಲ್ಲಿ |
| 17 | ಕೋಲಾರ ನಗರ ಪೊಲೀಸ್ ಠಾಣೆ | ಮೊ.ಸಂ 176/2023 ಕಲಂ 302.114.34 ಐ.ಪಿ.ಸಿ | ದಿನಾಂಕ:18.09.2023 ರಂದು ಪಿರ್ಯಾದುದಾರರು ಠಾಣೆಗೆ ಹಾಜರಾಗಿ ನೀಡಿದ ದೂರಿನ ಸಾರಾಂಶವೇನೆಂದರೆ, ತನಗೆ ಇಬ್ಬರು ಮಕ್ಕಿದ್ದು 1.ಗೌಸಿಯಾ 2.ಮುಜಾಮಿಲ್ ಪಾಷಾ, ಪಿತ್ರಾರ್ಜಿತವಾಗಿ ಬಂದಿರುವ ಆಸ್ತಿಯಲ್ಲಿ ಮನೆಕಟ್ಟುತ್ತಿದ್ದು, ಸರ್ಜಾ ವಿಚಾರಕ್ಕೆ ನಮಗೂ ನಮ್ಮ ಅಕ್ಕ, ತಂಗಿ &ಅವರ ಮಕ್ಕಳ ನಡುವೆ ಮನಸ್ತಾಪಗಳಿದ್ದು. ಹೀಗಿರುವಾಗ ದಿ:18.09.23 ರಂದು ಸದಾಂಹುಸೇನ್ & ಮುಜಾಮಿಲ್ ಪಾಷಾ, ಬ್ರಷ್ ಕೆಳಗೆ ನಡೆದುಕೊಂಡು, ಈದ್ಗಾ ಬಳಿಯಿರುವ ಸರ್ಕಾರಿ ಶಾಲೆ ಬಳಿ ಹೋಗುವಷ್ಟರಲ್ಲಿ, ಈಕೇಸಿನ ಆರೋಪಿಗಳು ಏಕಾಏಕಿ ಮುಜಾಮಿಲ್ ಪಾಷನ ಎದೆಯ ಬಳಿ ಹಾಗೂ ಕೈಗಳಿಗೆ ಚುಚ್ಚಿದ್ದು, ಚಿಕಿತ್ಸೆ ಫಲಕಾರಿಯಾಗದೆ, ಆರ್.ಎಲ್ ಜಾಲಪ್ಪ ಆಸ್ಪತ್ರೆಯಲ್ಲಿ ಮೃತಪಟ್ಟದ್ದು.ಕೊಲೆ ಮಾಡಲು ಸೈಯ್ಯದ್ ಪಿರ್ದೋಸ್ ಕುಮ್ಮಕ್ಕು ನೀಡಿರುತ್ತಾರೆ. | ಕೌಟುಂಬಿಕ ಕಾರಣಗಳಿಗಾಗಿ |
| 18 | ಕೋಲಾರ ನಗರ ಪೊಲೀಸ್ ಠಾಣೆ | 211/2023 ಕಲಂ 302 ರೆ/ವಿ 34 ಐಪಿಸಿ | ಪಿರ್ಯಾದಿದಾರರ ಮಗನಾದ ಕಾರ್ತಿಕ್ ಸಿಂಗ್ಎಸ್.ಡಿ.ಸಿ ಕಾಲೇಜಿನಲ್ಲಿ ವ್ಯಾಸಂಗಮಾಡುತ್ತಿದ್ದು, ದಿನಾಂಕ:03.11.2023 ರಂದು ಮೈಯಲ್ಲಿ ಹುಷಾರಿಲ್ಲದ ಕಾರಣ ಮನೆಯಲ್ಲೇ ಇದ್ದು, ಮಧ್ಯಾಹ್ನ 3:42 ಗಂಟೆಯಲ್ಲಿ ಮೊಬೈಲ್ ರೀಚಾರ್ಜ್ ಮಾಡಿಸಲು ಹೋಗಿದ್ದು, ರಾತ್ರಿ 8:30 ಗಂಟೆಯಲ್ಲಿ ಅಣ್ಣನಾದ ಸುಂದರ್ ಸಿಂಗ್ ರವರು ಬಾಪೂಜಿ ಶಾಲೆ ಬಳಿ ಕೊಲೆ ಮಾಡಿರುವುದಾಗಿ ತಿಳಿಸಿದ್ದು, ಕೊಲೆ ಮಾಡಿರುವ ಆರೋಪಿಗಳ ವಿರುದ್ಧ ಕಾನೂನು ಕ್ರಮಕ್ಕೆ ಕೊಟ್ಟ ದೂರಾಗಿರುತ್ತೆ | |
| 19 | ಗಲ್‌ಪೇಟೆ | ಮೊಸಂ23/23 302, 307, 114 ರೆ/ವಿ 34 ಐ.ಪಿ.ಸಿ. | ಮೃತನಾದ ತಾಜ್ ಪಠಾನ್ ಮತ್ತು ಆರೋಪಿ ಫಯಾಜ್ ಖಾನ್ ಸಂಬಂಧಿಕರಾಗಿರುತ್ತಾರೆ. ಆರೋಪಿ ಮತ್ತು ಆತನ ಹೆಂಡತಿಗೆ ಆಗಾಗ ಜಗಳ-ಗಲಾಟೆಯಾಗುತ್ತಿದ್ದು, ಹೆಂಡತಿ ಮುನಿಸಿಕೊಂಡು ತವರು ಮನೆಗೆ ಹಾಗೂ ತಂಗಿ-ಭಾವನಾದ ತಾಜ್ ಪಠಾನ್ (ಮೃತ) ರವರ ಮನೆಗೆ ಹೋಗಿ ಅಲ್ಲಿಯೇ ಇರುತ್ತಿದ್ದಳು. ಆರೋಪಿಗೆ ತನ್ನ ಹೆಂಡತಿ ನನ್ನದ | ವೈಯಕ್ತಿಕ ದ್ವೇಷ (ಕೌಟುಂ... |

| | | | | |
|---|---|---|---|---|
| | | | ಜಗಳವಾದಾಗ ಹೆಂಡತಿಯು ತನ್ನ ತಂಗಿ ಮತ್ತು ಭಾವ ಮೃತ ತಾಜ್ ಪಠಾನ್ ರವರ ಮನೆಗೆ ಹೋಗಿ ಇರುವುದು ಇಷ್ಟವಿರುವುದಿಲ್ಲ. ಆರೋಪಿಯ ಸಂಸಾರದಲ್ಲಿ ಗಲಾಟೆ-ಹಾಗೂ ಜಗಳಕ್ಕೆ ಕಾರಣ ತಾಜ್ ಪಠಾನ್ ರವರೇ ಕಾರಣ ಎಂದು ಆಗಾಗ ಆರೋಪಿ ಮತ್ತು ಮೃತ ತಾಜ್ ಪಠಾನ್ ರವರ ಮಧ್ಯೆ ಆಗಾಗ ಗಲಾಟೆ ಜಗಳವಾಗುತ್ತಿತ್ತು. ಈಗಿರುವಾಗ ದಿನಾಂಕ:20-03-2023 ರಂದು ಸುಮಾರು ಮಧ್ಯಾಹ್ನ 3-00 ಗಂಟೆಯಲ್ಲಿ ಅರ್ಬಾಜ್ ಖಾನ್ ಮತ್ತು ತಾಜ್ ಪಠಾನ್ ರವರು ಆರೋಪಿ ಮನೆಗೆ ಹೋಗಿದ್ದಾಗ ಆರೋಪಿಯ ಅಜ್ಜಿ ಕಮ್ಮರುನ್ನೀಸಾ ರವರು ಕೊಲೆ ಮಾಡಲು ಕುಮ್ಮಕ್ಕು ನೀಡಿದ್ದರಿಂದ ಆರೋಪಿ ಒಂದು ಚಾಕುವಿನಲ್ಲಿ ತಾಜ್ ಪಠಾನ್ ರವರ ಹೊಟ್ಟೆಯ ಬಲಭಾಗಕ್ಕೆ ತಿವಿದು ಕೊಲೆ ಮಾಡಿರುತ್ತಾರೆ. ಫಯಾಜ್ ಖಾನ್ ರವರಿಗೆ ಕೊಲೆ ಯತ್ನ ಮಾಡಿರುತ್ತಾನೆ. | ಸಂಸಾರ, ಸ್ನೇಹಿತರು. ಕ್ಷುಲಕ್ಕ ಕಾರಣ ಇತ್ಯಾದಿ) |
| 20 | ಗಲ್‌ಪೇಟೆ | ಮೊಸಂ 40/23 302 ಐ.ಪಿ.ಸಿ. | ಮೃತ ತಬ್ರೇಜ್ ಪಾಷ ಮತ್ತು ಆರೋಪಿ ಸೈಯದ್ ಸಮೀವುಲ್ಲಾ ರವರುಗಳು ಸ್ನೇಹಿತರಾಗಿದ್ದು, ಸಮೀವುಲ್ಲಾ ಶಹನಾ ತಾಜ್ ಎಂಬಾಕೆಯೊಂದಿಗೆ ಅಕ್ರಮ ಸಂಬಂಧ ಇಟ್ಟುಕೊಂಡಿರುತ್ತಾರೆ. ತಬ್ರೇಜ್ ಪಾಷ ರವರು ಸಮೀವುಲ್ಲಾ ಜೊತೆಯಲ್ಲಿ ಆಗಾಗ ಶಹನಾ ತಾಜ್ ರವರು ವಾಸವಿದ್ದ ಮನೆಗೆ ಹೋಗಿ ಬರುತ್ತಿದ್ದನು. ಆಗ ಶಹನಾ ತಾಜ್ ಮತ್ತು ಮೃತ ತಬ್ರೇಜ್ ಪಾಷ ರವರೊಂದಿಗೆ ಪರಿಚಯವಾಗಿ ಅಕ್ರಮ ಸಂಬಂಧ ಏರ್ಪಡುತ್ತದೆ. ಇಬ್ಬರು ನೊಂದಣಿ ವಿವಾಹವಾಗುತ್ತಾರೆ. ಈ ವಿಚಾರ ಸಮೀವುಲ್ಲಾ ರವರಿಗೆ ಗೊತ್ತಾಗಿ ಈ ಬಗ್ಗೆ ಶಹನಾ ತಾಜ್ ನಡುವೆ ಮತ್ತು ತಬ್ರೇಜ್ ಪಾಷ ರವರ ನಡುವೆ ಆಗಾಗ ಗಲಾಟೆ ಜಗಳವಾಗುತ್ತಿರುತ್ತದೆ. ದಿನಾಂಕ:04-05-2023 ರಂದು ರಾತ್ರಿ ಸುಮಾರು 9-30 ಗಂಟೆಯಲ್ಲಿ ಆರೋಪಿ ಸೈಯದ್ ಸಮೀವುಲ್ಲಾ ರವರು ಶಹನಾತಾಜ್ ರವರಿದ್ದ ಮನೆಗೆ ಹೋದಾಗ ಮನೆಯಲ್ಲಿ ತಬ್ರೇಜ್ ಪಾಷ ಇದ್ದುದನ್ನು ಕಂಡು, ಕೋಪಗೊಂಡು ಅಲ್ಲಿಯೇ ಇದ್ದ ಒಂದು ಮರದ ದೊಣ್ಣೆಯಿಂದ ಹೊಡೆದು ಕೊಲೆ ಮಾಡಿರುತ್ತಾನೆ. | ಅಕ್ರಮ ಸಂಬಂಧ/ಪ್ರೀತಿ ಕಾರಣಕ್ಕಾಗಿ ಕೊಲೆ |
| 21 | ಕೋಲಾರ (ಗ್ರಾ) ಠಾಣೆ | 206/2023 ಕಲಂ: 302.201 ಐಪಿಸಿ | ಫಿರ್ಯಾದಿದಾರರು ಸಮನ್ಸ್ ಜಾರಿ ಕರ್ತವ್ಯದಲ್ಲಿದ್ದಾಗ ದಿನಾಂಕ :19.04.2023 ರಂದದು ಮಧ್ಯಾಹ್ನ ಸು.01.30 ಗಂಟೆಗೆ ಯಾರೋ ಕೆಲವರು ಅಮ್ಮೇರಹಳ್ಳಿ ಕೆರೆಯಲ್ಲಿ ನಂದಿನಿ ಬಾರ್ ಕಡೆಯಿಂದ ಕೆರೆಯ ಕಡೆಗೆ ಹೋಗುವ ಜಾಗದಲ್ಲಿ ನೀರಿನಲ್ಲಿ ಯಾವುದೋ ಹೆಂಗಸ್ಸಿನ ಮೃತ ದೇಹ ತೇಲುತ್ತಿರುವುದಾಗಿ ವಿಚಾರ ತಿಳಿದ ಕೂಡಲೇ ಸ್ಥಳಕ್ಕೆ ಹೋಗಿ ನೋಡಲಾಗಿ ಕೆರೆಯ ನೀರಿನಲ್ಲಿ ಮುಸ್ಲಿಂ ಜನಾಂಗದವರು ಧರಿಸಿರುವ ಕಪ್ಪು ಬಣ್ಣದ ಬುರ್ಕಾ ಹಸಿರು ಬಣ್ಣದ ಟಾಪ್ ಹಾಗು ಕಪ್ಪು ಬಣ್ಣದ ಪ್ಯಾಂಟ್ ಅಂದಾಜು ವಸ್ಸು 25 ರಿಂದ 30 ವರ್ಷ, ಆಗಿರುತ್ತೆ ಮೃತ ದೇಹದ ಮೇಲೆ ಎಡಕಿವಿಯ ಹಿಂಭಗದಲ್ಲಿ ಎರಡು ಕಡೆ ಹಾಗೂ ಹೊಟ್ಟೆ ಮೇಲೆ ಯಾವುದೋ ಆಯುಧದಿಂದ ತಿವಿದಿರುವ ಗಾಯಗಳು ಕಂಡು ಬಂದಿರುತ್ತೆ ಮೃತ ದೇಹ ಕೊಳೆತ ಸ್ಥಿತಿಯಲ್ಲಿ ರುತ್ತೆ ಯಾರೋ 2 ದಿನಗಳ ಹಿಂದೆ ಮಹಿಳೆ ಕೊಲೆ ಮಾಡಿ ಸಾಕ್ಷ್ಯವನ್ನು ನಾಶಪಡಿಸುವ ಸಲುವಾಗಿ ಕೆರೆಗೆ ಹಾಕಿರುತ್ತಾರೆಂದು ದೂರು. | ಅಕ್ರಮ ಸಂಬಂಧ/ಪ್ರೀತಿ ಕಾರಣಕ್ಕಾಗಿ ಕೊಲೆ |
| 22 | ಕೋಲಾರ (ಗ್ರಾ) ಠಾಣೆ | 269/2023 ಕಲಂ:302. 120(ಬಿ) ರೆ/ವಿ 34 ಐಪಿಸಿ | ಫಿರ್ಯಾದಿ ಮಗ ಕೃಷ್ಣಮೂರ್ತಿ ಕಲಾವಿದನಾಗಿ ಜೀವನ ನಡೆಸುತ್ತಿದ್ದು, ಸುಮಾರು 9 ವರ್ಷದ ಹಿಂದೆ ವಿವಾಹ ವಾಗಿದ್ದು 3 ಜನ ಮಕ್ಕಳಿರುತ್ತಾರೆ. ಸುಮಾರು 6 ವರ್ಷಗಳಿಂದ ಸೊಸೆ ಚೊಕ್ಕರೆಡ್ಡಪಲ್ಲಿ ಗ್ರಾಮದ ಶ್ರೀಧರ್ ರವರೊಂದಿಗೆ ಅಕ್ರಮ ಸಂಬಂಧ ಹೊಂದಿದ್ದು, ಈ ವಿಚಾರವಾಗಿ ಮನೆಯಲ್ಲಿ ಗಲಾಟೆ ಮಾಡಿರುತ್ತಾರೆ. ನಂತರ ಸೊಸೆ ಎಷ್ಟೇ ಬುದ್ಧಿ ಹೇಳಿದರು ಕೇಳಿರುವುದಿಲ್ಲ. ದಿ:29.5.2023 ರಂದು ಫಿರ್ಯಾದಿ ಮಗ ಎಂದಿನಂತೆ ದ್ವಿಚಕ್ರ ವಾಹನದಲ್ಲಿ ಕೋಲಾರಕ್ಕೆ ಹೋಗಿರುತ್ತಾರೆ, ರಾತ್ರಿ ಬರುತ್ತಿರುವಾಗ ಜನ್ನಗಟ್ಟ ಗ್ರಾಮದ ರೈಲ್ವೇ ಸೇತುವೇ ಬಳಿ ಶ್ರೀಧರ್ ಮತ್ತು ಅನವ ಸ್ನೇಹಿತ ಅಡ್ಡಹಾಕಿ ಹೊಡೆದಿರುತ್ತಾರೆ ದಾರ. ಸೊಸೆ ಪ್ರಿಯಕರನೊಂದಿಗೆ ಒಳಸಂಚು ಮಾಡಿ ಕೊಲೆ ಮಾಡುವ ಉದ್ದೇಶದಿಂದ ಆಯುಧದಿಂದ ಹೊಡೆಸಿರುತರ್ತಾಳೆ, ಇದನ್ನು ಗ್ರಾಮದವರು ನೋಡಿ ಕೃಷ್ಣ ಮೂರ್ತಿಯನ್ನು ಆಸ್ಪತ್ರೆಗೆ ಸಾಗಿಸುವಷ್ಟರಲ್ಲಿ ಮೃತಪಟ್ಟಿರುತ್ತಾರಂತ ದೂರು. | ಅನೈತಿಕ ಸಂಬಂಧ |
| 23 | ಕೋಲಾರ (ಗ್ರಾ) ಠಾಣೆ | 317/2023 ಕಲಂ: 302 ಐಪಿಸಿ | ಫಿರ್ಯಾದಿದಾರರ ತಂದೆಗೆ ಇಬ್ಬರು ಹೆಂಡತಿಯರಿದ್ದು 1.ಶಾಂತಮ್ಮ, 2. ರತ್ನಮ್ಮ ಆಗಿರುತ್ತಾರೆ, ಫಿರ್ಯಾದಿದಾರರ ಮಗಳಾದ ಸುಗುಣ ರವರು ಕೆಎಸ್‌ಆರ್‌ಟಿಸಿ ನಲ್ಲಿ ಟೆಕ್ನಿಷಿಯನ್ ಕೆಲಸ ಮಾಡುತ್ತಿರುತ್ತಾರೆ, ಮುರಳಿ ರವರೊಂದಿಗೆ ವಿವಾಹವಾಗಿದ್ದು ಸುಗುಣ ರವರಿಗೆ ಪ್ರೀತಮ್ ಗೌಡ 12 ವರ್ಷ, ಇಷಿತ 5 ವರ್ಷ ಎಂಬ ಇಬ್ಬರು ಮಕ್ಕಳಿದ್ದು ಸಣ್ಣ ಪುಟ್ಟ ವಿಚಾರಗಳಿಗೆ ಮನೆಯಲ್ಲಿ ಗಲಾಟೆ ಮಾಡಿಕೊಂಡಿರುತ್ತಾರೆ ದಿನಾಂಕ: 14.06.2023 ರಂದು ತಂದೆಯವರು ಮೃತಪಟ್ಟಿದ್ದು ಅಂದಿನಿಂದ ಸುಗುಣ ರಜೆಯಲ್ಲಿರುತ್ತಾರೆ ದಿನಾಂಕ:20.06.2023 ರಂದು ಫಿರ್ಯಾದಿ ಮೊಬೈಲ್‌ಗೆ ವಾಟ್ಸಪ್ ನಲ್ಲಿ ಮರಣ ಪತ್ರ ಬರೆದು [illegible] ಮಗಳಿಗೆ ಸೀರೆಯಿಂದ ನೇಣು ಹಾಕಿ ಕೊಲೆ | ತಂದೆ ತಾಯಿ ಮಕ್ಕಳನ್ನು ಸಾಯಿಸಿರುವ ಪ್ರಕರಣಗಳು |

| | | | | |
|---|---|---|---|---|
| | | | ಮಾಡಿರುತ್ತಾರೆ ಸುಗುಣ ಸೀರೆಯಿಂದ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ ಎಂತ ದೂರು | |
| 24 | ಕೋಲಾರ (ಗ್ರಾ) ಠಾಣೆ | 339/2023 ಕಲಂ: 302 ಐಪಿಸಿ | ನ್ಯಾಯಾಲಯ ಮ.ಪಿಸಿ 485 ರವರು ಹಾಜರುಪಡಿಸಿದ ಪಿಸಿಆರ್ 136/23 ರ ಸಾರಾಂಶ ದಿ:27.05.2023 ರಂದು ಪಿರ್ಯಾದಿ ಅಣ್ಣ ಮಗ ಪ್ರಭಾಸ್ ಮನೆಯಿಂದ ಹೊರಗೆ ಹೋಗಿರುತ್ತಾನೆ. ಈ ದಿನ 2.15 ಸಂಧೀಪ್ ಸ್ನೇಹಿತನು ಕರೆ ಮಾಡಿ ಮಂಗಸಂದ್ರ ಬಾವಿಯಲ್ಲಿ ಆಕಸ್ಮಿಕವಾಗಿ ನೀರಿನಲ್ಲಿ ಈಜಲು ಹೋಗಿ ಮೃತಪಟ್ಟಿರುತ್ತಾನೆಂದು ಆರೋಪಿಗಳು ತಿಳಿಸಿದ ಕೂಡಲೇ ಬಂದಿರುತ್ತಾರೆ ನಂತರ ಈ ಕೇಸಿನ ಆರೋಪಿತರು ಪ್ರಭಾಸ್ ರವರನ್ನು ಬಾವಿಯಲ್ಲಿ ಮುಳುಗಿಸಿ ಸಾಯಿಸಿರುತ್ತಾರೆ ಎಂತ ಅನುಮಾನ ಇರುತ್ತೆಂತ ದೂರು ನೀಡಿರುತ್ತಾರೆ. | ಕೊಲೆಯೆಂದು ಅನುಮಾನಿಸಿದ ನ್ಯಾಯಾಲಯದ ದಾಖಲಾದ ಪ್ರಕರಣಗಳು |
| 25 | ಕೋಲಾರ (ಗ್ರಾ) ಠಾಣೆ | 341/2023 ಕಲಂ: 302.201 ರೆ/ವಿ 34 ಐಪಿಸಿ | ಪಿರ್ಯಾದಿದಾರರು ಮರಕಟಾವು ಮಾಡುವ ಕೆಲಸ ಮಾಡುತ್ತಿರುತ್ತಾರೆ ಹೊಳಲಿ ಗ್ರಾಮದ ವೆಂಕಟೇಶಪ್ಪರವರ ಜಮೀನಿನಲ್ಲಿ ನೀಲಗಿರಿ ಮರಗಳನ್ನು ಕಟಾವು ಮಾಡಲು ಅಲೆಮಾರಿ ವಾಸಿಗಳಾದ ಮಂಜುಳ ವೆಂಕಟಪ್ಪ ಮತ್ತು ಅವರ ಕಡೆಯವರು ಕೂಲಿಗಾಗಿ ಬಂದು ಅಲ್ಲಿಯೇ ಗುಡಿಸಲು ಹಾಕಿಕೊಂಡು ವಾಸವಾಗಿರುತ್ತಾರೆ ದಿನಾಂಕ:02.07.2023 ರಂದು ಕೆಲಸ ಜಾಗಕ್ಕೆ ಹೋದಾಗ ಮಂಜುಳ ಕಾಣಲಿಲ್ಲ ವಿಚಾರಿಸಿದಾಗ ಎಲ್ಲಿಯೋ ಹೋಗಿದ್ದಾಳೆಂತ ತಿಳಿಸಿರುತ್ತಾನೆ. ನಂತರ ವಿಚಾರ ಮಾಡಿದಾಗ ದಿ:01.07.2023 ರಂದು ರಾತ್ರಿ 8.00 ಗಂಟೆಯಲ್ಲಿ ಮದ್ಯಪಾನ ಮತ್ತಿನಲ್ಲಿ ಗಂಡ ಹೆಂಡತಿ ಮಂಜುಳರನ್ನು ಕೊಲೆ ಮಾಡಿ ಸಾಕ್ಷನಾಶ ಪಡಿಸಿರುತ್ತಾನೆಂದು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿರುತ್ತೆ. | ವೈಯಕ್ತಿಕ ದ್ವೇಷ (ಕುಟುಂಬ. ಸಂಸಾರ. ಸ್ನೇಹಿತರು. ಕ್ಷುಲ್ಲಕ ಕಾರಣ ಇತ್ಯಾದಿ) |
| 26 | ಕೋಲಾರ (ಗ್ರಾ) ಠಾಣೆ | 368/2023 ಕಲಂ:302 ಐಪಿಸಿ | ದಿನಾಂಕ:23.07.2023 ರಂದು ಪಿರ್ಯಾದಿ ತಂದೆಯವರು ತಮ್ಮ ಗ್ರಾಮದ ಮುನಿಶಾಮಪ್ಪರವರೊಂದಿಗೆ ಕೆ.ಜಿ.ಎಫ್ ಗೆ ಹೋಗಿ ನಂತರ ಸಂಜೆ ಮನೆಗೆ ಬಂದು ತನಗೆ ಮೇವು ಕೊಯ್ದುಕೊಂಡು ಬರಲು ಹೇಳಿರುತ್ತಾರೆ ತಾಯಿಯವರು ಬೋಯಿಕೊಂಡ ದೇವಸ್ಥಾನಕ್ಕೆ ಹೋಗಿದ್ದರು ಸಂಜೆ 6.00 ಗಂಟೆಯಾದರೂ ತಂದೆ ಮನೆಗೆ ಬಾರದೇ ಇದ್ದು, ಫೋನ್ ಮಾಡಿದರೇ ರಿಸೀವ್ ಮಾಡಲಿಲ್ಲ ನಂತರ ಹುಡುಕಿಕೊಂಡು ತೋಟದ ಬಳಿ ಹೋದಾಗ ರಾತ್ರಿ 7.30 ಗಂಟೆಯಲ್ಲಿ ಜಮೀನಿನಲ್ಲಿ ರಕ್ತ ಮಡುವಿನಲ್ಲಿ ಬಿದ್ದು ಮೃತಪಟ್ಟಿರುತ್ತಾರೆ ಹತ್ತಿರ ಹೋಗಿ ನೋಡಲಾಗಿ ತಂದೆಯ ಕುತ್ತಿಗೆ ಮತ್ತು ಎರಡೂ ಕೈಗಳಿಗೆ ಬಾರಕ್ತ ಗಾಯಗಳಾಗಿರುತ್ತೆ ಯಾರೋ ಯಾವುದೋ ದುರುದ್ದೇಶದಿಂದ ಕೊಲೆ ಮಾಡಿರುತ್ತಾರೆಂತ ದೂರು. | ಕೊಲೆಯ ಉದ್ದೇಶ ತಿಳಿಯದೇ ಇರುವ ಪ್ರಕರಣ |
| 27 | ಕೋಲಾರ (ಗ್ರಾ) ಠಾಣೆ | 414/2023 ಕಲಂ: 302.201 ಐಪಿಸಿ | ಸುಗಟೂರು ಹೊರ ಠಾಣೆಯ ಹೆಚ್.ಸಿ 97 ನಾಗೇಂದ್ರರವರು ಗಸ್ತಿನಲ್ಲಿದ್ದಾಗ ತೊಟ್ಲಿ ಗ್ರಾಮದ ವೆಂಕಟೇಶಗೌಡ ರವರ ಮಗಳಾದ ರಮ್ಯರವರನ್ನು ದಿನಾಂಕ:25.08.2023 ರಂದು ಬೆಳಗಿನ ಜಾವ 2.30 ಗಂಟೆಯಲ್ಲಿ ಅನುಮಾಸ್ಪದವಾಗಿ ಮೃತಪಟ್ಟಿದ್ದು ರಮ್ಯಳ ಪೋಷಕರು ಗೌಪ್ಯವಾಗಿ ಅವರ ಜಮೀನಿನಲ್ಲಿ ಹೊತ್ತು ಹಾಕಿದ್ದು ಮರಣ ಕಾರಣವನ್ನು ತಿಳಿಯಲು ಕೋರುವುದಾಗಿ ನೀಡಿದ ದೂರಿನ ಮೇರೆಗೆ ಠಾಣಾ ಯುಡಿಆರ್:48 /2023 ಕಲಂ:174 (3)(ಐಗಿ) ಸಿ.ಆರ್.ಪಿ.ಸಿ ರೀತ್ಯಾ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದು, ರಮ್ಯ ರವರ ತಂದೆ ವೆಂಕಟೇಶಗೌಡ ರವರನ್ನು ಠಾಣೆಗೆ ಕರೆಯಿಸಿ ವಿಚಾರಣೆ ಮಾಡಿದ್ದು ತನ್ನ ಮಗಳು ನರಸಾಪುರ ಕೈಗಾರಿಕಾ ಪ್ರದೇಶದಲ್ಲಿ ಖಾಸಗಿ ಕಂಪನಿಯಲ್ಲಿ ಕೆಲಸಕ್ಕೆ ಹೋಗುತ್ತಿದ್ದು ಯಾವಾಗಲೂ ಮೊಬೈಲ್ ಫೋನ್ ನಲ್ಲಿ ಯಾರೊಂದಿಗೆ ಮಾತನಾಡಿಕೊಂಡು ಇರುತ್ತಿದ್ದು ದಿನಾಂಕ:25.08.2023 ರಂದು ಬೆಳಗಿನ ಜಾವ 2.30 ಗಂಟೆಯಲ್ಲಿ ನಿದ್ರೆ ಮಾಡದೇ ಫೋನ್‌ಹಿಡಿದುಕೊಂಡು ಕುಳಿತಿದ್ದು ತಾನು ರಮ್ಯಳನ್ನು ಕುರಿತು ಸಂಬಂಧ ನೋಡುತ್ತೇನೆ ಮದುವೆ ಮಾಡಿಕೊಳ್ಳಲು ಹೇಳಿದಕ್ಕೆ ನನಗೆ ಮದುವೆ ಬೇಡ ಎಂದು ಗಲಾಟೆ ಮಾಡಿದಾಗ ತನಗೆ ಕೋಪ ಬಂದು ಎರಡು ಏಟು ಕಪಾಳಕ್ಕೆ ಹೊಡೆದಾಗ ರಮ್ಯ ಕೆಳಗೆ ಬಿದ್ದು ಹೋಗಿದ್ದು ನಾನು ಎಡಗಾಲಿನಿಂದ ಕುತ್ತಿಗೆಯನ್ನು ತುಳಿದಾಗ ಉಸಿರು ಕಟ್ಟಿ ಸತ್ತು ಹೋಗಿದ್ದು ಮೃತ ದೇಹವನ್ನು ಮೇಲ್ಕಂಡ ಆರೋಪಿಗಳು ಗೌಪ್ಯವಾಗಿ ಜಮೀನಿನಲ್ಲಿ ಹೂತ್ತು ಹಾಕಿರುವುದಾಗಿ ಇತ್ಯಾದಿ ದೂರು. | ತಂದೆ ತಾಯಿ ಮಕ್ಕಳನ್ನು ಸಾಯಿಸಿರುವ ಪ್ರಕರಣಗಳು |

| | | | | |
|---|---|---|---|---|
| 28 | ವೇಮಗಲ್ | 04/2023<br>302-324 ಐಪಿಸಿ | ದಿನಾಂಕ:29-12-2022 ರಂದು ರಾತ್ರಿ ದಯಾನಂದ ತನ್ನ ಹೆಂಡತಿ ಮತ್ತು ತಾಯಿಯ ಮೇಲೆ ಗಲಾಟೆ ಮಾಡುತ್ತಿದ್ದು, ಪಿರ್ಯಾದಿ ತಾಯಿ ಮುನಿರತ್ನಮ್ಮ ರವರು ಸಂಬಂಧಿಕರು ಹೋಗಿ ಗಲಾಟೆ ಬಿಡಿಸಿ ಬುದ್ದಿವಾದ ಹೇಳಿ ಮನೆಗೆ ಮಾಡಿ ಗಲಾಟೆ ಮಾಡುತ್ತಿದ್ದು, ಜಗಳ ಬಿಡಿಸಲು ಅಡ್ಡ ಹೋದ ಪಿರ್ಯಾದಿಯ ತಾಯಿಗೆ ತಲೆಯ ಬಲ ಭಾಗಕ್ಕೆ ಹಿಂಭಾಗಕ್ಕೆ ದಯಾನಂದ ಕೋಲಿನಿಂದ ಹೊಡೆದು ರಕ್ತಗಾಯಪಡಿಸಿದ್ದು, ಮುನಿರತ್ನಮ್ಮರವರನ್ನು ಎಸ್.ಎನ್.ಆರ್. ಆಸ್ಪತ್ರೆಗೆ ದಾಖಲಿಸಿ ನಂತರ ಅಲ್ಲಿಂದ ಬೆಂಗಳೂರು ನಿಮ್ಹಾನ್ಸ್ ಆಸ್ಪತ್ರೆಗೆ ದಾಖಲಿಸಿದ್ದು, ದಿನಾಂಕ:11-01-2023 ರಂದು ಅಲ್ಲಿಂದ ಸೇಂಟ್ ಜಾನ್ಸ್ ಆಸ್ಪತ್ರೆಗೆ ದಾಖಲಿಸುವ ಮಾರ್ಗಮಧ್ಯೆ ಸಂಜೆ ಸುಮಾರು 4-30 ಗಂಟೆಯಲ್ಲಿ ಮೃತಪಟ್ಟಿದ್ದು, ಕಾನೂನು ಕ್ರಮ ಜರುಗಿಸಲು ಕೋರಿ ನೀಡಿದ ದೂರಾಗಿರುತ್ತೆ. | ತಪ್ಪು ತಿಳುವಳಿಕೆಯಿಂದ ಕೊಲೆಯೆಂದು ನೀಡಿರುವ ದೂರುಗಳು |
| 29 | ಮಾಲೂರು | ಮೊ.ಸಂ-06/2023<br>ಮತ್ತು<br>ಕಲಂ-201, 302<br>ಐ.ಪಿ.ಸಿ. | ದಿನಾಂಕ.10-01-2023 ರಂದು ಮಾನ್ಯ ಜಿಲ್ಲಾ ಪೊಲೀಸ್ ಕಛೇರಿಯಿಂದ ಟಪಾಲು ಮುಖಾಂತರ 11-00 ಗಂಟೆಯಲ್ಲಿ ಕೃತ್ಯ ನಡೆದ ಸ್ಥಳದ ಆಧಾರದ ಮೇರೆಗೆ ಬಂದ ದೂರನ್ನು ಪಡೆದುಕೊಂಡಿದ್ದರ ಸಾರಾಂಶವೇನೆಂದರೆ, ಪಿರ್ಯಾಧಿದಾರರು ದಿನಾಂಕ.03-12-2022 ರಂದು ಮಧ್ಯಾಹ್ನ 2-30 ಗಂಟೆಯಲ್ಲಿ ಬರ್ಹಿದೆಸೆಗೆ ಹೋಗಲು ಶ್ರೀ.ಗುಂಡಾಂಜನೇಯ ಸ್ವಾಮಿದೇವಾಲಯದ ಹಿಂಭಾಗದಲ್ಲಿರುವ ಕಲ್ಲು ಕ್ವಾರಿಯಲ್ಲಿರುವ ನೀರಿನ ಬಳಿ ಹೋದಾಗ ನೀರಿನಲ್ಲಿ ಒಂದು ಗಂಡಸ್ಸಿನ ಹೆಣವು ಮಕಾಡೆಯಾಗಿ ತೇಲುತ್ತಿದ್ದು, ಮುಖದ ಹಿಂಭಾಗ ಹುಳುಗಳು ತಿಂದಿರುವ ರೀತಿ ಕಂಡುಬಂದಿದ್ದು, ಈ ವಿಚಾರವನ್ನು ನಂದಗುಡಿ ಪೊಲೀಸರಿಗೆ ತಿಳಿಸಿದ್ದು ಪೊಲೀಸರು ಬಂದು ನೀರಿನಿಂದ ಅಪರಿಚಿತನ ವ್ಯಕ್ತಿಯನ್ನು ತೆರೆದು ನೋಡಲಾಗಿ ಮೃತ ವ್ಯಕ್ತಿಯ ಶವಕ್ಕೆ ಡ್ರಿಪ್ ಪೈಪ್ ನಿಂದ ಹೊಟ್ಟೆಗೆ ಕಲ್ಲು ಕಟ್ಟಿರುತ್ತೆ. ವಯಸ್ಸು ಸುಮಾರು 30-35 ವರ್ಷ ಆಗಿರುತ್ತೆ. ಅಪರಿಚಿತ ವ್ಯಕ್ತಿಯನ್ನು ಯಾರೋ ದುಷ್ಕರ್ಮಿಗಳು ಯಾವುದೋ ಒಂದು ಆಯುಧದಿಂದ ಕೊಲೆ ಮಾಡಿ, ಸಾಯಿಸಿ, ಸಾಕ್ಷಿ ನಾಶಪಡಿಸುವ ಉದ್ದೇಶದಿಂದ ಕಲ್ಲು ಕ್ವಾರಿಯೊಳಗೆ ಹಾಕಿರುತ್ತಾರೆಂತ ನೀಡಿದ ದೂರಿನ ಮೇರೆಗೆ ನಂದಗುಡಿ ಠಾಣಾ ಮೊ.ಸಂ-198/2022, ಕಲಂ-201, 302 ಐ.ಪಿ.ಸಿ ರೀತ್ಯಾ ಪ್ರಕರಣ ದಾಖಲಾಗಿರುತ್ತೆ. ನಂತರ ನಂದಗುಡಿ ಪೊಲೀಸರು ತನಿಖೆಯನ್ನು ಮುಂದುವರೆಸಿ, ವಾರಸ್ಸುದಾರರನ್ನು ಪತ್ತೆ ಮಾಡಿ, ಮೃತ ಆನಂದ್ @ ಅನಿಲ್, ಚಂಬೆ ಗ್ರಾಮ, ಮಾಲೂರು ತಾಲ್ಲೂಕು ಎಂತ ತಿಳಿದು, ನಂತರ ತನಿಖೆಯಲ್ಲಿ ಮೃತ ಆನಂದ್ ರವರ ಹೆಂಡತಿ ಚೈತ್ರಾ ರವರಿಗೂ ಚಲಪತಿ ರವರಿಗೂ ಅಕ್ರಮ ಸಂಬಂಧವಿದ್ದು, ಅಕ್ರಮ ಸಂಬಂಧಕ್ಕೆ ಆನಂದ್ ರವರು ಅಡ್ಡಿಯಾಗುತ್ತಾನೆಂದು ಚೈತ್ರಾಳಿಗೆ ಚಲಪತಿ ರವರ ಕುಮ್ಮಕ್ಕಿನಿಂದ ಚೈತ್ರಾ ರವರು ಪುಷ್ಟಿ, ನವೀನ್ ರವರಿಗೆ 1 ಲಕ್ಷ ಸುಪಾರಿ ಕೊಟ್ಟಿದ್ದು, ಆರೋಪಿ-2, ಪುಷ್ಟಿ, ಆ-3 ನವೀನ್ ರವರು ಮಾಲೂರು ಟೌನ್, ಬಾಲಾಜಿ ವೃತ್ತದಿಂದ ದ್ವಿಚಕ್ರ ವಾಹನ ನಂ-ಕೆ.ಎ-03, ಜೆವಿಕ್ಸ್-8365 ರಲ್ಲಿ ಮಾಸ್ತಿ-ಡಿ.ಎನ್.ದೊಡ್ಡಿ ರಸ್ತೆಯ ಕ್ರಾಸ್ ಬಳಿಗೆ ಹೋಗಿ ಕುಡಿಯನೂರು ಗ್ರಾಮದ ನೀಲಗಿರಿ ತೋಪಿನಲ್ಲಿ ಮೃತ ಆನಂದನಿಗೆ ಮದ್ಯ ಸೇವಿಸಿ, ಮದ್ಯದ ಬಾಟಲುಗಳಿಂದ ಹೊಡೆದು ಸಾಯಿಸಿ, ನಂತರ ಬೊಲೆರೋ ಕೆ.ಎ-53, ಎವಿ-5026 ವಾಹನದಲ್ಲಿ ಹಾಕಿಕೊಂಡು ನಂದುಗುಡಿ ಪೊಲೀಸ್ ಠಾಣಾ ಸರಹದ್ದಿನ ಗುಂಡಾಂಜನೇಯ ಸ್ವಾಮಿದೇವಾಲಯದ ಬಳಿ ಇರುವ ಕಲ್ಲು ಕ್ವಾರಿಯ ನೀರಿಗೆ ಸಾಕ್ಷಿಗಳನ್ನು ನಾಶಪಡಿಸಲು ಹಾಕಿದ್ದು, ಕೃತ್ಯ ನಡೆದ ಸ್ಥಳದ ಆಧಾರದ ಮೇರೆಗೆ ನೀಡಿದ ಕೇಸಿನಕಡತವನ್ನು ಪಡೆದು ಪ್ರಕರಣ ದಾಖಲಿಸಿರುತ್ತೆ. | ಪೂರ್ವ ಯೋಜಿತ ಕೊಲೆಗಳು ( ಕಡಿಜ ಕಟಚಿಟಟಿಟಿಟರಿ ) |
| 30 | ಮಾಲೂರು | ಮೊ.ಸಂ-22/2023<br>ಮತ್ತು<br>ಕಲಂ-302<br>ಐ.ಪಿ.ಸಿ | ದಿನಾಂಕ.20-01-2023 ರಂದು ಸಂಜೆ 5-00 ಗಂಟೆಯಲ್ಲಿ ನಾರಾಯಣಸ್ವಾಮಿ ರವರು ಠಾಣೆಗೆ ಹಾಜರಾಗಿ ನೀಡಿದ ದೂರಿನಲ್ಲಿ ನಾರಾಯಣಸ್ವಾಮಿ ರವರು 8 ವರ್ಷಗಳ ಹಿಂದೆ ತನ್ನ 4ನೇ ಮಗಳಾದ ಬೇಬಿ ರವರನ್ನು ಹಾಲಿವಾಸವಾಗಿರುವ ಚೊಕ್ಕಂಡಹಳ್ಳಿ ಗ್ರಾಮ, ಮಾಲೂರು ತಾಲ್ಲೂಕು ವಾಸಿ ವೇಣುಗೋಪಾಲ್ ರವರಿಗೆ ಕೊಟ್ಟು ಮದುವೆ ಮಾಡಿಕೊಟ್ಟಿದ್ದು, ಅವರಿಗೆ ದರ್ಶಿನಿ-4 ವರ್ಷ, 9 ತಿಂಗಳಿನ ಛಾಯ ಎಂಬ ಮಕ್ಕಳಿರುತ್ತಾರೆ. ಪಿರ್ಯಾಧಿ ಮಗಳು ಬೇಬಿ ರವರಿಗೆ ವೇಣುಗೋಪಾಲ್, ಅವರ ತಾಯಿ ನಾಗಭೂಷಣಮ್ಮ, ಮಾವ ಲಕ್ಷ್ಮಿನಾರಾಯಣ ರವರು ನಿಮ್ಮ ತವರು ಮನೆಯವರೊಂದಿಗೆ ವಾತನಾಡಬೇಡವೆಂತ ದೈಹಿಕವಾಗಿ, ಮಾನಸಿಕವಾಗಿ ಹಿಂಸೆ ನೀಡುತ್ತಿದ್ದು, ತವರು ಮನೆಗೂ ಕಳುಹಿಸಿಕೊಡದೆ ಹಿಂಸೆ ನೀಡುತ್ತಿದ್ದಾರೆಂತ ಪಿರ್ಯಾಧಿಗೆ ಬೇಬಿ ಹೇಳಿಕೊಂಡು ನೋವು ಪಡುತ್ತಿದ್ದಳು. ಈ ವಿಚಾರವಾಗಿ ಪಿರ್ಯಾಧಿ, ಅವರ ಹೆಂಡತಿ ಕಮಲಮ್ಮ, ಆನಂದ್ ರವರು ಮತ್ತು ಇತರರು ಬಂದು ವೇಣುಗೋಪಾಲ್, ಅವರ ತಂದೆ-ತಾಯಿಗೆ ತನ್ನ ಮಗಳನ್ನು ಚೆನ್ನಾಗಿ ನೋಡಿಕೊಳ್ಳಲು ಹೇಳಿದ್ದರೂ ಮತ್ತೆ-ಮತ್ತೆ ಅದೇ ರೀತಿ ಅವರು ಪಿರ್ಯಾಧಿಯ ಮಗಳನ್ನು ತವರು ಮನೆಗೆ ಕಳುಹಿಸಿಕೊಡದೆ ಹಾಗೂ ಛಾಯ ರವರ ಹೆಂಗಗೂ ಕಳುಹಿಸಿಕೊಡಲು ಕೇಳಿಕೊಂಡರೂ | ಗಂಡ ಹೆಂಡತಿ ವೈಷಮ್ಯ |

| | | | | |
|---|---|---|---|---|
| | | | ಕಳುಹಿಸಿಕೊಡದೆ ಏ ಬೇವರ್ಸಿ ಮುಂಡೇ ನಾವು ಹೇಳಿದಂತೆ ಕೇಳಿಕೊಂಡು ಬಿದ್ದಿರಬೇಕು. ಇಲ್ಲವಾದರೆ ನೀನು ಎಲ್ಲಿಯಾದರೂ ಹೋಗಿ ಸಾಯಿ ಎಂತ ಹೇಳಿ. ಸಾಯುವಂತಹ ದುಷ್ಪ್ರೇರಣಾತ್ಮಕ ಮಾತುಗಳನ್ನು ಆಡುತ್ತಿದ್ದರಿಂದ ದಿನಾಂಕ.19-01-2023 ರಂದು ಬೆಳಿಗ್ಗೆ 10-00 ಗಂಟೆಯಲ್ಲಿ ತನ್ನ ಇಬ್ಬರು ಮಕ್ಕಳನ್ನು ಕರೆದುಕೊಂಡು ಹೋಗಿ ಮಾಲೂರು ಕೆರೆಯ ನೀರಿನಲ್ಲಿ ಬಿದ್ದು, ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಈ ಬಗ್ಗೆ ಮುಂದಿನ ಕ್ರಮ ಜರುಗಿಸಲು ಕೋರಿದ್ದರ ಮೇರೆಗೆ ಠಾಣಾ ಮೊ.ಸಂ-21/2023, ಕಲಂ-498(ಎ), 306 ರೆ/ವಿ 34 ಐ.ಪಿ.ಸಿ ರೀತ್ಯಾ ಪ್ರಕರಣ ದಾಖಲಿಸಿಕೊಂಡಿರುತ್ತೆ. ಸದರಿ ಪ್ರಕರಣದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದ ಬೇಬಿ ಕೋಂ ವೇಣುಗೋಪಾಲ್ ರವರು ದಿನಾಂಕ.19-01-2023 ರಂದು ಮಧ್ಯಾಹ್ನ 12-30 ಗಂಟೆ ಸುಮಾರಿನಲ್ಲಿ ತನ್ನ ಇಬ್ಬರು ಮಕ್ಕಳಾದ ದರ್ಶಿನಿ-4 ವರ್ಷ, ಛಾಯ-9 ತಿಂಗಳ ಮಕ್ಕಳನ್ನು ಸಾಯಿಸುವ ಉದ್ದೇಶದಿಂದ ಮಾಲೂರು ಕೆರೆಯ ನೀರಿಗೆ ಬಿಸಾಡಿ ಕೊಲೆ ಮಾಡಿ, ತಾನು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ತಿಳಿದು ಬಂದ ಹಿನ್ನಲೆಯಲ್ಲಿ ಬೇಬಿ ಕೋಂ ವೇಣುಗೋಪಾಲ್ ರವರ ವಿರುದ್ಧ ಸಂಜೆ 6-00 ಗಂಟೆಯಲ್ಲಿ ಪ್ರಕರಣ ದಾಖಲಿಸಿಕೊಂಡಿರುತೆ | |
| 31 | ಮಾಲೂರು | ಮೊ.ಸಂ-138/2023 ಮತ್ತು ಕಲಂ-201.302 ಐಪಿಸಿ | ದಿನಾಂಕ 13/01/2023 ರಂದು ಅಭಿಷೇಕ್ ರವರು ತನ್ನ ತಂದೆ ಕಾಣೆಯಾಗಿರುವುದಾಗಿ ನಂದಗುಡಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು, ಈ ಸಂಭಂದವಾಗಿ ವಿಚರಣೆ ಮಾಡಿದಾಗ ಬೈರ್‍ನಹಳ್ಳಿ ಗ್ರಾಮದ ಪ್ರಕಾಶ್ ರವರ ಮೇಲೆ ಅನುಮಾನ ಇರುವುದಗಿ ತಿಳಿಸಿದ್ದ ಮೇರೆಗೆ ಪ್ರಕಾಶ್ ಭೈರ್‍ನಹಳ್ಳಿ ಗ್ರಾಮ ರವನ್ನು ನಂದಗುಡಿ ಠಾಣೆಯಲ್ಲಿ ವಿಚರಿಸಿದಾಗ ವಿಚರಣೆಯ ಸಮಯದಲ್ಲಿ ಪ್ರಕಾಶ್ ಹೆಂಡತಿಗೆ ಮತ್ತು ನಂದೀಶ್ ರವರಿಗೆ ಅಕ್ರಮ ಸಂಭಂದವಿದ್ದ ಕಾರಣ ನಂದೀಶ್ ರವರನ್ನು ಕೊಲೆ ಮಾಡಿ ಆರೋಪಿ ಜಮೀನಿನಲ್ಲಿ ಹೂತಿರುವುದಾಗಿ ತಿಳಿಸಿದ್ದರ ಮೇರೆಗೆ ಹೊಸಕೋಟೆ ಸಿಜೆ ಮತ್ತು ಜೆಎಮ್‌ಎಫ್‌ಸಿ ನ್ಯಾಯಾಲಯದ ಅನುಮತಿ ಪಡೆದು ಸರಹದ್ದಿನ ಆಧಾರದ ಮೇರೆಗ ಪ್ರಕರಣವನ್ನು ಮಾಲೂರು ಠಾಣೆಗೆ ವರ್ಗಾವಣೆ ಮಾಡಿರುತ್ತಾರೆ | ಅಕ್ರಮ ಸಂಬಂಧ/ಪ್ರೀತಿ ಕಾರಣಕ್ಕಾಗಿ ಕೊಲೆ |
| 32 | ಮಾಲೂರು | ಮೊ.ಸಂ-167/2023 ಕಲಂ 302.201.109 ರೆ/ವಿ 34 ಐಪಿಸಿ | ದಿನಾಂಕ 03/05/2023 ಪಿರ್ಯಾದಿ ಠಾಣೆಗೆ ಹಾಜರಗಿ ನೀಡಿದ ದೂರಿನ ಸಾರಾಂಶವೇನೆಂದರೆ ದಿನಾಂಕ 30/04/2023 ರಂದು ಪಿರ್ಯಾದಿದಾರರಿಗೆ ವೆಂಕಟಚಲಪತಿ ರವರು ಪೋನ್ ಮಾಡಿ ತಿಮ್ಮಪ್ಪನು ರಾತ್ರಿಯಿಂದ ಮನೆಯಲ್ಲಿ ಇಲ್ಲವೆಂದು ಈ ಬಗ್ಗೆ ಮಹದೇವಪುರ ಪೊಲೀಸ್ ಠಾಣೆಯಲ್ಲಿ ದೂರು ನೀಡಿರುವುದಾಗಿ ತಿಳಿಸಿದ್ದು ಪೊಲೀಸರು ವಿಜಿಯಮ್ಮನನ್ನು ಕೂಲಂಕುಶವಾಗಿ ವಿಚಾರ ಮಾಡಿದಾಗ ವಿಜಿಯಮ್ಮರವರಿಗೂ ಮತ್ತು ಪೆರುಮಾಳ್ ರವರಿಗೂ ಅಕ್ರಮ ಸಂಭಂದವಿದ್ದು ಈ ವಿಚಾರದಲ್ಲಿ ತನ್ನ ಗಂಡ ಅಡ್ಡಿ ಪಡಿಸುತ್ತಿದ್ದರಿಂದ ಪೆರುಮಾಳ್ ಮತ್ತು ವೆಂಕಾಟಚಲಪತಿ ರವರು ಕೊಲೆ ಮಾಡಿ ಮೃತ ದೇಹವನ್ನು ಇರಬನಹಳ್ಳಿ ಸಮೀಪ ಇರುವ ತೋಪಿನಲ್ಲಿ ಹಾಕಿರುವುದಾಗಿ ಕಾನೂನು ರೀತ್ಯ ಕಾನೂನು ರೀತ್ಯ ಕ್ರಮ ಜರುಗಿಸಲು ಕೋರಿ ದೂರು | ಪೂರ್ವ ಯೋಜಿತ ಕೊಲೆಗಳು |
| 33 | ಮಾಲೂರು | ಮೊ.ಸಂ- 273/2023 ಕಲಂ 323.324.504. 302 ರೆ/ವಿ 34 ಐಪಿಸಿ | ದಿನಾಂಕ 10/07/2023 ರಂದು ಬೆಳಗ್ಗೆ 9-15 ಗಂಟೆಗೆ ಪಿರ್ಯಾದಿ ಸುಭೋದ್‌ಕುಮಾರ್ ರವರು ಠಾಣೆಗ ಹಾಜರಾಗಿ ನೀಡಿದ ದೂರಿನ ಸಾರಾಂಶವೇನೆಂದರೆ ದಿನಾಂಕ 09-07-2023 ರಂದು ರಾತ್ರಿ 9-00 ಗಂಟೆಗೆ ಪಿರ್ಯಾದಿ ಊಟ ಮಾಡಿ ವಾಹನದಲ್ಲಿ ಮಲಗಿದ್ದಾಗ ಪಿರ್ಯಾದಿ ವಾಹನದ ಬಳಿ ಅಕ್ಕಪಕ್ಕದ ಲಾರಿಯವರು ಯಾವುದೋ ಕಾರಣಕ್ಕೆ ಗಲಾಟೆ ಮಾಡಿಕೊಳ್ಳುತ್ತಿದ್ದು ಪಿರ್ಯಾದಿ ಏಕೆ ಗಲಾಟೆ ಮಾಡಿಕೊಳ್ಳುವುದು ಎಂದು ಬಿಡಿಸುವಷ್ಟರಲ್ಲಿ ಆರೋಪಿಗಳು ಗಲಾಟೆ ಮಾಡಿ ಮೃತನನ್ನು ಹೊಡೆದು ಸಾಯಿಸಿರುವುದಾಗಿ ದೂರು | ವೈಯಕ್ತಿಕ ದ್ವೇಷ (ಕುಟುಂಬ. ಸಂಸಾರ. ಸ್ನೇಹಿತರು. ಕ್ಷುಲಕ್ಕ ಕಾರಣ ಇತ್ಯಾದಿ) |

| | | | | |
|---|---|---|---|---|
| 34 | ಮಾಲೂರು | ಮೊ ಸಂ 292/2023 ಕಲಂ 302 ಐಪಿಸಿ | ಪಿರ್ಯಾದಿ ನಾಸೀರ್ ಉಲ್ಲಾ ಖಾನ್ ರವರ ಮನೆಯಲ್ಲಿ ಬಾಡಿಗೆಗೆ ವಾಸವಿದ್ದ ರಫೀಕ್ ಅಹಮ್ಮದ್ ಮಶಾಲಜಿ ರವರು ಆತನ ಹೆಂಡತಿ ಷಹನಾಜ್ ಸುಮಾರು 3 ವರ್ಷಗಳಿಂದ ವಾಸವಾಗಿದ್ದು, ರಫೀಕ್ ಅಹಮ್ಮದ್ ಮಶಾಲಜಿ ರವರಿಗೆ ಪ್ರತಿದಿನ ಮದ್ಯಪಾನ ಮಾಡುವ ಅಭ್ಯಾಸವಿದ್ದು, ದಿನಾಂಕ: 18/07/2023 ರಂದು ರಾತ್ರಿ ಸುಮಾರು 8-00 ಗಂಟೆಯಲ್ಲಿ ರಫೀಕ್ ಅಹಮ್ಮದ್ ಮಶಾಲಜಿ ರವರು ಮನೆಗೆ ಬಂದಾಗ ಇವರ ಕುಟುಂಬದಲ್ಲಿ ಸಣ್ಣಪುಟ್ಟ ಗಲಾಟೆಗಳಾಗಿದ್ದು ರಫೀಕ್ ಅಹಮ್ಮದ್ ಮಶಲಾಜಿ ರವರು ಮದ್ಯಾಪಾನ ಮಾಡಿ ಕೋಪಗೊಂಡು ಆತನ ಹೆಂಡತಿ ಷಹನಾಜ್ ರವರನ್ನು ಮನೆಯಲ್ಲಿದ್ದ ಸ್ಟೀಲ್ ರಾಡ್ ನಿಂದ ತಲೆಗೆ ಮತ್ತು ಹಣೆಗೆ ತೀವ್ರ ರಕ್ತ ಗಾಯಗಳಾಗುವಂತೆ ಹೊಡೆದು ಕೊಲೆ ಮಾಡಿರುತ್ತಾನಂತ ದೂರು. | ಗಂಡ ಹೆಂಡತಿ ವೈಷಮ್ಯ |
| 35 | ಮಾಲೂರು | ಮೊ ಸಂ: 412/2023 ಕಲಂ 302 ರ/ವ 34 ಐಪಿಸಿ | ದಿನಾಂಕ: 27/09/2023 ರಂದು ವೈಯಾರೆಡ್ಡಿ ರವರು ಆತನ ಸ್ನೇಹಿತರಾದ ರವಿ ಬಿನ್, ಜಯಪ್ಪ, ಕೃಷ್ಣಮೂರ್ತಿ ಬಿನ್ ಲೇಟ್ ಚಂದ್ರಪ್ಪ, ಮಂಜುನಾಥ ಬಿನ್ ನಾರಾಯಣಸ್ವಾಮಿ ರವರುಗಳ ಜೊತೆ ಲಕ್ಕೂರು-ಚಿಕ್ಕತಿರುಪತಿ ರಸ್ತೆಯಲ್ಲಿರುವ ಅಶೋಕ ವೈನ್ಸ್ ನಲ್ಲಿ ಸಂಜೆ 6-15 ಗಂಟೆ ಸಮಯದಲ್ಲಿ ಮದ್ಯಪಾನ ಮಾಡುತ್ತಿದ್ದಾಗ ವೈಯಾರೆಡ್ಡಿರವರಿಗೆ ಫೋನ್ ಕರೆ ಬಂದಿದ್ದು, ಹಿಯರ್ ಫೋನ್ ನಲ್ಲಿ ಸ್ವಲ್ಪ ಹೊತ್ತು ಮಾತನಾಡಿ ನಂತರ ಹೊರಗೆ ಹೋಗಿ ಬರುವುದಾಗಿ ಹೇಳಿ ಹೋಗಿದ್ದು, ಗೇಟ್ ಬಳಿ ಹೋದಾಗ ಕೋಡಿಹಳ್ಳಿ ಗ್ರಾಮದ ನವೀನ್ ಮತ್ತು ಇತರರು ವೈಯಾರೆಡ್ಡಿ ರವರ ಕಣ್ಣಿಗೆ ಖಾರದ ಪುಡಿ ಎರಚಿ ಮಾರಕ ಆಯುಧ ಲಾಂಗ್ ನಿಂದ ವೈಯಾರಡ್ಡಿ ರವರ ತಲೆಯ ಹಿಂಬದಿಗೆ ಹೊಡೆದು ಕೊಲೆ ಮಾಡಿರುತ್ತಾರಂತ ದೂರು. | ಅಕ್ರಮ ಸಂಬಂಧ/ಪ್ರೀತಿ ಕಾರಣಕ್ಕಾಗಿ ಕೊಲೆ |
| 36 | ಮಾಲೂರು | ಮೊ.ಸಂ 445/2023 ಕಲಂ 302.120(ಬಿ)114 ರ/ವ 34 ಐಪಿಸಿ | ದಿನಾಂಕ 21/10/2023 ರಂದು ಸಂಜೆ 3.45 ಗಂಟೆಗೆ ಪಿರ್ಯಾದಿ ನೀಡಿದ ದೂರಿನ ಸಾರಾಂಶವೇನೆಂದರೆ ಆರೋಪಿಗಳಿಗೆ ಮತ್ತು ಮೃತ ಅನಿಲ್‌ಕುಮಾರ್ ರವರಿಗೆ ಗಣೇಶ ವಿಸರ್ಜನೆ.ಆರ್ಕೆಸ್ಟ್ರಾ ಮತ್ತು ರಸ್ತೆ ನಿರ್ಮಾಣ ವಿಚಾರದಲ್ಲಿ ಮನಸ್ತಾಪಗಳಿದ್ದು ದಿನಾಂಕ 21/10/2023 ರಂದು ಆರೋಪಿಗಳು ಮಾರಕಸ್ತ್ರಾಗಳಿಂದ ಕೊಚ್ಚಿ ಕೊಲೆ ಮಾಡಿರುವುದಾಗಿ | ರಾಜಕೀಯ ದ್ವೇಷ |